24 April 2026 Friday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಶಾಲೆಯಲ್ಲಿ ಶಿಕ್ಷಕರು ಕಲಿಸಿದ ಪಾಠಕ್ಕಿಂತ, ಜೀವನದಲ್ಲಿ ಮೋಸಗಾರರಿಂದ ಕಲಿತ ಪಾಠ ಹೆಚ್ಚು ನೆನಪಿನಲ್ಲಿ ಉಳಿಯುತ್ತವೆ!

▸▸ ಸ್ನೇಹಾ ಆನಂದ್


ಬಸವೇಶ್ವರ ವೃತ್ತ ನಾಮಫಲಕ ಅನಾವರಣ — ಪುಟ ಸಂ. 3


ಅಲ್ಪಸಂಖ್ಯಾತರ ಸೌಲಭ್ಯ ಅರ್ಹರಿಗೆ ತಲುಪಿಸಿ: ಜಿ.ಲಕ್ಷ್ಮೀಕಾಂತ ರೆಡ್ಡಿ — ಪುಟ ಸಂ. 2


ಶೀಘ್ರ ಮಹಿಳಾ ಮೀಸಲು ಜಾರಿಗೆ ಆಗ್ರಹಿಸಿ ಪ್ರತಿಭಟನೆ — ಪುಟ ಸಂ. 3

info.varthaman@gmail.com

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 154 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ಎಸ್ಸೆಸ್ಸೆಲ್ಸಿ: ಭರ್ಜರಿ ಫಲಿತಾಂಶ

## ಐತಿಹಾಸಿಕ ಶೇ.94.1ರಷ್ಟು ಉತ್ತೀರ್ಣ । ನಗರಕ್ಕಿಂತ ಗ್ರಾಮೀಣ ಮಕ್ಕಳೇ ಮೇಲುಗೈ

**ಬೆಂಗಳೂರು:** ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಈ ಬಾರಿ ರಾಜ್ಯದ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಭರ್ಜರಿ ಫಲಿತಾಂಶ ಬಂದಿದೆ. ಶೇ.94.10ರಷ್ಟು ದಾಖಲೆಯ ವಿದ್ಯಾರ್ಥಿಗಳು ಈ ಬಾರಿ ಉತ್ತೀರ್ಣರಾಗಿದ್ದಾರೆ. ಅದರಲ್ಲಿಯೂ ಎಂದಿನಂತೆ ಬಾಲಕಿಯರೇ ಮೇಲುಗೈ ಸಾಧಿಸಿದ್ದಾರೆ.

ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಗುರುವಾರ ಸುದ್ದಿಗೋಷ್ಠಿ ನಡೆಸಿ ಫಲಿತಾಂಶ ಪ್ರಕಟಿಸಿದರು. ಈ ಬಾರಿ ಪರೀಕ್ಷೆಗೆ ಹಾಜರಾಗಿದ್ದ 7,70,209 ವಿದ್ಯಾರ್ಥಿಗಳ ಪೈಕಿ, 7,24,794 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಇದರಲ್ಲಿ 3,77,922 (ಶೇ.96.18) ಬಾಲಕಿಯರು ಮತ್ತು 3,46,871 (ಶೇ.91.94) ಬಾಲಕರು ಉತ್ತೀರ್ಣರಾಗಿದ್ದಾರೆ. ಪುಟ 2ಕ್ಕೆ



### 7 ವಿದ್ಯಾರ್ಥಿಗಳು ಟಾಪರ್

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ 7 ವಿದ್ಯಾರ್ಥಿಗಳು 625ಕ್ಕೆ 625 ಅಂಕ ಪಡೆದು ಟಾಪರ್‌ಗಳಾಗಿ ಹೊರಹೊಮ್ಮಿದ್ದಾರೆ. ದಾವಣಗೆರೆಯ ಭರತ್, ಚಿಕ್ಕಮಗಳೂರಿನ ಬೃಂದಾ, ಬೆಂಗಳೂರು ಉತ್ತರದ ಧನುಷ್, ಉಡುಪಿಯ ಪ್ರೀತಂ, ಚಿಕ್ಕೋಡಿಯ ಪ್ರಾರ್ಥನಾ, ವಿಜಯಪುರದ ಸೌಜನ್ಯಾ, ರಾಯಚೂರಿನ ಸುಖದೇವ್ 625ರಲ್ಲಿ 625 ಅಂಕ ಪಡೆದಿದ್ದಾರೆ. 21 ವಿದ್ಯಾರ್ಥಿಗಳು 624 ಅಂಕ, 28 ವಿದ್ಯಾರ್ಥಿಗಳು 623 ಅಂಕ, 74 ವಿದ್ಯಾರ್ಥಿಗಳು 622 ಅಂಕ, 98 ವಿದ್ಯಾರ್ಥಿಗಳು 621 ಅಂಕ ಹಾಗೂ 150 ವಿದ್ಯಾರ್ಥಿಗಳು 620 ಅಂಕಗಳನ್ನ ಪಡೆದು ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ.

### ದಕ್ಷಿಣ ಕನ್ನಡ ಪ್ರಥಮ, ಮೈಸೂರಿಗೆ 20ನೇ ಸ್ಥಾನ

**ಬೆಂಗಳೂರು:** 2025–26ನೇ ಸಾಲಿನ ಎಸ್‌ಎಸ್‌ಎಲ್‌ಸಿ ಫಲಿತಾಂಶದಲ್ಲಿ ಈ ಬಾರಿಯೂ ದಕ್ಷಿಣ ಕನ್ನಡ ಜಿಲ್ಲೆ ಪ್ರಥಮ ಸ್ಥಾನ ಪಡೆದುಕೊಂಡಿದೆ. ಶೇ.98.40 ಫಲಿತಾಂಶದೊಂದಿಗೆ ದಕ್ಷಿಣ ಕನ್ನಡ ಪ್ರಥಮ ಪುಟ 3ಕ್ಕೆ

### ಹಿಂದಿಯಲ್ಲಿ 9,481 ಫೇಲ್

**ಬೆಂಗಳೂರು:** ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು, ಈ ಬಾರಿ ತೃತೀಯ ಭಾಷೆ ಹಿಂದಿಯಲ್ಲಿ 9,481 ಮಂದಿ ಫೇಲ್ ಆಗಿದ್ದಾರೆ. ಒಟ್ಟು 7,02,009 ಮಂದಿ ಹಿಂದಿ ಪರೀಕ್ಷೆ ಬರೆದಿದ್ದರು. ಈ ಪೈಕಿ 6,92,528 ಮಂದಿ ತೇರ್ಗಡೆಯಾಗಿದ್ದಾರೆ. ಕಳೆದ ವರ್ಷಕ್ಕೆ ಹೋಲಿಕೆ ಮಾಡಿದರೆ ಈ ಬಾರಿ ಪುಟ 3ಕ್ಕೆ

### ಈ ಬಾರಿ ಎರಡೇ ಪರೀಕ್ಷೆ

ಈ ಬಾರಿ ದ್ವಿತೀಯ ಪಿಯುಸಿಯಂತೆ ಉತ್ತಮ ಫಲಿತಾಂಶ ಬಂದಿರುವುದರಿಂದ ಮೂರನೇ ಪರೀಕ್ಷೆ ಇರುವುದಿಲ್ಲ. ಮೇ 18ರಿಂದ ಮೇ 25 ರ ವರೆಗೆ ಎರಡನೇ ಪರೀಕ್ಷೆ ನಡೆಯಲಿದೆ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಸ್ಪಷ್ಟಪಡಿಸಿದರು.

ವಿದ್ಯಾರ್ಥಿಗಳಿಗೆ ತಮ್ಮ ಅಂಕಗಳ ಬಗ್ಗೆ ಅತೃಪ್ತಿ ಅಥವಾ ಸಂದೇಹವಿದ್ದಲ್ಲಿ, ಅವುಗಳನ್ನು ಸರಿಪಡಿಸಿಕೊಳ್ಳಲು ಅವಕಾಶವನ್ನು ನೀಡುತ್ತದೆ. ಇದಕ್ಕಾಗಿ ಮಂಡಳಿಯು ಉತ್ತರ ಪತ್ರಿಕೆಗಳ ಸ್ಕ್ಯಾನ್ ಪ್ರತಿ, ಮರುಎಣಿಕೆ ಮತ್ತು ಮರುಮೌಲ್ಯಮಾಪನ ಪ್ರಕ್ರಿಯೆಗಳಿಗಾಗಿ ಅಧಿಕೃತ ವೇಳಾಪಟ್ಟಿಯನ್ನು ಬಿಡುಗಡೆ ಮಾಡಿದೆ. ವಿದ್ಯಾರ್ಥಿಗಳು ತಾವು ಬರೆದ ಉತ್ತರಗಳಿಗೆ ಮೌಲ್ಯಮಾಪಕರು ಎಷ್ಟು ಅಂಕಗಳನ್ನು ನೀಡಿದ್ದಾರೆ ಮತ್ತು ಯಾವುದೇ ಉತ್ತರ ಮೌಲ್ಯಮಾಪನವಾಗದೆ ಉಳಿದಿದೆಯೇ ಎಂದು ತಿಳಿಯಲು ಸ್ಕ್ಯಾನ್ ಪ್ರತಿಯನ್ನು ಪಡೆಯಬಹುದು. ಸಾಮಾನ್ಯ ಅರ್ಜಿ ಅವಧಿ ಏಪ್ರಿಲ್ 26ರವರೆಗೆ, ದಂಡ ಶುಲ್ಕದೊಂದಿಗೆ ಏ.28ರವರೆಗೆ (ಪ್ರತಿ ದಿನಕ್ಕೆ 100 ದಂಡ) ಪಾವತಿಸಬೇಕು.

ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸುವ ಮುನ್ನ ಸ್ಕ್ಯಾನ್ ಪ್ರತಿಯನ್ನು ಪಡೆಯುವುದು ಕಡ್ಡಾಯ. ನಿಗದಿತ ದಿನಾಂಕದ ನಂತರ ಬರುವ ಯಾವುದೇ ಅರ್ಜಿಗಳನ್ನು ಪುಟ 3ಕ್ಕೆ

## 440 ಅಂಕ ಬಂದರೂ ಬಾಲಕಿ ನೇಣಿಗೆ ಶರಣು

**ಮೈಸೂರು:** ನಂಜನಗೂಡಿನ ಶ್ರೀ ಗುರು ಮಲ್ಲೇಶ್ವರ ಖಾಸಗಿ ಶಾಲೆಯ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿನಿ ಪ್ರಥಮ ದರ್ಜೆಯಲ್ಲಿ ಪಾಸ್ ಆಗಿದ್ದರೂ ಕೂಡ ಕಡಿಮೆ ಅಂಕ ಬಂದಿದೆ ಎಂದು ಮನನೊಂದು ನೇಣಿಗೆ ಶರಣಾಗಿರುವ ದಾರುಣ ಘಟನೆ ನಡೆದಿದೆ.



ತಾಲೂಕಿನ ಕುರಹಟ್ಟಿ ಗ್ರಾಮದ ಮಂಜು ಮತ್ತು ಸವಿತಾ ದಂಪತಿ ಪುತ್ರಿ ತ್ರಿಶಾಲ ಮೃತ ಬಾಲಕಿ. ನಂಜನಗೂಡು ನಗರದ ಗುರುಮಲ್ಲೇಶ್ವರ ಖಾಸಗಿ ಪ್ರೌಢಶಾಲೆಯಲ್ಲಿ ಎಸ್ಸೆಸ್ಸೆಲ್ಸಿ ವಿದ್ಯಾಭ್ಯಾಸ ಮಾಡಿದ್ದ ಆಕೆ ಫಲಿತಾಂಶಕ್ಕಾಗಿ ಕಾಯುತ್ತಿದ್ದಳು. ಬರೋಬ್ಬರಿ 440 ಅಂಕಗಳನ್ನು ಗಳಿಸಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿದ್ದ ತ್ರಿಶಾಲ ನಾನು ಪರೀಕ್ಷೆಯನ್ನು ಡಿಸ್ಟಿಂಕ್ಷನ್ ಬರುವ ಮಟ್ಟಕ್ಕೆ ಬರೆದಿದ್ದೇನೆ. ಆದರೂ ಕಡಿಮೆ ಅಂಕ ಬಂದಿದೆ ಎಂದು ಮನನೊಂದು ಮನೆಯಲ್ಲಿ ಯಾರು ಇಲ್ಲದ ಸಮಯದಲ್ಲಿ ನೇಣಿಗೆ ಶರಣಾಗಿದ್ದಾಳೆ.

## ಜಮೀರ್ ಜೆಡಿಎಸ್‌ಗೆ ಹೋದರೆ ಡಿಸಿಎಂ ಮಾಡ್ತಾರಾ?

**ಬೆಂಗಳೂರು:** ಜೆಡಿಎಸ್‌ನಲ್ಲಿದ್ದ ನಮ್ಮನ್ನ ಕಾಂಗ್ರೆಸ್‌ಗೆ ಕರೆದುಕೊಂಡು ಬಂದವರು ಜಮೀರ್ ಅಹ್ಮದ್. ಈಗ ವಾಪಸ್ ಹೋದರೆ ಜೊತೆಗೆ ನಮ್ಮನ್ನು ಕರೆದುಕೊಂಡು ಹೋಗಬೇಕಲ್ಲವೇ? ಶಾಸಕ ಎಚ್.ಸಿ ಬಾಲಕೃಷ್ಣ ಪ್ರಶ್ನಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಮೀರ್ ಅಹ್ಮದ್ ವಾಪಸ್ ಜೆಡಿಎಸ್‌ಗೆ ಹೋದರೆ ಡಿಸಿಎಂ ಮಾಡುತ್ತಾರಾ? ಸುಮ್ಮನೆ ಖಾಲಿ ಕೈಯಲ್ಲಿ ಹೋದರೆ ಪ್ರಯೋಜನವೇನು? ಎಂದು ಲೇವಡಿ ಮಾಡಿದರು.

ಸಚಿವ ಜಮೀರ್ ಅಹ್ಮದ್ ಜೆಡಿಎಸ್ ಪಕ್ಷಕ್ಕೆ ವಾಪಸ್ ಹೋಗುವುದಾದರೆ ನಮ್ಮನ್ನೂ ಕರೆದುಕೊಂಡೇ ಹೋಗಬೇಕಾಗುತ್ತದೆ. ಆಂತರಿಕವಾಗಿ ಇಂತಹ ಬೆಳವಣಿಗೆ ಆಗಿದೆಯೋ, ಇಲ್ಲವೋ ಎಂಬುದು ಗೊತ್ತಿಲ್ಲ, ನಮ್ಮಜೊತೆ ಚರ್ಚಿಸಿಲ್ಲ ಎಂದರು.

ಜಮೀರ್ ಅವರಿಗೆ ನಾವು ಹೆಚ್ಚು ಆಪ್ತರಾಗಿದ್ದರೂ ಈ ಬಗ್ಗೆ ನಮ್ಮ ಜತೆ ಅವರು ಚರ್ಚಿಸಿಲ್ಲ. ಜೆಡಿಎಸ್‌ನಲ್ಲಿದ್ದಾಗ ಇಲ್ಲಿ ಏಕೋ ಸರಿ ಬರುತ್ತಿಲ್ಲ ಎಂದು ನಮ್ಮನ್ನು ಕಾಂಗ್ರೆಸ್‌ಗೆ ಕರೆದುಕೊಂಡು ಬಂದರು. ಈಗ ವಾಪಸ್ ಹೋಗುವುದಾದರೆ ಒಬ್ಬರೇ ಹೋಗಲು ಸಾಧ್ಯವಿಲ್ಲ ಎಂದು ಹೇಳಿದರು.

## ಇ–ಸ್ವತ್ತು: ಆನ್ ಲೈನ್ ಅರ್ಜಿ ಸಲ್ಲಿಕೆ: ಸಚಿವ ಪ್ರಿಯಾಂಕ್ ಖರ್ಗೆ

**ಬೆಂಗಳೂರು:** ಇನ್ನು ಮುಂದೆ ಇ–ಸ್ವತ್ತು ಪಡೆಯಲು ಗ್ರಾಮ ಒನ್, ಕರ್ನಾಟಕ ಒನ್ ಮತ್ತು ಬೆಂಗಳೂರು ಒನ್ ಸೇವಾ ಕೇಂದ್ರಗಳ ಮೂಲಕ ಅರ್ಜಿ ಸಲ್ಲಿಸಬಹುದು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮತ್ತು ಇ–ಆಡಳಿತ ಇಲಾಖೆಯ ಅಡಿಯಲ್ಲಿನ ನಾಗರಿಕ ಸೇವೆಗಳ ವಿದ್ಯುನ್ಮಾನ ವಿತರಣಾ ನಿರ್ದೇಶನಾಲಯ (ಇಡಿಸಿಎಸ್) ಮೂರು ವರ್ಷಗಳ ಅವಧಿಗೆ ಒಪ್ಪಂದ ಮಾಡಿಕೊಂಡಿವೆ. ಇ–ಆಡಳಿತ ನಿರ್ದೇಶಕ ರಾಹುಲ್ ರತ್ನಂ ಪಾಂಡೆ ಮತ್ತು ಇಡಿಸಿಎಸ್ ನಿರ್ದೇಶನಾಲಯದ ನಿರ್ದೇಶಕರಾದ ಅಪರ್ಣಾ ರಮೇಶ್ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ.

ಗ್ರಾಮೀಣಾಭಿವೃದ್ಧಿ ಇಲಾಖೆ ಅಭಿವೃದ್ಧಿಪಡಿಸಿರುವ ಇ–ಸ್ವತ್ತು ವ್ಯವಸ್ಥೆಗೆ ರಾಜ್ಯದಾದ್ಯಂತ ಇರುವ ಬಾಪೂಜಿ ಸೇವಾ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸಬಹುದು. ಈ ವ್ಯವಸ್ಥೆಯ ಬಗ್ಗೆ ನಾಗರಿಕ ಸೇವಾ ಕೇಂದ್ರಗಳ ನಿರ್ವಾಹಕರಿಗೆ



ತರಬೇತಿ ನೀಡಲಾಗುತ್ತದೆ. ನಿರ್ವಾಹಕರಿಗೆ ಪ್ರತ್ಯೇಕ ಲಾಗಿನ್ ಖಾತೆ ನೀಡಲಾಗುವುದು. ಸೇವೆಗಳ ಸಮನ್ವಯಕ್ಕೆ ಇಲಾಖೆಯ ವತಿಯಿಂದ ನೋಡಲ್ ಅಧಿಕಾರಿಗಳನ್ನೂ ನೇಮಿಸಲಾಗುವುದು ಎಂದು ಪ್ರಿಯಾಂಕ್ ತಿಳಿಸಿದ್ದಾರೆ.

ಹೊಸ ಖಾತಾ ಪಡೆಯಲು 45 ಶುಲ್ಕ ನಿಗದಿಪಡಿಸಲಾಗಿದೆ. ಇ–ಆಸ್ತಿ ಅರ್ಜಿಗೆ ಅಗತ್ಯ ದಾಖಲೆಗಳ ಪುಟ 3ಕ್ಕೆ

## ಸಿದ್ದರಾಮಯ್ಯ ಐಡಿಯಾಲಜಿ ಈಗ ಉಳಿದಿಲ್ಲ: ಸಚಿವ ಸೋಮಣ್ಣ ಟೀಕೆ

**ಮೈಸೂರು:** ಹಳೇ ಸಿದ್ದರಾಮಯ್ಯ ಅವರ ಐಡಿಯಾಲಜಿ ಈಗ ಉಳಿದಿಲ್ಲ. ಈಗಿನ ಸಿದ್ದರಾಮಯ್ಯ ಕೇವಲ ಅಧಿಕಾರಕ್ಕಾಗಿ ಇರುವವರು ಎಂದು ಕೇಂದ್ರ ಸಚಿವ ವಿ.ಸೋಮಣ್ಣ ಟೀಕಿಸಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಹಾಗೂ ನಾನು ಒಟ್ಟಿಗೆ ಕೆಲಸ ಮಾಡಿದವರು. ಅವರನ್ನು ಹತ್ತಿರದಿಂದ ಕಂಡಿದ್ದೇನೆ. ಅವರಿಗೆ ನಿಜವಾದ ಕಾಳಜಿ ಇದ್ದರೆ ಮಹಿಳಾ ಮೀಸಲು ಬಗ್ಗೆ ತಮ್ಮ ನಾಯಕರಿಗೆ ತಿಳಿಹೇಳಬೇಕು ಎಂದು ಸವಾಲು ಹಾಕಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ವಯಸ್ಸಾಯಿತು. ಅಂತಹವರು ಪ್ರಧಾನಿ ನರೇಂದ್ರ ಮೋದಿ ಬಗ್ಗೆ ಕೆಳಮಟ್ಟದ ಭಾಷೆ ಬಳಸಿದ್ದು ಸರಿಯಲ್ಲ. ಅವರು ಕ್ಷಮೆಯಾಚನೆ ಮಾಡಬೇಕು. ಬಾಯಿಚಪಲಕ್ಕೆ ಮಾತನಾಡುವುದು ಸರಿಯಲ್ಲ ಎಂದು ಟೀಕಿಸಿದರು.

ಮಹಿಳಾ ಮೀಸಲು ಮಸೂದೆ ವಿರೋಧಿಸುವ



ಮೂಲಕ ಕಾಂಗ್ರೆಸ್ ಹಾಗೂ ಮಿತ್ರಪಕ್ಷಗಳು ತಮ್ಮ ಶವಪೆಟ್ಟಿಗೆಯ ಮೊಳೆಯನ್ನು ತಾವೇ ಹೊಡೆದುಕೊಳ್ಳುತ್ತಿವೆ. ದೇಶದ ನಾರಿಯರು ತಕ್ಕ ಪಾಠ ಕಲಿಸುವ ಕಾಲ ದೂರವಿಲ್ಲ. ಮೋದಿ ವೈಯಕ್ತಿಕ ಹೆಸರಿನ ಕಾರಣಕ್ಕೆ ಈ ಮೀಸಲಾತಿ ಜಾರಿಗೆ ತರುತ್ತಿಲ್ಲ. ಅವರಿಗೆ ಅದರ ಅಗತ್ಯವೂ ಇಲ್ಲ. ಸೂರ್ಯ ಚಂದ್ರರು ಇರುವ ತನಕ ಅವರ ಹೆಸರು ಶಾಶ್ವತವಾಗಿ ಇರುತ್ತದೆ ಎಂದು ಸೋಮಣ್ಣ ಅಭಿಪ್ರಾಯಪಟ್ಟರು.

## ಮಾಧುರಿಗೆ ಚುಂಚಶ್ರೀಗಳ ಆಶೀರ್ವಾದ




**ಮೈಸೂರು:** ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಇಲವಾಲದಲ್ಲಿರುವ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಎಸ್.ಎಸ್.ಎಲ್.ಸಿ.ಯಲ್ಲಿ 625 ಅಂಕಗಳಿಗೆ 624 ಅಂಕಗಳನ್ನು ಗಳಿಸಿರುವ ಕೂರ್ಗಳ್ಳಿ ಗ್ರಾಮದ ನಿವಾಸಿ ಸರಿತಾ ರವರ ಪುತ್ರಿ ಕು.ಮಾಧುರಿಯವರಿಗೆ ಶ್ರೀ ನಿರ್ಮಲಾನಂದನಾಥಸ್ವಾಮೀಜಿರವರು ಆಶೀರ್ವಾದಸಿದರು.

ಈ ಸಂದರ್ಭದಲ್ಲಿ ಕ್ಷೇತ್ರದ ಶಾಸಕರಾದ ಜಿ.ಟಿ.ದೇವೇಗೌಡರು ವಿದ್ಯಾರ್ಥಿನಿಗೆ ಅಭಿನಂದಿಸಿದರು. ಡಿ.ಡಿ.ಪಿ.ಐ. ಉದಯ್ ಕುಮಾರ್, ಬಿ.ಇ.ಒ.ಪ್ರಕಾಶ್ ಸೇರಿದಂತೆ ಹಲವಾರು ಅಧಿಕಾರಿಗಳು ಹಾಜರಿದ್ದರು

## ಕೆಸರಿನಿಂದ ರಕ್ಷಿಸಿದ್ದ ಕಾಡಾನೆ ಸಾವು

**ಚಾಮರಾಜನಗರ:** ನೀರು ಕುಡಿಯಲು ಬಂದು ಕೆಸರಿನಲ್ಲಿ ಸಿಲುಕಿದ್ದ ಕಾಡಾನೆ ಮೂರು ದಿನಗಳ ಬಳಿಕ ಸಾವನ್ನಪ್ಪಿರುವ ಘಟನೆ ಹನೂರು ತಾಲೂಕಿನ ಉಡುತೊರೆಹಳ್ಳದ ಜಲಾಶಯದ ಬಳಿ ನಡೆದಿದೆ.

ಬಿಸಿಲಿನ ಬೇಗೆ ತಣಿಸಿಕೊಳ್ಳಲು ಉಡುತೊರೆಹಳ್ಳ ಜಲಾಶಯಕ್ಕೆ ನೀರು ಕುಡಿಯಲು ಬಂದಿದ್ದ ಕಾಡಾನೆ ಕೆಸರಿನಲ್ಲಿ ಸಿಲುಕಿಕೊಂಡಿತ್ತು. ಅರಣ್ಯ ಸಿಬ್ಬಂದಿ ಆನೆಯನ್ನ ರಕ್ಷಣೆ ಮಾಡಿ ಹೊರತಂದಿದ್ದರು. ಆದರೂ ನಿತ್ರಾಣಗೊಂಡ ಸ್ಥಿತಿಯಲ್ಲಿದ್ದ ಪುಟ 3ಕ್ಕೆ



## ಸಿಇಟಿ: ವಿದ್ಯಾರ್ಥಿನಿಯರ ಮೂಗುತಿಗೆ ಗಮ್ ಟೇಪ್!


**ಚಿಕ್ಕಮಗಳೂರು:** ಸಿಇಟಿ ಪರೀಕ್ಷೆ ಬರೆಯಲು ಬಂದಿದ್ದ ವಿದ್ಯಾರ್ಥಿನಿಯರ ಮೂಗುತಿಗೆ ಗಮ್ ಟೇಪ್ ಅಂಟಿಸಿ ಮುಚ್ಚಿಹಾಕಿದ ಘಟನೆ ಚಿಕ್ಕಮಗಳೂರು ನಗರದ ಎಂ.ಇ.ಎಸ್ ಕಾಲೇಜಿನಲ್ಲಿ ನಡೆದಿದೆ.

ಸಿಇಟಿ ಪರೀಕ್ಷೆ ಬರೆಯಲು ಬಂದ ಎಲ್ಲಾ ವಿದ್ಯಾರ್ಥಿನಿಯರ ಮೂಗುತಿಗೆ ಸಿಬ್ಬಂದಿ ಗಮ್ ಟೇಪ್ ಅಂಟಿಸಿ, ಪರೀಕ್ಷಾ ಪುಟ 3ಕ್ಕೆ



## ದೇವೇಗೌಡರಿಗೆ ಬಸವಶ್ರೀ, ಕರಜಗಿಗೆ ವಚನಶ್ರೀ ಪ್ರಶಸ್ತಿ

**ಬೆಂಗಳೂರು:** ಬಸವ ವೇದಿಕೆ ವತಿಯಿಂದ ನೀಡುವ 2026ನೇ ಸಾಲಿನ ಬಸವಶ್ರೀ ಪ್ರಶಸ್ತಿಗೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಹಾಗೂ ವಚನ ಸಾಹಿತ್ಯಶ್ರೀ ಪ್ರಶಸ್ತಿಗೆ ಶಿಕ್ಷಣ ತಜ್ಞ ಗುರುರಾಜ ಕರಜಗಿ ಅವರನ್ನು ಆಯ್ಕೆ ಮಾಡಲಾಗಿದೆ.



ಬಸವ ವೇದಿಕೆ ಅಧ್ಯಕ್ಷ ಸಿ.ಸೋಮಶೇಖರ್ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬಸವಶ್ರೀ ಪ್ರಶಸ್ತಿಯು ಬಸವಣ್ಣನವರ ಪುತ್ಥಳಿ, ಸ್ಮರಣಿಕೆ ಒಳಗೊಂಡಿದೆ. ವಚನ ಸಾಹಿತ್ಯಶ್ರೀ ಪ್ರಶಸ್ತಿಯು 10 ಸಾವಿರ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ. ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಏ.27ರಂದು ಸಂಜೆ ಆಯೋಜಿಸಿರುವ ಬಸವ ಜಯಂತಿ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಸುತ್ತೂರು ಪುಟ 3ಕ್ಕೆ

## ಚುನಾವಣೆ ನಂತರವೂ ಇಂಧನ ಬೆಲೆ ಏರಿಕೆ ಮಾಡಲ್ಲ: ಕೇಂದ್ರ

**ನವದೆಹಲಿ:** ಪಂಚ ರಾಜ್ಯಗಳ ಚುನಾವಣೆ ನಂತರವೂ ದೇಶದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆ ಮಾಡಲ್ಲ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಈ ಮೂಲಕ ವದಂತಿಗಳಿಗೆ ಕೇಂದ್ರ ಬ್ರೇಕ್ ಹಾಕಿದೆ.

ಚುನಾವಣೆ ನಂತರ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ 25–28 ರೂ. ಏರಿಕೆಯಾಗುವ ಸಾಧ್ಯತೆ ಇದೆ ಎಂಬ ವರದಿಗಳನ್ನು ಸರ್ಕಾರ ತಳ್ಳಿಹಾಕಿದೆ. ಅಂತಹ ಯಾವುದೇ ದರ ಏರಿಕೆ ಬಗ್ಗೆ ಚಿಂತನೆ ಇಲ್ಲ ಎಂದು ಸ್ಪಷ್ಟಪಡಿಸಿದೆ.

ಈ ಕುರಿತು ಎಕ್ಸ್ ಖಾತೆಯಲ್ಲಿ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ಮಾಹಿತಿ ಹಂಚಿಕೊಂಡಿದೆ. ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಯಾಗುವ ಸಾಧ್ಯತೆ ಇದೆ ಎಂದು ಸುದ್ದಿ ಆಗುತ್ತಿದೆ. ಅಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಪರಿಗಣನೆಯಲ್ಲಿಲ್ಲ. ಇಂತಹ ಸುದ್ದಿಗಳು ನಾಗರಿಕರಲ್ಲಿ ಭಯ ಹುಟ್ಟಿಸಲು ಮಾಡಲಾಗಿದೆ. ಇವು ದುರುದ್ದೇಶ ಹಾಗೂ ದಾರಿತಪ್ಪಿಸುವ ಕೆಲಸ ಮಾಡುತ್ತಿವೆ ಎಂದು ತಿಳಿಸಿದೆ.




ಇನ್ನೂ ಎಲ್ಲಾ ರಿಫೈನರಿಗಳು ಸಾಕಷ್ಟು ಕಚ್ಚಾ ತೈಲಿನೊಂದಿಗೆ ಹೆಚ್ಚಿನ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿವೆ. ದೇಶದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಹೆಚ್ಚಿನ ಲಭ್ಯತೆಗಾಗಿ ಸಾಕಷ್ಟು ಕೆಲಸ ನಿರ್ವಹಣೆ ಮಾಡಲಾಗುತ್ತಿದೆ ಎಂದು ಸರ್ಕಾರ ದೃಢಪಡಿಸಿದೆ.

## ಸಿಎಂಗೆ ಮಾಟ: ರಾಜಣ್ಣ ಸಿಬಿಐ ತನಿಖೆ ಮಾಡಿಸಲಿ!

**ರಾಮನಗರ:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಯಾರೊ ಮಾಟಮಂತ್ರ ಮಾಡಿಸಿರುವುದರಿಂದ ಅಸಹಾಯಕರಾಗಿದ್ದಾರೆ ಎಂದು ಶಾಸಕ ಕೆ.ಎನ್.ರಾಜಣ್ಣ ಹೇಳಿದ್ದಾರೆ. ಈ ಬಗ್ಗೆ ರಾಜಣ್ಣ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಸಿಬಿಐ ತನಿಖೆ ಮಾಡಿಸಲಿ ಎಂದು ಶಾಸಕ ಎಚ್.ಸಿ.ಬಾಲಕೃಷ್ಣ ವ್ಯಂಗ್ಯವಾಡಿದರು.

ನಗರದಲ್ಲಿ ಗುರುವಾರ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಸಿದ್ದರಾಮಯ್ಯ ಅವರು ಅಸಹಾಯಕರಾಗಿದ್ದಾರೆ ಎಂದು ನನಗಂತೂ ಅನ್ನಿಸಿಲ್ಲ. ಅವರು ಎಂದಿನಂತೆ ಕೆಲಸ ಮಾಡುತ್ತಿದ್ದಾರೆ. ಮಾಟಮಂತ್ರ ಮಾಡಿಸಿದ್ದಾರೋ ಇಲ್ಲವೊ ಪುಟ 3ಕ್ಕೆ



## ಬೆಟ್ಟಿಂಗ್ ಪ್ರಕರಣ: ಸಚಿವ ಪರಮೇಶ್ವರ್‌ಗೆ ರಿಲೀಫ್

**ಬೆಂಗಳೂರು:** ಕಬಡ್ಡಿ ಪಂದ್ಯಾವಳಿಯಲ್ಲಿ 500 ರೂ. ಬೆಟ್ ಕಟ್ಟಿ ಸೋತಿದ್ದೆ ಎಂದು ಹೇಳಿಕೆ ನೀಡಿದ್ದ ಗೃಹ ಸಚಿವ ಜಿ.ಪರಮೇಶ್ವರ್ ವಿರುದ್ಧ ದಾಖಲಾಗಿದ್ದ ಪ್ರಕರಣಕ್ಕೆ ಹೈಕೋರ್ಟ್ ಗುರುವಾರ ತಡೆಯಾಜ್ಞೆ ನೀಡಿದೆ. ಇದರಿಂದ ಪರಮೇಶ್ವರ್ ಅವರಿಗೆ ರಿಲೀಫ್ ಸಿಕ್ಕಂತಾಗಿದೆ.

ಬೆಂಗಳೂರಿನ 42ನೇ ಎಸಿಜೆಎಂ ನ್ಯಾಯಾಲಯ ಪರಮೇಶ್ವರ್ ಅವರ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸುವಂತೆ ಆದೇಶ ಹೊರಡಿಸಿತ್ತು. ಇದನ್ನು ಪ್ರಶ್ನಿಸಿ ಪರಮೇಶ್ವರ್ ಅವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸುನಿಲ್ ದತ್ ಯಾದವ್ ಅವರಿದ್ದ ಹೈಕೋರ್ಟ್ ಪೀಠ, ತಮಾಷೆಗಾಗಿ ಮಾತನಾಡಿದರೂ ಕೇಸ್ ಹಾಕಬಹುದೇ? ಉದ್ದೇಶಪೂರ್ವಕವಾಗಿ ಇಂತಹ ಹೇಳಿಕೆ ನೀಡಿದಂತೆ ಕಾಣುತ್ತಿಲ್ಲ. ತನಿಖೆಗೆ ಆದೇಶಿಸುವ ಮುನ್ನ ಪೊಲೀಸರಿಂದ ವಿವರಣೆ ಪಡೆಯಬೇಕಿತ್ತು ಎಂದು ಅಭಿಪ್ರಾಯ ಪಟ್ಟಿದೆ. ಪ್ರಕರಣಕ್ಕೆ ತಡೆ ನೀಡಿ ವಿಚಾರಣೆಯನ್ನು ಮುಂದೂಡಿದೆ.



ತುಮಕೂರಿನಲ್ಲಿ ನಡೆದ ಕಬಡ್ಡಿ ಪಂದ್ಯದ ವೇಳೆ ನಾನು ಜಿಲ್ಲಾಧಿಕಾರಿ ಜತೆ ಪುಟ 3ಕ್ಕೆ

## ಮೊದಲನೇ ಪುಟದಿಂದ

### ದಕ್ಷಿಣ ಕನ್ನಡ ಪ್ರಥಮ, ಮೈಸೂರಿಗೆ 20ನೇ ಸ್ಥಾನ

ಸ್ಥಾನ ಪಡೆದಿದೆ. ಕಳೆದ ಬಾರಿ ಶೇ.94.41 ಫಲಿತಾಂಶ ಪಡೆದು ರಾಜ್ಯಕ್ಕೆ ಪ್ರಥಮ ಸ್ಥಾನ ಬಂದಿತ್ತು.

ಕಳೆದ ಬಾರಿ ಶೇ.93.94 ಫಲಿತಾಂಶ ಪಡೆದಿದ್ದ ಉಡುಪಿ ಜಿಲ್ಲೆ ಈ ಬಾರಿ 98.18 ಪಡೆದು ರಾಜ್ಯಕ್ಕೆ 2ನೇ ಸ್ಥಾನ ಪಡೆದಿದೆ. 2024–2025 ರಲ್ಲಿ 56.89 ಫಲಿತಾಂಶ ಪಡೆದಿದ್ದ ಕಲಬುರಗಿ ಈ ಬಾರಿ ಶೇ.85.06 ಫಲಿತಾಂಶದೊಂದಿಗೆ ಕೊನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿದೆ.

ಈ ಬಾರಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಹಾಸನ 4ನೇ ಸ್ಥಾನ ಮತ್ತು ಮಂಡ್ಯ 5ನೇ ಸ್ಥಾನಕ್ಕೇರಿವೆ. ಆದರೆ, ಮೈಸೂರು 20ನೇ ಸ್ಥಾನ, ಚಾಮರಾಜನಗರ 30ನೇ ಸ್ಥಾನಕ್ಕೆ ಕುಸಿದಿವೆ.

### ಎಸ್ಸೆಸ್ಸೆಲ್ಸಿ: ಭರ್ಜರಿ ಫಲಿತಾಂಶ

ಈ ಬಾರಿಯೂ ಬಾಲಕಿಯರೇ ಮೇಲುಗೈ ಸಾಧಿಸಿದ್ದರೂ, ಬಾಲಕರ ಫಲಿತಾಂಶದಲ್ಲಿ ಮಹತ್ತರ ಬದಲಾವಣೆ ಕಂಡುಬಂದಿದೆ ಎಂದು ತಿಳಿಸಿದರು.

ಈ ಬಾರಿ ನಗರ ಭಾಗದ 3,05,533 (93.2) ವಿದ್ಯಾರ್ಥಿಗಳು ಮತ್ತು ಗ್ರಾಮೀಣ ಭಾಗದ 4,19,261 (94.80) ವಿದ್ಯಾರ್ಥಿಗಳು ಪಾಸ್ ಆಗಿದ್ದಾರೆ. ಈ ಪೈಕಿ 68,207 ಮಕ್ಕಳು ಎ+, 1,30,403 ಮಕ್ಕಳು ಎ' ಗ್ರೇಡ್ (ಮಾನ್ಯತೆ) ಪಡೆದುಕೊಂಡಿದ್ದಾರೆ. 1,40,963 ವಿದ್ಯಾರ್ಥಿಗಳು ಬಿ+, 1,42,645 ಮಕ್ಕಳು ಬಿ ಮಾನ್ಯತೆ ಪಡೆದರೆ, 1,28,722 ಮಕ್ಕಳು 1,13,854 ಮಕ್ಕಳು ಸಾಮಾನ್ಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ ಎಂದು ವಿವರಿಸಿದರು.

### ದೇವೇಗೌಡರಿಗೆ ಬಸವಶ್ರೀ, ಕರಜಗಿಗೆ ವಚನಶ್ರೀ ಪ್ರಶಸ್ತಿ

ಮಠದ ಪೀಠಾಧ್ಯಕ್ಷ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು ಎಂದು ತಿಳಿಸಿದರು.

### ಹಿಂದಿಯಲ್ಲಿ 9,481 ಫೇಲ್

ಹಿಂದಿಯಲ್ಲಿ 98.7 ಫಲಿತಾಂಶ ಪ್ರಕಟವಾಗಿದೆ. ಕಳೆದ ವರ್ಷ 5,99,859 ಮಂದಿ ಪರೀಕ್ಷೆ ಬರೆದಿದ್ದರು. 75,792 ಮಂದಿ ಫೇಲ್ ಆಗುವ ಮೂಲಕ 87.4 ಫಲಿತಾಂಶ ದಾಖಲಾಗಿತ್ತು. ತೃತೀಯ ಭಾಷೆ ಅರೆಬಿಕ್, ಕೊಂಕಣಿ, ಸಂಸ್ಕೃತ, ಮರಾಠಿಯಲ್ಲಿ ಯಾರೂ ಫೇಲ್ ಆಗಿಲ್ಲ. ಇಂಗ್ಲಿಷ್ 1,180, ಹಿಂದಿ ಎನ್‌ಸಿಆರ್‌ಟಿ 6, ತುಳು 1, ಉರ್ದುವಿನಲ್ಲಿ 6 ಮಂದಿ ಫೇಲ್ ಆಗಿದ್ದಾರೆ.

### ಈ ಬಾರಿ ಎರಡೇ ಪರೀಕ್ಷೆ

ಮಂಡಳಿ ಪುರಸ್ಕರಿಸುವುದಿಲ್ಲ. ಒಮ್ಮೆ ಪಾವತಿಸಿದ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂತಿರುಗಿಸಲಾಗುವುದಿಲ್ಲ. ಅರ್ಜಿ ಸಲ್ಲಿಸುವಾಗ ವಿದ್ಯಾರ್ಥಿಯ ನೋಂದಣಿ ಸಂಖ್ಯೆ ಮತ್ತು ವಿಷಯದ ಕೋಡ್ ಅನ್ನು ಸರಿಯಾಗಿ ನಮೂದಿಸಬೇಕು ಎಂದು ಸೂಚಿಸಲಾಗಿದೆ.

### ಸಿಇಟಿ: ವಿದ್ಯಾರ್ಥಿನಿಯರ ಮೂಗುತಿಗೆ ಗಮ್ ಟೇಪ್!

ಕೇಂದ್ರದೊಳಗೆ ಕಳುಹಿಸಿದ್ದಾರೆ. ಆವರಣದಲ್ಲಿ ಬಂದ ವಿದ್ಯಾರ್ಥಿನಿಯರ ಮೂಗುತಿಗೆ ಗಮ್ ಟೇಪ್ ಅಂಟಿಸಿ ಬಳಿಕ ಒಳಗೆ ಕಳುಹಿಸಿದರು. ಸಿಇಟಿ ಪರೀಕ್ಷೆಯಲ್ಲಿ ಅಕ್ರಮ ತಡೆಯುವ ಉದ್ದೇಶದಿಂದ ಕೆಇಎ ಈಗಾಗಲೇ ಹಲವಾರು ಮುನ್ನೆಚ್ಚರಿಕೆ ಕ್ರಮ ಕೈಗೊಂಡಿದೆ. ಸಿಸಿಟಿವಿ ಕ್ಯಾಮರಾ, ಮುಖ ಚಹರೆ ಪತ್ತೆ ಸೇರಿದಂತೆ ಹಲವು ಕ್ರಮ ಕೈಗೊಂಡಿದೆ. ಆದರೆ ಈ ಕ್ರಮ ಪೋಷಕರ ಆಕ್ರೋಶಕ್ಕೆ ಕಾರಣವಾಗಿದೆ.

### ಕೆಸರಿನಿಂದ ರಕ್ಷಿಸಿದ್ದ ಕಾಡಾನೆ ಸಾವು

ಆನೆಗೆ ಕಳೆದ ಮೂರು ದಿನಗಳಿಂದ ಚಿಕಿತ್ಸೆ ನೀಡಲಾಗುತ್ತಿತ್ತು. ಆದರೆ ಚಿಕಿತ್ಸೆಗೆ ಸ್ಪಂದಿಸದೇ ಆನೆ ಸಾವನ್ನಪ್ಪಿದೆ.

ಅರಣ್ಯ ಪ್ರದೇಶದಲ್ಲಿ ಬೇಸಿಗೆ ಹಿನ್ನೆಲೆಯಲ್ಲಿ ಪ್ರಾಣಿಗಳಿಗೆ ಎದುರಾಗಬಹುದಾದ ಕುಡಿವ ನೀರಿನ ಸಮಸ್ಯೆ ನೀಗಿಸುವ ನಿಟ್ಟಿನಲ್ಲಿ ಅರಣ್ಯ ಇಲಾಖೆ ಕ್ರಮಕ್ಕೆ ಮುಂದಾಗಿದೆ. ಇದರ ನಡುವೆಯೂ ವನ್ಯಪ್ರಾಣಿಗಳು ನೀರಿಗಾಗಿ ಪರಿತಪಿಸುವಂತಾಗಿದೆ.

### ಇ–ಸ್ವತ್ತು: ಆನ್ ಲೈನ್ ಅರ್ಜಿ ಸಲ್ಲಿಕೆ: ಪ್ರಿಯಾಂಕ್

ಸ್ಕ್ಯಾನಿಂಗ್ ಮತ್ತು ಅಪ್‌ಲೋಡ್ ಮಾಡಲು ಪ್ರತಿ ಪುಟಕ್ಕೆ 5 ರೂ. ಪಾವತಿಸಬೇಕು. ಎಲ್ಲ ನಾಗರಿಕ ಸೇವಾ ಕೇಂದ್ರಗಳು ವರ್ಷದ ಎಲ್ಲ ದಿನಗಳು ಬೆಳಿಗ್ಗೆ 8 ಗಂಟೆಯಿಂದ ಸಂಜೆ 7 ಗಂಟೆಯವರೆಗೆ ಕಾರ್ಯನಿರ್ವಹಿಸಲಿವೆ ಎಂದು ತಿಳಿಸಿದ್ದಾರೆ.

### ಬೆಟ್ಟಿಂಗ್ ಪ್ರಕರಣ: ಸಚಿವ ಪರಮೇಶ್ವರ್‌ಗೆ ರಿಲೀಫ್

500 ಬೆಟ್ಟಿಂಗ್ ಕಟ್ಟಿ ಸೋತಿದ್ದೆ ಎಂದು ಪರಮೇಶ್ವರ್ ತಮಾಷೆಯಾಗಿ ಹೇಳಿದ್ದರು. ಆದರೆ ಇದನ್ನು ಗಂಭೀರವಾಗಿ ಪರಿಗಣಿಸಿದ ಎಚ್.ಆರ್.ನಾಗಭೂಷಣ್ ಎಂಬುವರು ಖಾಸಗಿ ದೂರು ಸಲ್ಲಿಸಿದ್ದರು. ವಿಚಾರಣೆ ನಡೆಸಿದ್ದ ಕೋರ್ಟ್ ಈ ಸಂಬಂಧ ಎಫ್ ಐಆರ್ ದಾಖಲಿಸಿ ತನಿಖೆ ನಡೆಸುವಂತೆ ಕೊಡಿಗೇಹಳ್ಳಿ ಪೊಲೀಸರಿಗೆ ಸೂಚಿಸಿತ್ತು.

### ಸಿಎಂಗೆ ಮಾಟ: ರಾಜಣ್ಣ ಸಿಬಿಐ ತನಿಖೆ ಮಾಡಿಸಲಿ!

ಎಂಬುದು ರಾಜಣ್ಣ ಅವರಿಗೇ ಗೊತ್ತು. ಮಾಟಮಂತ್ರದ ಬಗ್ಗೆ ನನಗಂತು ನಂಬಿಕೆ ಇಲ್ಲ. ಹಾಗಾಗಿ, ರಾಜಣ್ಣ ಅವರು ಈ ವಿಷಯದ ಕುರಿತು ಸಿಬಿಐ ತನಿಖೆ ಮಾಡಿಸಲಿ. ಆಗ ನಿಜ ಗೊತ್ತಾಗುತ್ತದೆ ಎಂದು ಹೇಳಿದರು.



ಹುಣಸೂರು ತಾಲೂಕಿನ ದರ್ಗಾ ರತ್ನಪುರಿ ಓಂ ಶ್ರೀ ಸಾಯಿ ಪಬ್ಲಿಕ್ ಸ್ಕೂಲ್ ವಿದ್ಯಾರ್ಥಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 596 ಅಂಕ ದೊಂದಿಗೆ ಶಾಲೆಗೆ ಟಾಪರ್ ಆಗಿದ್ದು ವಿದ್ಯಾರ್ಥಿಯನ್ನು ಶಾಲಾ ಆಡಳಿತ ಮಂಡಳಿಯಿಂದ ಗೌರವಿಸಲಾಯಿತು. ಮುಖ್ಯೋ ಪಾಧ್ಯಾಯರಾದ ರಾಜೇಶ್ವರಿ ಇತರರು ಇದ್ದರು.

### ಸುಬ್ರಹ್ಮಣ್ಯರಿಗೆ ಟಗರು ನೀಡಿ ಗೌರವ



**ಹುಣಸೂರು:** ತಾಲೂಕಿನ ಸಿಬಿಟಿ ಕಾಲೋನಿಯ ಕನಕ ಸಾಂಸ್ಕೃತಿಕ ಸಮುದಾಯ ಭವನ ಉದ್ಘಾಟನಾ ಸಮಾರಂಭದಲ್ಲಿ ಕರ್ನಾಟಕ ರಾಜ್ಯ ಕುರು ಬರ ಸಂಘದ ಮಾಜಿ ಅಧ್ಯಕ್ಷರಾದ ಬಿ. ಸುಬ್ರಹ್ಮಣ್ಯ ರವರಿಗೆ ಗ್ರಾಮಸ್ಥರು ಟಗರು ನೀಡಿ ಸನ್ಮಾನಿಸಿ ಗೌರವಿಸಿದರು.

ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಕಲ್ಕುಣಿಕೆ ರಘು, ತಾಪಂ ಮಾಜಿ ಸದಸ್ಯ ವೆಳ್ಳಂಗಿರಿ, ಮಧುಬಿಳಿಕೆರೆ ಸೇರಿದಂತೆ ಇತರರು ಇದ್ದಾರೆ.

## ಅಲ್ಪಸಂಖ್ಯಾತರ ಸೌಲಭ್ಯ ಅರ್ಹರಿಗೆ ತಲುಪಿಸಿ: ಜಿ.ಲಕ್ಷ್ಮೀಕಾಂತ ರೆಡ್ಡಿ

**ಮೈಸೂರು:** ಪ್ರಧಾನ ಮಂತ್ರಿಗಳ 15 ಅಂಶಗಳಡಿ ಕಾರ್ಯಕ್ರಮದಡಿ ಅಲ್ಪಸಂಖ್ಯಾತರಿಗೆ ಇರುವ ಸೌಲಭ್ಯಗಳನ್ನು ಅರ್ಹ ಫಲಾನುಭವಿಗಳಿಗೆ ಪಾರ ದರ್ಶಕವಾಗಿ ತಲುಪಿಸುವ ಕಾರ್ಯವನ್ನು ಸಂಭಂ ದಪಟ್ಟ ಎಲ್ಲಾ ಇಲಾಖೆಗಳ ಅಧಿಕಾರಿಗಳು ಮಾಡ ಬೇಕು ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದರು.




ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಪ್ರಧಾನ ಮಂತ್ರಿಗಳ 15 ಅಂಶಗಳ ಕಾರ್ಯಕ್ರಮದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಹಾಗೂ ಸರ್ಕಾರದ ವಿವಿಧ ಇಲಾಖೆಗಳಿಂದ ಸಿಗುವ ಸೌಲಭ್ಯಗಳ ಬಗ್ಗೆ ಅರಿವು ಮೂಡಿಸಬೇಕು. ಫಲಾನುಭವಿಗಳ ಆಯ್ಕೆ ಪಾರದರ್ಶಕವಾಗಿ ಇರಬೇಕು. ಸೌಲಭ್ಯ ನೀಡುವಲ್ಲಿ ಇರುವ ಮಾನದಂಡವನ್ನು ಅನುಸರಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಆಶ್ರಯ ಯೋಜನೆಯಡಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ನಿವೇಶನ ರಹಿತರಿಗೆ ನಿವೇಶನ ನೀಡ ಲಾಗುವುದು. ಪಟ್ಟಣ ಪ್ರದೇಶದಲ್ಲಿ ಮನೆ ನಿರ್ಮಾಣ ಮಾಡಿ ಮನೆಗಳ ಹಂಚಿಕೆ ಮಾಡಲಾಗುವುದು. ನರಸಿಂಹರಾಜ ಕ್ಷೇತ್ರದಲ್ಲಿ ಮನೆಗಳ ನಿರ್ಮಾಣಕ್ಕೆ ಡಿಪಿಆರ್ ಮಾಡಿ ಸರ್ಕಾರಕ್ಕೆ ಕಳುಹಿಸಲಾಗಿದೆ. ಪಿಎಂ ಸ್ವ ನಿಧಿ ಯೋಜನೆಯಡಿ ಮೈಸೂರು ಮಹಾನಗರ ಪಾಲಿಕೆಯಿಂದ ಸೌಲಭ್ಯ ಪಡೆಯಲು ಬೀದಿ ಬದಿ ವ್ಯಾಪಾರಿಗಳು 30 ಸಾವಿರ ಅರ್ಜಿಗಳು ಸಲ್ಲಿಕೆಯಾಗಿದ್ದು 22 ಸಾವಿರ ಜನರು ಸೌಲಭ್ಯ ಪಡೆದಿದ್ದಾರೆ ಎಂದು ತಿಳಿಸಿದರು.

ಸಮಿತಿಯ ಸದಸ್ಯರು ಮಾತನಾಡಿ ಸಯ್ಯಾಜಿರಾವ್ ರಸ್ತೆಯ ಬನುಮಯ್ಯ ಕಾಲೇಜಿನ ಪಕ್ಕದಲ್ಲಿರುವ ಶ್ರೀ ಶಾಂತಿನಾಥ ಜೈನ ಬಸದಿಯ ಜಾಗದ ಗಡಿಯನ್ನು ಗುರುತಿಸಿ ಕೊಡಬೇಕು. ಮೈಸೂರು ಜಿಲ್ಲೆಯನ್ನು ಮಾದಕ ವಸ್ತುಗಳ ಮುಕ್ತ ಜಿಲ್ಲೆಯನ್ನಾಗಿ ಮಾಡಬೇಕು. ಮುಸ್ಲಿಂ ಸಮುದಾಯದಲ್ಲಿ ಹೆಚ್ಚಿನ ಬಾಲಕಾರ್ಮಿಕರು ಇದ್ದು, ಪತ್ತೆ ಹಚ್ಚಿ ಸೂಕ್ತ ಕ್ರಮ ಕೈಗೊಳ್ಳಬೇಕು. ಮುದ್ರಾ ಯೋಜನೆಯಡಿ ಸಾಲ ಸೌಲಭ್ಯ ನೀಡಬೇಕು. ಸಾಲ ನೀಡುವಲ್ಲಿ ಸಿಬಿಲ್ ಇಲ್ಲ ಎಂದು ರಿಜೆಕ್ಟ್ ಮಾಡುತ್ತಾರೆ. ಸಾಲ ನೀಡುವಲ್ಲಿ ಸ್ಥಳೀಕರಣ ಮಾಡಬೇಕು ಎಂದು ಮನವಿ ಮಾಡಿದರು.

ಹಳ್ಳದ ಕೇರಿಗೆ ಮಹಾವೀರ ನಗರ ಎಂದು ಹೆಸರು ಇದ್ದು ಇಲ್ಲಿ ನಾಮಫಲಕ ಅಳವಡಿಸಬೇಕು. ಅಲ್ಪ ಸಂಖ್ಯಾತ ಸಮುದಾಯದ ನಿರುದ್ಯೋಗಿ ಯುವಕ ಯುವತಿಯರಿಗೆ ಕೌಶಲ್ಯ ತರಬೇತಿ ನೀಡಬೇಕು. ಗ್ರಾಮೀಣ ಭಾಗದ ಜನರಿಗೆ ಸೌಲಭ್ಯಗಳ ಬಗ್ಗೆ ಮಾಹಿತಿ ಇರುವುದಿಲ್ಲ ಆದ್ದರಿಂದ ವಿವಿಧ ಇಲಾಖೆಗಳಿಂದ ಅಲ್ಪಸಂಖ್ಯಾತ ಸಮುದಾಯದವರಿಗೆ ಇರುವ ಸೌಲಭ್ಯಗಳ ಕುರಿತು ಹೆಚ್ಚಿನ ಪ್ರಚಾರ ನೀಡಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ಸಮಿತಿಯ ಸದಸ್ಯರಾದ ಸುರೇಶ್ ಕುಮಾರ್ ಜೈನ್, ಸುಭಾನುದ್ದೀನ್, ಫಾಜಿಲ್, ನಿಪ್ತಿನ್ ಅಲ್ಪಸಂಖ್ಯಾತರ ಇಲಾಖೆಯ ಜಿಲ್ಲಾ ಅಧಿಕಾರಿ ಕೆ.ಶಿಲ್ಪಾ ಸೇರಿ ಇತರರು ಉಪಸ್ಥಿತರಿದ್ದರು.




ಕೊಳ್ಳೇಗಾಲ. ಪಟ್ಟಣದ ಮುಡಿಗುಂಡ ಪಿಎಮ್ ಶ್ರೀ. ಸರ್ಕಾರಿ ಆದರ್ಶ ವಿದ್ಯಾಲಯದ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ನೂರಕ್ಕೆ ನೂರು ಫಲಿತಾಂಶವನ್ನು ಪಡೆದಿದ್ದಾರೆ. ಪರೀಕ್ಷೆಯಲ್ಲಿ ಪಾಲ್ಗೊಂಡ 80 ವಿದ್ಯಾರ್ಥಿಗಳ ಪೈಕಿ 80 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಅದರಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ 49 ವಿದ್ಯಾರ್ಥಿಗಳು, ಪ್ರಥಮ ದರ್ಜೆ 26 ವಿದ್ಯಾರ್ಥಿಗಳು, ದ್ವಿತಿಯ ದರ್ಜೆ 49 ಹಾಗೂ ತೃತೀಯ ದರ್ಜೆಯಲ್ಲಿ 1 ವಿದ್ಯಾರ್ಥಿ ಪಡೆದುಕೊಂಡಿದ್ದಾರೆ.

## ಎಸ್.ಎಸ್ ಎಲ್ ಸಿ ಫಲಿತಾಂಶ ಜಿಲ್ಲೆಗೆ ಶೇ, 91.89 ಫಲಿತಾಂಶ: ರಾಜ್ಯದಲ್ಲಿ ಜಿಲ್ಲೆಗೆ 30ನೇ ಸ್ಥಾನ

**ಚಾಮರಾಜನಗರ:** 2025–26 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಜಿಲ್ಲೆಗೆ ಶೇ, 91.89 ಫಲಿತಾಂಶ ಲಭಿಸಿದ್ದು, ರಾಜ್ಯದಲ್ಲಿ 30 ನೇ ಸ್ಥಾನ ಪಡೆದುಕೊಂಡಿದೆ.

ಜಿಲ್ಲೆಯಲ್ಲಿ 10544 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, ಈ ಪೈಕಿ 9424 ಮಂದಿ ತೇರ್ಗಡೆ ಹೊಂದಿದ್ದಾರೆ. ಕಳೆದ ಬಾರಿ 83.16 ರಷ್ಟು ಫಲಿತಾಶ ಬಂದಿತ್ತು. ಈ ಬಾರಿ ಶೇ, 91.89 ಫಲಿತಾಂಶ ಪಡೆಯುವ ಮೂಲಕ ಚೇತರಿಕೆ ಕಂಡಿದೆ.

ಕೊಳ್ಳೇಗಾಲ ತಾಲ್ಲೂಕು ಶೇ, 96.13, ಹನೂರು ತಾಲ್ಲೂಕು ಶೇ, 95.98, ಗುಂಡ್ಲುಪೇಟೆ ತಾಲೂಕು ಶೇ, 93.03, ಯಳಂದೂರು ತಾಲ್ಲೂಕು ಶೇ, 92.23, ಚಾಮರಾಜನಗರ ತಾಲ್ಲೂಕು ಶೇ, 84.48 ಫಲಿತಾಂಶ ಪಡೆದುಕೊಂಡಿದೆ. ಚಾಮರಾಜನಗರ ತಾಲ್ಲೂಕು ಶೇ, 96.13 ಫಲಿತಾಂಶ ಪಡೆದು ಕೊನೆಯ ಸ್ಥಾನದಲ್ಲಿದೆ.

## ಕಾಮಗೆರೆ ಮಂಗಲ ಗ್ರಾಮದಲ್ಲಿ 2.70 ಕೋಟಿ ವೆಚ್ಚದ ಕಾಮಗಾರಿಗಳಿಗೆ ಶಾಸಕರಿಂದ ಭೂಮಿ ಪೂಜೆ

**ಹನೂರು:** ಸಮಾಜ ಕಲ್ಯಾಣ ಇಲಾಖೆಯ ಅನುದಾನದ ಅಡಿಯಲ್ಲಿ ಕ್ಷೇತ್ರ ವ್ಯಾಪ್ತಿಯ ಕಾಮಗೆರೆ ಮಂಗಲ ಕೊಂ ಗರಹಳ್ಳಿ ಗ್ರಾಮಗಳಲ್ಲಿ ಸಿಸಿ ರಸ್ತೆ ಚರಂಡಿ ಹಾಗೂ ಡಾ ಬಿ ಆರ್ ಅಂಬೇಡ್ಕರ್ ಸಮುದಾಯ ಭವನ ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ಒಟ್ಟು ಸುಮಾರು ಎರಡು ಕೋಟಿ 70 ಲಕ್ಷ ರೂ ವೆಚ್ಚದಲ್ಲಿ ಶಾಸಕ ಎಂ ಆರ್ ಮಂಜುನಾಥ್ ರವರು ಭೂಮಿ ಪೂಜೆ ನೆರವೇರಿಸಿದರು.



ಕಾಮಗೆರೆ ಗ್ರಾಮದ ಹೊಸಬಡಾವಣೆಯಲ್ಲಿ ಸಿಸಿರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗೆ 1 ಕೋಟಿ, ಕೊಂಗರಹಳ್ಳಿ ಗ್ರಾಮದ ಹೊಸ ಬಡಾವಣೆಯಲ್ಲಿ 20 ಲಕ್ಷ ವೆಚ್ಚದಲ್ಲಿ ಡಾ ಬಿ ಆರ್ ಅಂಬೇಡ್ಕರ್ ಸಮು ದಾಯ ಭವನ, ಕಾಮಗೆರೆ ಗ್ರಾಮದ ಆದಿಜಾಂಭವ ಬಡಾವಣೆಯಲ್ಲಿ 50 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ ಚರಂಡಿ ನಿರ್ಮಾಣ ಮಂಗಲ ಗ್ರಾಮದ ಹೊಸ ಬಡಾವಣೆಯಲ್ಲಿ ಒಂದು ಕೋಟಿ ವೆಚ್ಚದಲ್ಲಿ ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿ ಒಟ್ಟಾರೆ ಎರಡು ಕೋಟಿ 70 ಲಕ್ಷ ರೂ ಗಳ ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ನಂತರ ಮಾಧ್ಯಮದ ಜೊತೆ ಮಾತ ನಾಡಿದ ಶಾಸಕ ಮಂಜುನಾಥ್ ರವರು ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ವಿವಿಧ ಅಭಿವೃದ್ಧಿ ಕಾಮ ಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿದ್ದೇನೆ ಕ್ಷೇತ್ರದ ಜನತೆಗೆ ನಾನು ಕೊಟ್ಟಿರುವ ಭರವಸೆಯನ್ನು ಪ್ರಾಮಾಣಿ ಕವಾಗಿ ಹಂತ ಹಂತವಾಗಿ ಈಡೇರಿಸುತ್ತಿದ್ದೇನೆ ಈಗಾ ಗಲೇ ನಮ್ಮ ಕ್ಷೇತ್ರದ ಜನರಿಗೆ ನೀರಾವರಿ ಯೋಜನೆ ಬಲ ಪಡಿಸಲು ಹಲವಾರು ಕಾರ್ಯಗಳನ್ನು ಕೈಗೊಂಡು ರಾಮನ ಗುಡ್ಡೆ ಕೆರೆಗೆ ನೀರು ಬಂದು ತುಂಬಿದೆ ನಂತರ ಉದ್ದನೂರು ಡ್ಯಾಮ್ ಗೂ ಕೆಲವೇ ದಿನಗಳಲ್ಲಿ ನೀರು ಬರಲಿದೆ ಜೊತೆಗೆ ರಾಜ್ಯ ಸರ್ಕಾರವು ನಮ್ಮ ಹನೂರು ಕ್ಷೇತ್ರಕ್ಕೆ ನೀರಾವರಿ ಯೋಜನೆಗೆ 2026 ರ ಬಜೆಟ್ ನಲ್ಲಿ 490 ಕೋಟಿ ಅನುದಾನ ನೀಡಿರುವುದು ನಮ್ಮ ಕ್ಷೇತ್ರದ ಜನತೆಗೆ ನೀರಾವರಿ ಯೋಜನೆಗೆ ತುಂಬಾ ಅನುಕೂಲವಾಗಲಿದೆ. ಹನೂರು ಕ್ಷೇತ್ರದ ಜನರು ನನಗೆ ನೀಡಿರುವ ಅವಕಾಶವನ್ನು ಸದುಪಯೋಗ ಪಡಿಸಿ ಕೊಂಡು ಮುಂದಿನ ದಿನಗಳಲ್ಲಿ ಕ್ಷೇತ್ರದಲ್ಲಿ ಇನ್ನು ಹೆಚ್ಚಿನ ಅಭಿವೃದ್ಧಿ ಕಾರ್ಯಗಳನ್ನು ಮಾಡಲಾಗುವುದು ಎಂದರು. ಈ ಸಂದರ್ಭದಲ್ಲಿ ಕಾಮಗೆರೆ ಕೊಂಗರಹಳ್ಳಿ ಮಂಗಲ ಗ್ರಾಮಗಳ ಯಜಮಾನರುಗಳು ಜೆಡಿಎಸ್ ಮುಖಂಡರು ಗಳು ಯುವಕರು ಸಾರ್ವಜನಿಕರು ಇನ್ನಿತರರಿದ್ದರು.

## ಮಹನೀಯರ ಒಂದು ಸಮುದಾಯಕ್ಕೆ ಸೀಮಿತವಾಗಬಾರದು

# ಶ್ರೀ ಪುರುಷೋತ್ತಮಾನಂದಪುರಿ ಸ್ವಾಮೀಜಿ

**ಮೈಸೂರು:** ಮಹನೀಯರ ಜಯಂತಿಗಳು ಒಂದು ಸಮುದಾಯಕ್ಕೆ ಸೀಮಿತವಾಗದೆ ಸಮಾಜದಲ್ಲಿ ಒಂದೊಂದು ಜಯಂತಿಯನ್ನು ಒಂದೊಂದು ಸಮು ದಾಯದವರು ಮಾತ್ರ ಆಚರಿಸುವ ಪದ್ಧತಿಯನ್ನು ಬದಲಾಯಿಸಬೇಕು. ಮಹನೀಯರು ಇಡೀ ದೇಶದ ಆಸ್ತಿ, ಹೀಗಾಗಿ ಎಲ್ಲರೂ ಒಗ್ಗೂಡಿ ಜಯಂತಿಗಳನ್ನು ಆಚರಿಸುವ ವಾತಾವರಣ ನಿರ್ಮಾಣವಾಗಬೇಕು ಎಂದು ಶ್ರೀ ಡಾ.ಪುರುಷೋತ್ತಮಾನಂದಪುರಿ ಸ್ವಾಮೀಜಿ ಹೇಳಿದರು.



ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಮಹಾನಗರ ಪಾಲಿಕೆ, ಮೈಸೂರು ಶ್ರೀ ಭಗೀರಥ ಜಯಂತೋತ್ಸವ ಸಮಿತಿವತಿಯಿಂದ ಕರ್ನಾಟಕ ಕಲಾಮಂದಿರದಲ್ಲಿ ಶ್ರೀ ಭಗೀರಥ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದರು. ಸೂರ್ಯವಂಶದ ಕ್ಷತ್ರಿಯ ಪರಂಪರೆಯ ಸಗರ ಚಕ್ರವರ್ತಿ, ದಿಲೀಪ ಮತ್ತು ಭಗೀರಥ ಮಹರ್ಷಿ ಗಳಂತಹ ಮಹಾನ್ ವ್ಯಕ್ತಿಗಳ ಸಾಧನೆಯನ್ನು ಸ್ಮರಿಸಿವುದು . ಇವರು ದೈವಾಂಶ ಸಂಭೂತರಾಗಿದ್ದು, ನಾಡಿನ ಏಳಿಗೆಗಾಗಿ ಅಪಾರ ಕೊಡುಗೆ ನೀಡಿದ್ದಾರೆ ಎಂದು ತಿಳಿಸಿದರು.

ಪ್ರಸ್ತುತ ಸಮಾಜದಲ್ಲಿ ಇತಿಹಾಸ ಮತ್ತು ಜ್ಞಾನದ ಬಗ್ಗೆ ಅರಿವು ಕಡಿಮೆಯಾಗುತ್ತಿದೆ. ನಾವು ನಮ್ಮ ಪರಂಪರೆಯನ್ನು ಅರ್ಥಮಾಡಿಕೊಳ್ಳುವಲ್ಲಿ ಹಿಂದುಳಿದಿದ್ದೇವೆ. ಸಮಾಜದಲ್ಲಿ ಅನೇಕ ಮತ–ಧರ್ಮಗಳಿದ್ದರೂ, ಭಾರತದಂತಹ ವಿಶಾಲ ದೇಶದಲ್ಲಿ ಭಿನ್ನತೆಯ ನಡುವೆ ಏಕತೆಯನ್ನು ಕಾಪಾಡಿಕೊಳ್ಳುವುದು ಅತ್ಯಗತ್ಯ. ಈ ನಿಟ್ಟಿನಲ್ಲಿ ಎಲ್ಲರೂ ಒಗ್ಗೂಡಿ ಮುನ್ನಡೆಯಬೇಕು. ಭಗೀರಥ ಮಹರ್ಷಿ, ಕನಕದಾಸರು, ವಾಲ್ಮೀಕಿ, ಬಸವಣ್ಣ ಮತ್ತು ಮಾದಾರ ಚೆನ್ನಯ್ಯನವರಂತಹ ಮಹಾನ್ ವ್ಯಕ್ತಿಗಳು ನಾಡಿಗೆ ನೀಡಿರುವ ಕೊಡುಗೆ ಅಪಾರ. ಇವರ ಜಯಂತಿಗಳನ್ನು ಆಚರಿಸುವ ಉದ್ದೇಶ ಕೇವಲ ಒಂದು ದಿನದ ಕಾರ್ಯಕ್ರಮಕ್ಕೆ ಸೀಮಿತವಾಗದೆ, ಅವರು ತೋರಿಸಿಕೊಟ್ಟ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವಂತಾಗಬೇಕು ಎಂದು ತಿಳಿಸಿದರು.

ಶಾರದ ವಿಲಾಸ ಕಾಲೇಜು ನಿವೃತ್ತ ಪ್ರಾಂಶುಪಾಲ ಡಾ.ಎಂ.ಗೋವಿಂದರಾಜು ಮಾತನಾಡಿ, ಹಿಂದೂ ಧರ್ಮದ ಪುರಾಣಗಳ ಪ್ರಕಾರ ನಾಲ್ಕು ಯುಗಗಳ (ಕೃತ, ತ್ರೇತಾ, ದ್ವಾಪರ, ಕಲಿಯುಗ) ಚಕ್ರವನ್ನು ವಿವರಿಸುತ್ತಾ, ಭಗೀರಥನ ಕಥೆಯು ದ್ವಾಪರ ಯುಗಕ್ಕೆ ಸಂಬಂಧಿಸಿದ್ದಾಗಿದೆ. ಭಗೀರಥನು ತನ್ನ ಪೂರ್ವಜರಾದ ಸಗರ ಚಕ್ರವರ್ತಿಯ ಮಕ್ಕಳು ಕಪಿಲ ಮುನಿಯ ಶಾಪದಿಂದ ಭಸ್ಮವಾಗಿರುವ ದುಃಖವನ್ನು ಹೋಗಲಾಡಿಸಲು, ಗಂಗಾಮಾತೆಯನ್ನು ಭೂಮಿಗೆ ಕರೆತರುವ ಸಂಕಲ್ಪ ತೊಟ್ಟ ಕಥೆ ಇದಾಗಿದೆ. ಗಂಗೆಯನ್ನು ಭೂಮಿಗೆ ಕರೆತರಲು ಭಗೀರಥನು ಬ್ರಹ್ಮದೇವನನ್ನು ಕುರಿತು, ನಂತರ ಶಿವನನ್ನು ಕುರಿತು ನಡೆಸಿದ ಅಸಾಧಾರಣ ತಪಸ್ಸಿನ ಸನ್ನಿವೇಶಗಳನ್ನು ಅವರು ಮನೋಜ್ಞವಾಗಿ ವರ್ಣಿಸಿದರು. ದೈವಿಕ ಶಕ್ತಿಯ ಕೃಪೆ ಪಡೆಯಲು ಭಗೀರಥನ ಭಕ್ತಿ ಎಷ್ಟು ಪ್ರಬಲವಾಗಿತ್ತು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಳವಳ್ಳಿ ಅಯ್ಯನ ಸರಗೂರು ಮಠದ ಶ್ರೀ ಮಹದೇವಸ್ವಾಮೀಜಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಮತ್ತಿತರರು ಉಪಸ್ಥಿತರಿದ್ದರು.

## ವಿವಿಧ ಗ್ರಾಮಗಳಲ್ಲಿ ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ಹೆಚ್.ಟಿ.ಮಂಜು ಭೂಮಿ ಪೂಜೆ

**ಕೆ.ಆರ್.ಪೇಟೆ:** ತಾಲ್ಲೂಕಿನ ವಿಠಲಾಪುರ, ಅಂಬಿಗರಹಳ್ಳಿ, ಸಂಗಾಪುರ, ಯಗಚಗುಪ್ಪೆ, ಆಲಂಬಾಡಿ ಗ್ರಾಮಗಳಲ್ಲಿ ಶಾಸಕರ ಪ್ರದೇ ಶಾಭಿವೃದ್ಧಿ ನಿಧಿ ಅಡಿಯಲ್ಲಿ ನಿರ್ಮಿಸ ಲಾಗುತ್ತಿರುವ ರಸ್ತೆ ಮತ್ತು ಚರಂಡಿ ಅಭಿ ವೃದ್ಧಿ ಕಾಮಗಾರಿಗೆ ಶಾಸಕ ಹೆಚ್.ಟಿ. ಮಂಜು ಭೂಮಿ ಪೂಜೆ ನೆರವೇರಿಸಿದರು.



ಬಳಿಕ ಮಾತನಾಡಿದ ಶಾಸಕ ಹೆಚ್ .ಟಿ.ಮಂಜು ಕರ್ನಾಟಕ ಸರ್ಕಾರವು ಗ್ಯಾರಂಟಿ ಯೋಜನೆಗಳಿಗೆ ಅನುಧಾನ ನೀಡುವಲ್ಲಿಯೇ ಕಾಲ ಕಳೆಯುತ್ತಿದೆ. ಇತರೆ ಮೂಲ ಸೌಲಭ್ಯಗಳಿಗೆ ಅಗತ್ಯ ಅನು ಧಾನವನ್ನೇ ನೀಡುತ್ತಿಲ್ಲ. ಕನಿಷ್ಠ ಪಕ್ಷ ಜನರ ಆರೋಗ್ಯ ಹಿತದೃಷ್ಠಿಯಿಂದ ಸರ್ಕಾರಿ ಆಸ್ಪತ್ರೆಗಳಿಗೆ ಮಾತ್ರೆಗಳು ಮತ್ತು ಇಂಜಕ್ಷನ್ ಗಳನ್ನೇ ಪೂರೈಕೆ ಮಾಡದೇ ಜನರ ಆರೋಗ್ಯದೊಂದಿಗೆ ಚೆಲ್ಲಾಟವಾಡುತ್ತಿದೆ. ಕಳೆದ ತಿಂಗಳು ಇಡೀ ರಾಜ್ಯಾದ್ಯಂತ ಸರ್ಕಾರಿ ಆಸ್ಪತ್ರೆಯ ವೈದ್ಯರೇ ಇದರ ವಿರುದ್ಧ ಹೋರಾಟ ಮಾಡಿದ್ದಾರೆ. ಸರ್ಕಾರ ಇನ್ನಾದರೂ ಗ್ಯಾರಂಟಿ ಯೋಜನೆಗಳ ಜೊತೆಗೆ ಸರ್ಕಾರಿ ಆಸ್ಪತ್ರೆಗಳಿಗೆ ಬರುವ ಬಡ ಜನರಿಗೆ ಅಗತ್ಯ ವಿರುವ ಮಾತ್ರೆಗಳು ಹಾಗೂ ಇಂಜಕ್ಷನ್ ಔಷಧಗಳನ್ನು ವಿತರಣೆ ಮಾಡಲು ಕ್ರಮ ವಹಿಸಬೇಕು. ಆಸ್ಪತ್ರೆಗಳಿಗೆ ಕನಿಷ್ಠ ಸಿಬ್ಬಂದಿ ವರ್ಗದವರನ್ನು ನೇಮಕ ಮಾಡಬೇಕು ಇಲ್ಲದಿದ್ದರೆ ಜನರೇ ಸರ್ಕಾರದ ವಿರುದ್ಧ ದಂಗೆ ಏಳುವ ಕಾಲ ದೂರವಿಲ್ಲ ಎಂದು ರಾಜ್ಯ ಸರ್ಕಾರದ ವಿರುದ್ಧ ಅಸಮಧಾನ ವ್ಯಕ್ತಪಡಿಸಿದರು.

ಸರ್ಕಾರವು ವಿರೋಧ ಪಕ್ಷಗಳ ಶಾಸಕರಿಗೆ ನೀಡುತ್ತಿರುವ ಅನುಧಾನವನ್ನು ಅಗತ್ಯ ಇರುವ ಗ್ರಾಮಗಳ ರಸ್ತೆ ಮತ್ತು ಚರಂಡಿ ಅಭಿವೃದ್ಧಿಗೆ ಆದ್ಯತೆ ಮೇರೆಗೆ ನೀಡುವ ಮೂಲಕ ಮತ ನೀಡಿದ ಜನರ ಋಣ ತೀರಿಸುವ ಕೆಲಸ ಮಾಡುತ್ತಿದ್ದೇನೆ. ಆದರ ನನಗೆ ಈ ಅನುಧಾನ ಆನೆ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ನೀಡಿದಂತಾಗಿದೆ ಹಾಗಾಗಿ 2028ಕ್ಕೆ ನಮ್ಮ ಜೆಡಿಎಸ್–ಬಿಜೆಪಿ ಮೈತ್ರಿ ಸರ್ಕಾರವು ಅಧಿಕಾರಕ್ಕೆ ಬರುವುದು ಶೇ. 100ರಷ್ಟು ಸತ್ಯವಾಗಿದೆ ಆಗ ಮತ್ತೊಮ್ಮೆ ನನಗೆ ಆಶೀರ್ವಾದ ಮಾಡಿದರೆ ತಾಲ್ಲೂಕಿನ ಎಲ್ಲಾ ಜನರ ಸಮಗ್ರ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ ಎಂದು ಹೆಚ್.ಟಿ.ಮಂಜು ಭರವಸೆ ನೀಡಿದರು.

ರಾಜ್ಯ ಯುವ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಕೆ.ಬಿ.ನಾಗೇಶ್, ಜೆಡಿಎಸ್ ಮುಖಂಡರಾದ ಸಂಗಾಪುರ ಪುಟ್ಟಸ್ವಾಮೀ ಗೌಡ, ಯಗಚಗುಪ್ಪೆ ಎಲ್.ಐ.ಸಿ ಶಿವಪ್ಪ, ತಾ.ಪಂ.ಮಾಜಿ ಸದಸ್ಯ ಬೂಕನಕೆರೆ ಹೆಳ ವೇಗೌಡ, ಆಲಂಬಾಡಿ ಕರಿಶೆಟ್ಟಿ, ವೆಂಕಟೇಶ್, ಚನ್ನಕೃಷ್ಣ, ತಾಲ್ಲೂಕು ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ರೇಖಾಲೋಕೇಶ್, ಅಕ್ಕಿಹೆಬ್ಬಾಳು ಹೋಬಳಿ ಜೆಡಿಎಸ್ ಅಧ್ಯಕ್ಷ ಮಂಚೀಬೀಡು ಬಸವಲಿಂಗಪ್ಪ, ಮಾಂಬಳ್ಳಿ ಕಾಂತರಾಜು, ಸೇರಿದಂತೆ ಹಲವಾರು ಜೆಡಿಎಸ್ ಮುಖಂಡರು ಉಪಸ್ಥಿತರಿದ್ದರು.


**ಶ್ರೀರಾಂಪುರ ಪಟ್ಟಣ ಪಂಚಾಯಿತಿ ಕಾರ್ಯಾಲಯ**

ಮೈಸೂರು ಜಿಲ್ಲೆ – 570026 , ದೂ: 0821–2330109

ಇ–ಮೇಲ್: itstaff_ulb_srirampur@yaoo.com

ಸಂ.: ಶ್ರೀ.ಪ.ಪಂ.ಕಾ/ಆ.ಶಾ./ಟೆಂ.ಪ್ರ.05/2025–26 ದಿನಾಂಕ: 23.04.2026

**ಟೆಂಡರ್ ಪ್ರಕಟಣೆ** (ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಶ್ರೀರಾಂಪುರ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ರವರು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ನಿಯಮದನ್ವಯ ಕೆ.ಪಿ.ಪಿ.–ಪೋರ್ಟಲ್ ಮುಖಾಂತರ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಪ್ರದೇಶಗಳಲ್ಲಿ ಬೀದಿ ನಾಯಿಗಳು ಹೆಚ್ಚಾಗಿದ್ದು, ಬೀದಿ ನಾಯಿಗಳನ್ನು ನಿಯಂತ್ರಿಸಲು ಮತ್ತು ಪಂಚಾಯಿತಿಯಲ್ಲಿ ಸ್ವಚ್ಚತಾ ಕಾರ್ಯನಿರ್ವಹಿಸುತ್ತಿರುವ ಖಾಯಂ ಹಾಗೂ ಹೊರಗುತ್ತಿಗೆ ಪೌರಕಾರ್ಮಿಕರಿಗೆ ಬೆಳಗಿನ ಉಪಹಾರ ಜೊತೆಗೆ ಬೇಯಿಸಿದ ಮೊಟ್ಟೆಯನ್ನು ಸರಬರಾಜು ಮಾಡಲು ಅರ್ಹ ಸಂಸ್ಥೆದಾರರು/ಗುತ್ತಿಗೆದಾರರು/ಸರಬರಾಜುದಾರರಿಂದ ಟೆಂಡರುಗಳನ್ನು ಆಹ್ವಾನಿಸಲಾಗಿದೆ. ಇ–ವೆಬ್‌ಸೈಟ್ https://kppp.karnataka.gov.in ಮೂಲಕ ಇಎಂಡಿ, ಗುತ್ತಿಗೆ ಮತ್ತು ಇತರೆ ಷರತ್ತುಗಳನ್ನು ಗಮನಿಸಿಕೊಳ್ಳುವುದು. ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಸಂಬಂಧಿಸಿದವರಿಂದ ಮತ್ತು ವೆಬ್‌ಸೈಟ್ www.srirampuratown.mrc.gov.in ನಿಂದ ಪಡೆದುಕೊಳ್ಳಬಹುದು.

1) ಟೆಂಡರ್ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ: **11.05.2026 ಸಂಜೆ 5.30 ಗಂಟೆಗೆ** 2) ಸ್ವೀಕೃತವಾದ ದರ ಟೆಂಡರ್ ತೆರೆಯುವ ದಿನಾಂಕ: **13.05.2026 ಬೆಳಿಗ್ಗೆ 11.00 ಗಂಟೆಗೆ.**

| ಕ್ರ. ಸಂ. | ವಿವರ | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ಇ.ಎಂ.ಡಿ ಮೊತ್ತ ರೂ. |
|---|---|---|---|
| 01 | DMA/2025-26/SE6695/CALL-4 | 2.98 | 7,500/- |
| 02 | DMA/2025-26/SE7520/CALL-2 | 9.70 | 24,300/- |

**ಸೂಚನೆ:** ಹೆಚ್ಚಿನ ವಿವರ ಹಾಗೂ ಮಾಹಿತಿಗಳನ್ನು **https://kppp.karnataka.gov.in** ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/– (ಮಹೇಶ್‌ಕುಮಾರ್ ಕೆ.ಎಂ.) **ಆಡಳಿತಾಧಿಕಾರಿ** ಪಟ್ಟಣ ಪಂಚಾಯಿತಿ ಶ್ರೀರಾಂಪುರ

ಸಹಿ/– (ಹೆಚ್.ಎಂ.ಸುರೇಶ) **ಮುಖ್ಯಾಧಿಕಾರಿ** ಪಟ್ಟಣ ಪಂಚಾಯಿತಿ ಶ್ರೀರಾಂಪುರ

DIPR/MYS/99/SA/2026-27

# ನಗರಾಭಿವೃದ್ಧಿ ಪ್ರಾಧಿಕಾರ ಇಲಾಖೆ, ನಗರಸಭೆ ವಿರುದ್ಧ ಕ್ರಮಕ್ಕೆ ನಮ್ಮ ಪ್ರಶಾಂತ್ ಆಗ್ರಹ

**ಚಾಮರಾಜನಗರ:** ನಗರದ ಲೇಔಟ್ ಗಳ ನಿರ್ಮಾಣದಲ್ಲಿ ಸರ್ಕಾರದ ನಿಯಮ ಉಲ್ಲಂಘಿಸಿರುವ ನಗರಾಭಿವೃದ್ಧಿ ಪ್ರಾಧಿಕಾರ ಇಲಾಖೆ, ನಗರಸಭೆಯ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳನ್ನು ಯುವ ಸೇನೆ ಕರ್ನಾಟಕ ಸೇವಾ ಸಂಘದ ಅಧ್ಯಕ್ಷ ನಮ್ಮನೆ ಪ್ರಶಾಂತ್ ಒತ್ತಾಯಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ನಗರದ ಸಿ.ವಿ.ರಾಮನ್ ಲೇಔಟ್ ನಿರ್ಮಾಣದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರ ಇಲಾಖೆ, ನಗರಸಭೆಯು ಸಾಕಷ್ಟು ಸರ್ಕಾರಿ ನಿಮಯವನ್ನು ಗಾಳಿ ತೂರಿದ್ದು ಅಕ್ರಮಗಳಿಗೆ ದಾರಿ ಮಾಡಿಕೊಟ್ಟಿವೆ .ಲೇಔಟ್ ನಿರ್ಮಾಣ ಮಾಡಬೇಕಾದರೆ ಸಾಕಷ್ಟು ಷರತ್ತುಗಳಿರುತ್ತವೆ. ಮುಖ್ಯವಾಗಿ ಭೂ ಪರಿವರ್ತನೆ, ವಿವಿಧ ಕಾಮಗಾರಿಗಳ ಅಂದಾಜು ಪಟ್ಟಿಗಳು ಸಂಬಂಧಪಟ್ಟ ಇಲಾಖೆಯಿಂದ ನೀಡಬೇಕು. ಮತ್ತು ಇದಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಮತ್ತು ಜಮೀನಿನ ವಿಚಾರದಲ್ಲಿ ಹಾಗೂ ರಸ್ತೆಯ ವಿಚಾರಗಳಲ್ಲಿ ಯಾವ ತಂಟೆ-ತಕರಾರು ವ್ಯಾಜ್ಯಗಳು ಇಲ್ಲದರ ಬಗ್ಗೆ ಪ್ರಮಾಣ ಪತ್ರ ನೀಡಬೇಕು ಮತ್ತು ಭೂ ದಾಖಲೆಗಳ ಸಹಾಯ ನಿರ್ದೇಶಕರು ದೃಢೀಕರಿಸಿ ಸಲ್ಲಿಸಲಾದ ಸರ್ವೆ ನಕ್ಷೆ ಇತ್ಯಾದಿಗಳು ಪ್ರಾಧಿಕಾರದವರು ನಕ್ಷೆಯಲ್ಲಿ ತೋರಿಸಿರುವ ಎಲ್ಲೆಯ ಬಾಂದೂ ಕಲ್ಲುಗಳು ಸರಿಯಾಗಿ ಇದಿಯೇ ಎಂಬುದನ್ನು ಸ್ಥಳದಲ್ಲಿ ಪರಿಶೀಲಿಸಿದ ನಂತರ ಸಿಮಾ ರವರು ಆಯುಕ್ತರು ನಗರಾಭಿವೃದ್ಧಿ ಇಲಾಖೆ ಆಯುಕ್ತ ಸೀಮಾ,ಮತ್ತು ನಗರ ಯೋಜಕ ಸದಸ್ಯರಾದ ಎಂ.ಹೆಚ್.ರಿತೇಶ್ ರವರು ವಿನ್ಯಾಸ ಕರಡು ನಕ್ಷೆಯನ್ನು ಮಾಡಿಕೊಡಬೇಕಾಗಿರುತ್ತದೆ.ನಾವು ಪ್ರಶ್ನಿಸಿರುವ ಸಿ.ವಿ.ರಾಮನ್ ಲೇಔಟ್‌ನ ದಕ್ಷಿಣ ಭಾಗಕ್ಕೆ ಸಂಪರ್ಕ ರಸ್ತೆಯು ಈ ಲೇಔಟ್ ಮಾಲೀಕರಾದ ಆ

ರ್.ವೆಂಕಣ್ಣ ಮತ್ತು ಮಕ್ಕಳಿಗೆ ಸೇರಿದ ಸರ್ವೆ ನಂ.443/2 ರಲ್ಲಿ 0.2ಎ-33ಗುಂ ಪೈಕಿ 260*120 ಜಾಗಕ್ಕೆ 2007 ಜೂ.16

ರಂದು ಲೇಔಟ್ ಗಾಗಿ ಅನುಮೋದನೆ ಪಡೆದುಕೊಂಡು ಈ ಹಿಂದೆಯೇ ಮಾರಾಟ ಮಾಡಿರುತ್ತಾರೆ. ಖರೀದಿ ಮಾಡಿದ ಸಾರ್ವಜನಿಕರು ಕಳೆದ 12 ,13 ವರ್ಷಗಳಿಂದ ಮನೆಗಳನ್ನು ಕಟ್ಟಿಕೊಂಡು ವಾಸವಿರುತ್ತಾರೆ.

ಇದೀಗ ಇದೇ ಸಿ.ಆರ್.ವೆಂಕಣ್ಣ ರವರು ಅವರಿಗೆ ಸೇರಿದ ಸರ್ವೆ ನಂ.443/1 ರಲ್ಲಿ 02ಎ-443/2 ರಲ್ಲಿ 25.12 ಗುಂಟೆ ವಿಸ್ತೀರ್ಣ ಜಮೀನನ್ನು ಹೊಸದಾಗಿ ಲೇಔಟ್ ನಿರ್ಮಾಣ ಮಾಡಿರುವ ಸಿ.ವಿ.ರಾಮನ್ ಬಡಾವಣೆಗೆ ಅನುಮೋದನೆಯ ಕರಡು ನಕ್ಷೆಯಲ್ಲಿ ಅನುಮೋದನೆಗೊಂಡು ಬಿಟ್ಟಿರುವ 9ಮೀ ರಸ್ತೆಯನ್ನು ಈಗಿನ ಲೇಔಟ್ ಗೆ ಸಂಪರ್ಕ ರಸ್ತೆಯೆಂದು ಕರಡು ನಕ್ಷೆಯಲ್ಲಿ ತೋರಿಸಿರುತ್ತಾರೆ. ಲೇಔಟ್‌ನ ಕಾಮಗಾರಿ ವೇಳೆ 2 ಮೀ ಗಳಷ್ಟು ರಸ್ತೆಯನ್ನು ಒತ್ತುವರಿ ಮಾಡಿಕೊಂಡ ಕಾರಣ 9ಮೀ ರಸ್ತೆಯು ಇರುವುದಿಲ್ಲ. ಇದನ್ನು ಪ್ರಶ್ನಿಸಿ ನಾನು ಅಲ್ಲಿ ನಡೆದಿರುವ ಕಳಪೆ ಕಾಮಗಾರಿ, ಉದ್ಯಾನವನ ಅಭಿವೃದ್ಧಿಪಡಿಸದೇ ಇರುವುದು ಇನ್ನೂ ಹಲವಾರು ತಪ್ಪುಗಳನ್ನು ಒಳಗೊಂಡಂತೆ ಪ್ರಾಧಿಕಾರಕ್ಕೆ ದೂರು ಅರ್ಜಿಯ ಮುಖಾಂತರ ತಕರಾರು ಸಲ್ಲಿಸಿ ಅನುಮೋದನೆ ನೀಡಬಾರದೆಂದು ತಿಳಿಸಿರುತ್ತೇನೆ.

ಪ್ರಾಧಿಕಾರದ ಆಯುಕ್ತರು ಸ್ಥಳ ಪರಿಶೀಲಿಸಿ ರಸ್ತೆ ಕಡಿಮೆ ಇರುವುದರ ಬಗ್ಗೆ 2025 ಸೆ.1 ರಂದು ನಮಗೆ ಹಿಂಬರಹ ನೀಡಿರುತ್ತಾರೆ. ಇದೇ ಪ್ರತಿಯನ್ನು ನಗರಸಭೆಗೆ ತಿಳಿಸುತ್ತಾ ಖಾತೆಗಳನ್ನು ತಡೆಯಲು ಸೂಚಿಸಿರುತ್ತಾರೆ. ಈ ವಿಚಾರವನ್ನು ಪ್ರಶ್ನಿಸಿ ಸಿ.ಆರ್.ವೆಂಕಣ್ಣ ರವರು ಸಲ್ಲಿಸಿದ ಅರ್ಜಿಯ ಮೇರೆಗೆ ಒಂದು ಸರ್ವೆ ಮಾಡಿಸುವ ನೆಪ ಮಾಡಿ 2025 ಡಿ12 ರಂದು ನನ್ನ ಗಮನಕ್ಕೆ ತಂದಿರುತ್ತಾರೆ. ಆದರೆ ನಾನು ಈ ಸರ್ವೆ ಮಾಡಿಸುವುದು ಈವಾಗ ಬೇಕಿತ್ತಾ ಎಂದು ಪ್ರಶ್ನೆ ಮಾಡಿರುತ್ತೇನೆ ಎಂದರು.

ಪ್ರಾಧಿಕಾರದವರು ತಾವು ಅಕ್ರಮ ಕಾಮಗಾರಿಗಳನ್ನು ಮಾಡದೇ ಇದ್ದರು ಸಹ ಸುಳ್ಳು ನಿರಾಕ್ಷೇಪಣಾ ಪತ್ರವನ್ನು ನೀಡುತ್ತ ಬಂದಿರುತ್ತಾರೆ. ಇವುಗಳನ್ನು ತಾವು ಖುದ್ದು ಪರಿಶೀಲಿಸಿ ಅಧಿಕಾರಿಗಳ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಬೇಕು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಕಾರ್ಯಾಧ್ಯಕ್ಷ ಮೋಹನ್,ಉಪಾಧ್ಯಕ್ಷ ನಾಸೀರ್ ಖಾನ್, ಪ್ರಧಾನ ಕಾರ್ಯದರ್ಶಿ ನಾಗರಾಜು, ಕಾರ್ಯದರ್ಶಿ ಇನಾಯತ್ ವುಲ್ಲಾ, ಖಜಾಂಚಿ ಶಿವಶಂಕರ ಚೆಟ್ಟು, ಚಾ.ಸಿ.ಸಿದ್ದರಾಜು ಹಾಜರಿದ್ದರು.

# ಬಸವೇಶ್ವರ ವೃತ್ತ ನಾಮಫಲಕ ಅನಾವರಣ

**ಚಾಮರಾಜನಗರ:** ನಗರದ 26ನೇ ವಾರ್ಡ್‌ನಲ್ಲಿರುವ ವಿವೇಕನಗರ ಬಡಾವಣೆಯ ವೃತ್ತಕ್ಕೆ ಶ್ರೀ ಬಸವೇಶ್ವರ ವೃತ್ತ ಎಂದು ನಾಮಕರಣ ಮಾಡಲಾಗಿದ್ದು, ಮರಿಯಾಲ ಮಠ ಹಾಗೂ ನಗರದ ವಿರಕ್ತ ಮಠದ ಶ್ರೀಗಳು ನಾಮಫಲಕ ಅನಾವರಣ ಮಾಡಿದರು.

ಅಲ್ಲದೇ ವರ್ತಕರ ಭವನದ ಪಕ್ಕದ ಪೆಟ್ರೋಲ್ ಬಂಕ್ ಪಕ್ಕದಿಂದ ವಿವೇಕನಗರಕ್ಕೆ ಬರುವ ರಸ್ತೆಗೆ ಶರಣೆ ಅಕ್ಕ ಮಹಾದೇವಿ ರಸ್ತೆ ಎಂದು ನಾಮಕರಣ ಮಾಡಿ ನಾಮಫಲಕ ಅನಾವರಣ ಮಾಡಲಾಯಿತು.



ನೂತನ ಬಸವೇಶ್ವರ ವೃತ್ತದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮರಿಯಾಲ ಮಠದ ಶ್ರೀ ಮುರುಘರಾಜೇಂದ್ರ ಸ್ವಾಮೀಜಿ ಹಾಗೂ ನಗರದ ಸಿದ್ದಮಲ್ಲೇಶ್ವರ ವಿರಕ್ತ ಮಠದ ಶ್ರೀ ಚೆನ್ನಬಸವಸ್ವಾಮೀಜಿ ನಾಮಫಲಕ ಅನಾವರಣ ಮಾಡಿದರು.

ಈ ಸಂದರ್ಭದಲ್ಲಿ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಮರಿಯಾಲದ ಶ್ರೀ ಮುರುಘರಾಜೇಂದ್ರ ಸ್ವಾಮೀಜಿ, 12 ನೇ ಶತಮಾನದಲ್ಲಿ ಬಸವಣ್ಣನವರು ತಮ್ಮ ವಚನಗಳ ಮೂಲಕ ಹೇಳದಿರುವ ಯಾವ ವಿಚಾರಗಳೂ ಇಲ್ಲ. ಅವರು ವಚನಗಳ ಮೂಲಕ ಸಮಾಜದ ಎಲ್ಲ ವಿಷಯಗಳ ಬಗ್ಗೆ ತಿಳಿಸಿದ್ದಾರೆ ಎಂದರು.

ಬಸವಣ್ಣನವರು ಹೇಳಿದ ತತ್ವ ವಿಚಾರಗಳನ್ನು ನಾವೆಲ್ಲರೂ ಪ್ರಸರಿಸಬೇಕು. ವಚನಗಳನ್ನು ನಮ್ಮ ಮಕ್ಕಳಿಗೆ ತಿಳಿಸಿಕೊಡಬೇಕು. ಸಮಾಜದ ಅಂಕುಡೊಂಕು, ಡಂಭಾಚಾರಗಳನ್ನು ಬಸವಣ್ಣನವರು ತಮ್ಮ ವಚನಗಳ ಮೂಲಕ ಎತ್ತಿ ಹಿಡಿದಿದ್ದಾರೆ. ಅವರ ವಚನಗಳ ಸಾರವನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಅದು ನಮ್ಮನ್ನು ಯಶಸ್ಸಿನತ್ತ ಕೊಂಡೊಯ್ಯುತ್ತದೆ ಎಂದು ಅವರು ಹೇಳಿದರು.

ಸಿದ್ದಮಲ್ಲೇಶ್ವರ ವಿರಕ್ತ ಮಠದ ಶ್ರೀ ಚನ್ನಬಸವ ಸ್ವಾಮೀಜಿ ಮಾತನಾಡಿ, ಬಸವಣ್ಣನವರು 12ನೇ ಶತಮಾನದಲ್ಲೇ ಸಾಮಾಜಿಕ ಕ್ರಾಂತಿ ಮಾಡಿದರು. ವೈಚಾರಿಕತೆಯನ್ನು ಸಾರಿದರು. ಬಸವಣ್ಣನವರ ನಾಮಫಲಕ ಅಳವಡಿಸಿರುವುದು ಶ್ಲಾಘನೀಯ. ಅವರ ವಿಚಾರಗಳನ್ನೂ ಮೈಗೂಡಿಸಿಕೊಳ್ಳಬೇಕು ಎಂದರು.

ವೀರಶೈವ ನೌಕರರ ಕ್ಷೇಮಾಭಿವೃದ್ಧಿ ಸಂಘದ ಮಾಜಿ ಅಧ್ಯಕ್ಷ ಆ.ಎಂ.ಸ್ವಾಮಿ ಮಾತನಾಡಿ ಈ ವೃತ್ತದಲ್ಲಿ ಬಸವೇಶ್ವರ ಪ್ರತಿಮೆ ನಿರ್ಮಾಣ ಮಾಡಲು ಎಲ್ಲರೂ ಕೈಜೋಡಿಸಬೇಕು. ತಾವು 1 ಲಕ್ಷ ರೂ. ನೀಡುವುದಾಗಿ ಪ್ರಕಟಿಸಿದರು.

ವಿವೇಕನಗರ ಮುಖಂಡ ಬಿಎಸ್‌ಎನ್‌ಎಲ್ ಗುರುಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿ, ಈ ವೃತ್ತಕ್ಕೆ ಬಸವೇಶ್ವರರ ಹೆಸರಿಡಬೇಕೆಂಬ ಪ್ರಸ್ತಾವನೆ ಮೂಡಿಬಂತು. ಇದಕ್ಕೆ ನಗರಸಭೆ ಮಾಜಿ ಸದಸ್ಯೆ ಕುಮುದಾ ಕೇಶವಮೂರ್ತಿ ಅವರು ನಗರಸಭೆಯಲ್ಲಿ ಅನುಮತಿ ಕೊಡಿಸಲು ಸಹಾಯ ಮಾಡಿದರು ಎಂದು ಕೃತಜ್ಞತೆ ಸಲ್ಲಿಸಿದರು.

ಕಾಡಾ ಅಧ್ಯಕ್ಷ ಪಿ. ಮರಿಸ್ವಾಮಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಮೂಡ್ಲುಪುರ ನಂದೀಶ್, ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಡಾ. ಶ್ವೇತಾ ಶಶಿಧರ್, ನಗರಸಭೆ ಮಾಜಿ ಸದಸ್ಯೆ ಕುಮುದಾ ಕೇಶವಮೂರ್ತಿ ಮಾತನಾಡಿದರು.

ಜಿ. ಶಶಿಧ, ಉದ್ಯಮಿ ಬಸವಟ್ಟಿಗೆ ಬಸವರಾಜು, ಸಿದ್ದಮಲ್ಲಪ್ಪ, ಯೋಗೀಶ್, ನಂದೀಶ್ ಕೊಮಾರನಪುರ, ದೊ.ರಾ.ಪೇಟೆ ಕುಮಾರ್, ನಾಗರಾಜು, ಕಿಲಗೆರೆ ಚಂದ್ರಶೇಖರ್, ಎಸ್‌ಜಿಎಂ ಪ್ರಭುಸ್ವಾಮಿ, ಸಿ. ನಾಗಣ್ಣ, ಡಿ.ಎಸ್. ಗಿರೀಶ್ ಮತ್ತಿತರರು ಉಪಸ್ಥಿತರಿದ್ದರು.

# ವಿಮರ್ಶಕ ಪ್ರೊ.ರಾಜಪ್ಪ ದಳವಾಯಿ ಕರೆ



**ಮೈಸೂರು:** ಪತ್ರಿಕೆ ದಿನನಿತ್ಯದ ಜೀವನಾಡಿ, ಪುಸ್ತಕ ತಾಯಿಗೆ ಸಮಾನ, ಹೀಗಾಗಿ ಪತ್ರಿಕೆಗಳಲ್ಲಿ ಕೆಲಸ ಮಾಡುವವರು ಪುಸ್ತಕಗಳ ಓದಿನ ಮೂಲಕ ಹೆಚ್ಚು ಸಕ್ರಿಯವಾಗಬೇಕಾದ ಅಗತ್ಯವಿದೆ ಎಂದು ವಿಮರ್ಶಕ ಪ್ರೊ. ರಾಜಪ್ಪ ದಳವಾಯಿ ಸಲಹೆ ನೀಡಿದರು.

ಚಿಂತನ ಚಿತ್ತಾರ ವೇದಿಕೆ ವತಿಯಿಂದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಹಮ್ಮಿಕೊಂಡಿದ್ದ ಪತ್ರಕರ್ತರು ಮತ್ತು ಪುಸ್ತಕ ಸಾಂಗತ್ಯ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು. ಪುಸ್ತಕಗಳು ನಮಗೆ ಜೀವನದ ಸಂಗಾತಿ ಆಗಬೇಕು, ಟಿವಿ, ಈಚೆಗಿನ ಮೊಬೈಲ್‌ಗಳು ಪುಸ್ತಕಗಳ ಶತ್ರುವಾಗಿವೆ. ಹೀಗಿರುವಾಗ ಪುಸ್ತಕಗಳನ್ನು ಉಳಿಸುವುದು ಹೇಗೆಂಬ ಬಗ್ಗೆ ಚಿಂತಿಸಬೇಕಾಗಿದೆ. ದಿನನಿತ್ಯದ ಜಂಜಾಟಗಳಿಂದ ಪುಸ್ತಕಗಳು ಬಿಡುಗಡೆ ಕೊಡಬಹುದಾಗಿವೆ ಎಂದರು.

ಚಿಂತನ ಚಿತ್ತಾರ ವೇದಿಕೆಯ ನಿಂಗಣ್ಣ ಚಿತ್ತಣ್ಣನವರ್ ಅವರ ಪುಸ್ತಕ ಪ್ರಕಾಶನ ಪ್ರೇಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ, ಕನ್ನಡ ಪುಸ್ತಕ ನಾಗರಿಕ ಸಮಾಜಕ್ಕೆ ಮಾದಕ ವಸ್ತುಗಳನ್ನು ಮಾರಾಟ ಮಾಡುವವರ ಮಧ್ಯೆ ಪುಸ್ತಕ ಮಾರುವವರೇ ಲೇಸು. ಪತ್ರಿಕೋದ್ಯಮ ಮತ್ತು ಪುಸ್ತಕ ಅವಳಿ ಜಳಿಗಳು. ಪುಸ್ತಕ ನಮ್ಮೊಟ್ಟಿಗೆ ಮಾತನಾಡುತ್ತವೆ. ಮನುಷ್ಯ ಚರಿತ್ರೆ ಆಗೂಹೋಗುಗಳು ಬಗ್ಗೆ ಉತ್ತಮ ಸಂಗಾತಿ ಪುಸ್ತಕಗಳಾಗಿವೆ ಎಂದರು. ಪತ್ರಿಕೋದ್ಯಮಿ ರಶ್ಮಿ ಕೋಟಿ ಮಾತನಾಡಿ, ನಮ್ಮ ಜೀವನವನ್ನು ಸ್ಕ್ರೀನ್ ಟೈಂ ಆವರಿಸಿದೆ. ಮಕ್ಕಳು ಸಹಾ ಮೊಬೈಲ್ ಚಟದಿಂದಾಗಿ ಕೇವಲ 15 ನಿಮಿಷ ಸಹಾ ಏಕಾಗ್ರತೆಯಂದ ಓದಲು ಸಾಧ್ಯವಾಗದಷ್ಟು ಸಾಮರ್ಥ್ಯ ಕಳೆದುಕೊಂಡಿದ್ದಾರೆ. ಪ್ರಸ್ತುತ ಸಮಾಜ ಜಾತಿ, ಧರ್ಮ, ಅಧಿಕಾರದ ಅಂತಸ್ತುಗಳಲ್ಲಿ ಮುಳುಗಿದೆ. ಇವುಗಳ ನಡುವೆ ತಮಗೆ ಬಂದ ಯಾವುದೋ ಮೆಸೇಜನ್ನು ಅವುಗಳ ಸತ್ಯಾಸತ್ಯತೆ ತಿಳಿಯದೇ ಎಲ್ಲರಿಗೂ ಕಳಿಸುವವರ ಸಂಖ್ಯೆ ಕಡಿಮೆಯೇನಲ್ಲ ಎಂದರು.

ಮುಖ್ಯ ವಾಹಿನಿ ಮಾಧ್ಯಮಗಳು ಸಹಾ ಪ್ರಧಾನಿ ಮೋದಿ ಯಾವುದೋ ಅಂಗಡಿಯಲ್ಲಿ ಬೇಲ್ ಪೂರಿ ತಿಂದರೆ ಅದನ್ನೇ ದೊಡ್ಡ ಸುದ್ದಿ ಮಾಡುತ್ತವೆ. ಆದರೆ ಮಣಿಪುರದಲ್ಲಿ ಮತ್ತೆ ಭುಗಿಲೆದ್ದ ಹಿಂಸಾಚಾರ, ನಾಡು, ನುಡಿ, ನೆಲ, ಜಲಕ್ಕಾಗಿ ಹೋರಾಟ ಮಾಡುವವರನ್ನು ಕಡೆಗಣಿಸುತ್ತವೆ. ಇದಕ್ಕೆ ಮುಖ್ಯ ಕಾರಣ ಓದಿನ ಕೊರತೆಯಿಂದಾಗಿ ವಿವೇಚನಾ ಶಕ್ತಿ ಕಳೆದುಕೊಂಡಿರುವುದಾಗಿದೆ. ಹೀಗಾಗಿ ಪತ್ರಕರ್ತರು ಓದಿಗೆ ಹೆಚ್ಚು ಗಮನ ನೀಡಬೇಕೆಂದು ಸಲಹೆ ನೀಡಿದರು. ಪತ್ರಕರ್ತ ಕೆ.ನರಸಿಂಹಮೂರ್ತಿ, ಚಿಂತನ ಚಿತ್ತಾರದ ನಿಂಗರಾಜು ಚಿತ್ತಣ್ಣನರ್ ಇದ್ದರು.

# ಯಡಪುರ ಸಮೀಪದಲ್ಲಿ ಜೆಎಸ್‌ಎಸ್ ಸಂಸ್ಥೆಗಳ ಸಮುಚ್ಚಯ ಕಟ್ಟಡಗಳಿಗೆ ಭೂಮಿ ಪೂಜೆ

**ಚಾಮರಾಜನಗರ:** ನಗರದ ಗುಂಡ್ಲುಪೇಟೆ ರಸ್ತೆಯಲ್ಲಿರುವ ಗ್ರಾಮಾಂತರ ಪೊಲೀಸ್ ಠಾಣೆ ಸಮೀಪದಲ್ಲಿ ಜೆಎಸ್‌ಎಸ್ ಪಬ್ಲಿಕ್ ಸ್ಕೂಲ್, ನರ್ಸಿಂಗ್ ಶಾಲೆ, ನರ್ಸಿಂಗ್ ಕಾಲೇಜ್, ಅಲೈಡ್ ಹೆಲ್ತ್ ಸೈನ್ಸ್ ಕಾಲೇಜ್ ಮತ್ತು ವಿದ್ಯಾರ್ಥಿನಿಲಯಗಳ ನೂತನ ಕಟ್ಟಡಗಳಿಗೆ ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳ ಸಾನಿಧ್ಯದಲ್ಲಿ ವಿವಿಧ ಮಠಾಧೀಶರು ಜಿಲ್ಲೆಯ ಶಾಸಕರು,ಅಧಿಕಾರಿಗಳು ಭೂಮಿಪೂಜೆ ನೆರವೇರಿಸಿದರು.

ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳ ಸಾನಿಧ್ಯದಲ್ಲಿ ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎ.ಆರ್.ಕೃಷ್ಣಮೂರ್ತಿ, ಹೆಂ. ಗಣೇಶಪ್ರಸಾದ್, ಕಾಡಾಧ್ಯಕ್ಷ ಪಿ.ಮರಿಸ್ವಾಮಿ, ಚೂಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ವಿನೋತ್ ಪ್ರಿಯ, ಜಿಲ್ಲಾಧಿಕಾರಿ ಶ್ರೀರೂಪ, ಜಿ.ಪಂ, ಸಿಇಓ ಮೋನಾರೋತ್, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜು ಭೂಮಿಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಜಿ. ಎನ್.ನಂಜುಂಡಸ್ವಾಮಿ, ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಮಾಜಿ ಸದಸ್ಯರಾದ ಕೆ.ಪಿ.ಸದಾಶಿವಮೂರ್ತಿ, ನವೀನ್ ಕೆರೆಹಳ್ಳಿ, ರತ್ನಮ್ಮ, ನಗರಸಭಾ ಮಾಜಿ ಅಧ್ಯಕ್ಷೆ ಚಿನ್ನಮ್ಮ, ಜೆಎಸ್ ಎಸ್ ಮಹಾವಿದ್ಯಾಪೀಠ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ. ಆರ್.ಮಹೇಶ್, ಜೆಎಸ್ ಸಾಮಾನ್ಯ ಆಡಳಿತ ವಿಭಾಗದ ನಿರ್ದೇಶಕ ಶಂಕರಪ್ಪ, ಸ್ಥಾನಿಕ ಅಭಿಯಂತರಾದ ಎಸ್.ಮಹೇಶ್, ಪಬ್ಲಿಕ್ ಶಾಲೆ ಪ್ರಾಂಶುಪಾಲ ಉಮೇಶ್, ನರ್ಸಿಂಗ್ ಕಾಲೇಜು ಪ್ರಾಂಶುಪಾಲ ವಿನಯ್ ಕುಮಾರ್, ಅಲೈಡ್ ಹೆಲ್ತ್ ಸೈನ್ಸ್ ವಿಭಾಗದ ಸಂಯೋಜಕ ಶಿವನಾಂಕಾರಪ್ಪ, ಸಾರ್ವಜನಿಕ ಸಂಪರ್ಕ ಅಧಿಕಾರಿ ಆರ್.ಎಂ.ಸ್ವಾಮಿ, ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಬಿ.ಕೆ.ರವಿಕುಮಾರ್, ಮುಖಂಡರಾದ ಮೂಡ್ಲುಪುರ ನಂದೀಶ್, ನಿಜಗುಣರಾಜು, ಯು.ಎಂ.ಪ್ರಭುಸ್ವಾಮಿ, ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಜೆಎಸ್ ಅಧಿಕಾರಿವರ್ಗದವರು, ವಿದ್ಯಾರ್ಥಿಗಳು, ಪೋಷಕರು ಹಾಗೂ ಸಾರ್ವಜನಿಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



# ಇಂದು ರಾಜ್ ಅಭಿನಯದ ಕರೋಕೆ ಗಾಯನ

**ಮೈಸೂರು:** ಮಂಡಿ ಮೊಹಲ್ಲಾ ಎಂ.ಬಿ. ಅನಂತಸ್ವಾಮಿ ಸಾಂಸ್ಕೃತಿಕ ಮತ್ತು ಸೇವಾ ಟ್ರಸ್ಟ್ ವತಿಯಿಂದ ಏ.24 ರ ಮಧ್ಯಾಹ್ನ 12 ರಿಂದ ರಾತ್ರಿ 8.30 ರವರೆಗೆ ನಗರದ ಪುರಭವನದಲ್ಲಿ ಡಾ. ರಾಜ್‌ಕುಮಾರ್ ಕಂಠ ಸಿರಿಯಲ್ಲಿ ಬಂದಿರುವ ಡಾ. ರಾಜ್‌ಕುಟುಂಬದವರು ನಟಿಸಿರುವ ಚಿತ್ರ ಗೀತೆಗಳ ಕರೋಕೆ ಗಾಯನ ಕಾರ್ಯಕ್ರಮವಿದೆ ಎಂದು ಟ್ರಸ್ಟ್ ಅಧ್ಯಕ್ಷ ಎ. ಕಾಂತರಾಜು ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಉಮ್ಮತ್ತೂರು ಇಂದುಶೇಖರ್, ರಘುರಾಂ ವಾಜಪೇಯಿ, ಅಂಶಿ ಪ್ರಸನ್ನಕುಮಾರ್ ಅತಿಥಿಗಳಾಗಿರುವರು. ಈ ವೇಳೆ ಸುಮಾರು 80 ಹಾಡುಗಳನ್ನು ಕರೋಕೆ ಮೂಲಕ ಪ್ರಸ್ತುತ ಪಡಿಸಲಾಗುವುದು. ಎಲ್ಲರಿಗೂ ಉಚಿತ ಪ್ರವೇಶವಿದೆ ಎಂದರು.

ಶ್ರೀಧರ್ ಗುಡ್ಡಪ್ಪ, ಚಂದ್ರು, ಜಯಲಕ್ಷ್ಮಿ, ವಿಜಯಶ್ರೀ, ಚಂದ್ರಶೇಖರ್, ತಾಂಡವಮೂರ್ತಿ ಇದ್ದರು.




# ರಾಮನಗರದಲ್ಲಿ ವಾಸವಿ ಜಯಂತಿ ಆಚರಣೆ ಆರಂಭ

**ರಾಮನಗರ:** ನಗರದ ಎಂ.ಜಿ.ರಸ್ತೆಯಲ್ಲಿರುವ ಶ್ರೀ ಕನ್ಯಕಾಪರಮೇಶ್ವರಿ ಅಮ್ಮನವರ ದೇವಾಲಯದಲ್ಲಿ ಶ್ರೀ ವಾಸವಿ ಜಯಂತಿ ಆಚರಣೆ ಗುರುವಾರ ಆರಂಭವಾಗಿದೆ. ನಾಲ್ಕು ದಿನಗಳ ಕಾಲ ನಡೆಯುವ ಈ ಆಚರಣೆಯಲ್ಲಿ ಗುರುವಾರ ಬೆಳ್ಳಂಬೆಳಿಗ್ಗೆ , ವಾಸವಿ ಕ್ಲಬ್ ಪ್ರಾಯೋಜಕತ್ವದಲ್ಲಿ ಸುಪ್ರಭಾತ ಸೇವೆ ಮತ್ತು ಗೋಪೂಜೆಯೊಂದಿಗೆ ಧಾರ್ಮಿಕ ಕೈಂಕರ್ಯಗಳು ಆರಂಭವಾದವು.

ನಂತರ ಶ್ರೀ ಕನ್ಯಕಾಪರಮೇಶ್ವರಿ ಅಮ್ಮನವರಿಗೆ 108 ಲೀಟರ್ ಹಾಲಿನ ಅಭಿಷೇಕ ನೆರವೇರಿಸಲಾಯಿತು. ತದ ನಂತರ ಶ್ರೀಮಾತೆಗೆ ಹರಿಶಿನ ಕುಂಕುಮ ಮತ್ತು ಹೂವಿನ ಅಲಂಕಾರ ನೆರವೇರಿತು. ಆರ್ಯ ವೈಶ್ಯ ಸಮುದಾಯದಲ್ಲಿ 60ನೇ ವಸಂತವನ್ನು ಪೂರೈಸಲಿರುವವರ ಪರವಾಗಿ ಆರ್.ಜೆ.ಟ್ರಸ್ಟ್‌ವತಿಯಿಂದ ಸಂಕಲ್ಪ, ಹೋಮ ಮತ್ತು ಮಹಾಮಂಗಳಾರತಿ ಮತ್ತು ಸಂತರ್ಪಣೆ ಸೇವೆ ನೆರವೇರಿತು. ವಾಸವಿ ವನಿತಾ ಸಂಘ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಕ್ತರು ಶ್ರೀ ಕನ್ಯಕಾಪರಮೇಶ್ವರಿ ಅಮ್ಮನವರ ಉತ್ಸವ ಮೂರ್ತಿಗೆ ತಾವೇ ಸ್ವಯಂ ಹಾಲಿನ ಅಭಿಷೇಕ ನೆರವೇರಿಸುವ ಅವಕಾಶ ಕಲ್ಪಿಸಲಾಗಿತ್ತು.

**▶▶ ನಾಲ್ಕು ದಿನಗಳ ಕಾಲದ ಆಚರಣೆ ಏ.26ರ ಭಾನುವಾರ ಸಂಪನ್ನ**

ಏಪ್ರಿಲ್ 26ರ ಭಾನುವಾರ ವಾಸವಿ ಜಯಂತಿ ಆಚರಣೆ ಸಂಪನ್ನವಾಗಲಿದ್ದು, ಅಂದು ಸುಪ್ರಭಾತ ಸೇವೆಯ ನಂತರ ದೇವಾಲಯದಲ್ಲಿರುವ ಎಲ್ಲ ದೇವತಾ ಮೂರ್ತಿಗಳಿಗೂ ಪಂಚಾಮೃತ ಅಭಿಷೇಕ ಮತ್ತು ವಿಶೇಷ ಹೂವಿನ ಅಲಂಕಾರ ಸೇವೆ ನೆರವೇರಲಿದೆ. ನಂತರ ನಗರದ ಪ್ರಮುಖ ಬೀದಿಗಳಲ್ಲಿ ಅಮ್ಮನವರ ಮೂರ್ತಿಯ ಕೈ ಉತ್ಸವ ನೆರವೇರುವುದು. ವಾಸವಿ ವನಿತಾ ಸಂಘದವತಿಯಿಂದ ಕನ್ನಿಕಾಪೂಜೆ, ಬಾಲನಾಗರ ಪೂಜೆ, ಸುಮಂಗಲಿ ಪೂಜೆ



ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮಧ್ಯಾಹ್ನ 1 ಗಂಟೆಗೆ ಷೋಡಷೋಪಚಾರ ಪೂಜೆ ಮಹಾಮಂಗಳರಾತಿ ನಂತರ ಸಂತರ್ಪಣೆ ನೆರವೇರುವುದು. ಸಂಜೆ 6.30ಕ್ಕೆ ಶ್ರೀಮಾತೆಯ ಉತ್ಸವ ಮೂರ್ತಿಯ ಪಲ್ಲಕ್ಕಿ ಉತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಆರ್ಯ ವೈಶ್ಯ ಸಭಾ, ರಾಮನಗರದ ಪ್ರಕಟಣೆ ತಿಳಿಸಿದೆ. ವಾಸವಿ ಜಯಂತಿ ಆಚರಣೆಗೆ ಆರ್ಯ ವೈಶ್ಯ ಸಭಾ, ವಾಸವಿ ವನಿತಾ ಸಂಘ, ವಾಸವಿ ಕ್ಲಬ್ ರಾಮನಗರ, ಶ್ರೀ ವಾಸವಿ ಯೂತ್ಸ್ ಫೋರಂ ಮತ್ತು ವಾಸವಿ ವಿದ್ಯಾನಿಕೇತನ ಟ್ರಸ್ಟ್‌ನ ಪದಾಧಿಕಾರಿಗಳು ಮತ್ತು ಸದಸ್ಯರ ಸಂಯುಕ್ತ ಸಹಕಾರದಲ್ಲಿ ಆಯೋಜನೆಯಾಗಿದೆ.

# ಕೆರೆಗಳ ಸರ್ವೆ ನಡೆಸಿ, ಒತ್ತುವರಿ ತೆರವುಗೊಳಿಸಿ: ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು

**ಮೈಸೂರು:** ಕೆರೆಗಳ ಸರ್ವೆ ನಡೆಸಿ, ಒತ್ತುವರಿ ತೆರವುಗೊಳಿಸುವಂತೆ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲಾ ಮಟ್ಟದ ಕೆರೆ ಸಂರಕ್ಷಣಾ ಪಡೆಯ ಸಭೆಯ ಅಧ್ಯಕ್ಷತೆಯನ್ನು ವಹಿಸಿ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ಪರಿಸರ ಸಂರಕ್ಷಣೆ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿ ಎಲ್ಲಾ ಕೆರೆಗಳಿಗೆ ಭೇಟಿ ನೀಡಿ ಕೆರೆ ನೀರಿನ ಶುದ್ಧತೆಯ ಬಗ್ಗೆ ಮತ್ತು ಅಲ್ಲಿನ ನೈರ್ಮಲ್ಯ ಕಾಪಾಡಿಕೊಳ್ಳುವ ಬಗ್ಗೆ ಸೂಕ್ತ ಕ್ರಮ ವಹಿಸುವಂತೆ ಸೂಚಿಸಿದರು. ಮೈಸೂರು ನಗರದ ಎಲ್ಲಾ ಕೆರೆಗಳು ಶುದ್ಧೀಕರಣ ಗೊಳ್ಳಲು ಸೂಕ್ತ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿದರು. ಅಲ್ಲದೆ ಕಾರ್ಖಾನೆಗಳಿಂದ ಹಾಗೂ ಇನ್ನಿತರ ಮೂಲಗಳಿಂದ ಅಶುದ್ಧ ನೀರು ಸೇರುತ್ತಿದ್ದಲ್ಲಿ ಅದನ್ನು ತಪ್ಪಿಸಲು ಕೂಡಲೇ ಕ್ರಮ ವಹಿಸಬೇಕೆಂದರು. ಜಿಲ್ಲೆಯ ಎಲ್ಲ ಹಶೀಲ್ದಾರರುಗಳಿಗೆ ಒಂದು ವಾರದೊಳಗೆ ಕೆರೆ ಒತ್ತುವರಿ ತೆರವುಗೊಳಿಸುವಂತೆ ನಿರ್ದೇಶನ ನೀಡಿದರು. ಸರ್ವೆ ಇಲಾಖೆಯ ಅಧಿಕಾರಿಗಳಿಗೆ ಎಲ್ಲಾ ಕೆರೆಗಳ ಸರ್ವೆ ಗಳನ್ನು ಕೂಡಲೇ ಮಾಡಿ ದಾಖಲೀಕರಣ ಮಾಡುವಂತೆ ಸೂಚನೆ ನೀಡಿದರು. ಸಭೆಯಲ್ಲಿ ಡಿ.ಡಿ.ಎಲ್.ಆರ್, ತಹಶೀಲ್ದಾರ್ ಸೇರಿ ಅನೇಕರು ಹಾಜರಿದ್ದರು.



# ಕ್ಷೇತ್ರ ಮರುವಿಂಗಡನೆಗೆ ವಿರೋಧ

**ಕೇಂದ್ರ ಸರ್ಕಾರ ಮಹಿಳಾ ಮೀಸಲಾತಿ ಜಾರಿಗೊಳಿಸಲು ಲತಾರಾಜಶೇಖರ ಜತ್ತಿ ಆಗ್ರಹ ಕಾಂಗ್ರೆಸ್ ಮಹಿಳಾ ಮೀಸಲಾತಿ ವಿರೋಧಿಯಲ್ಲ**

**ಚಾಮರಾಜನಗರ:** ಕೇಂದ್ರ ಸರ್ಕಾರ ಮಹಿಳಾ ಮೀಸಲಾತಿ ಜಾರಿಗೊಳಿಸಬೇಕು ಎಂದು ಕಾಂಗ್ರೆಸ್ ಮಹಿಳಾ ವಿಭಾಗದ ರಾಜ್ಯ ಪ್ರಧಾನ ಕಾರ್ಯದರ್ಶಿ ಲತಾರಾಜಶೇಖರ ಜತ್ತಿ ಒತ್ತಾಯಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ ಕೇಂದ್ರ ಸರ್ಕಾರ ಪಂಚರಾಜ್ಯಗಳ ಚುನಾವಣೆ ನಡೆಯುವ ಸಂದರ್ಭದಲ್ಲಿ ನಿಸ್ವಾರ್ಥದಿಂದ ಮಹಿಳಾ ಮೀಸಲಾತಿ ಜಾರಿಗೊಳಿಸಲು ಮುಂದಾಗಿಲ್ಲ. ಸ್ವಾರ್ಥದಿಂದ ಕರ್ನಾಟಕ ರಾಜ್ಯಕ್ಕೆ ಅನ್ಯಾಯವಾಗುವ ರೀತಿಯಲ್ಲಿ ಕ್ಷೇತ್ರ ವಿಂಗಡನೆಯನ್ನು ಮಹಿಳಾ ಮೀಸಲಾತಿ ಲಿಂಕ್ ಮಾಡಿ ಜಾರಿ ಮಾಡುವುದಿಂದ ಅದು ರದ್ದಾಯಿತು. ಯಾವುದೇ ಷರತ್ತುಗಳಿಲ್ಲದೆ ಜನಗಣತಿ ಆಧಾರದ ಮೇಲೆ ಕೇಂದ್ರ ಸರ್ಕಾರ ಮಹಿಳಾ ಮೀಸಲಾತಿ ಜಾರಿಗೆ ತರಬೇಕು ಇಲ್ಲದಿದ್ದರೆ ರಾಜ್ಯಾದ್ಯಂತ ಬೀದಿಗಿಳಿದು ಹೋರಾಟ ಮಾಡಬೇಕಾಗುತ್ತದೆ' ಎಂದು ಎಚ್ಚರಿಸಿದರು.

ಕಾಂಗ್ರೆಸ್ ಮೊದಲಿನಿಂದಲ್ಲೂ ಮಹಿಳೆಯರು,



ಶ್ರೀಸಾಮಾನ್ಯರು, ರೈತರ ಪರವಾಗಿದೆ. ನರೇಂದ್ರಮೋದಿ ನೇತೃತ್ವದ ಕೇಂದ್ರ ಸರ್ಕಾರ ಮಹಿಳೆಯರ ಪರ ಯಾವುದೇ ಕಾರ್ಯಕ್ರಮ ಮಾಡುತ್ತಿಲ್ಲ. ಮಹಿಳೆಯರಿಗೆ ತುಂಬಾ ಅನ್ಯಾಯ ಮಾಡುತಿದೆ ಎಂದು ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ನಗರಸಭಾ ಮಾಜಿ ಅಧ್ಯಕ್ಷೆ ಚಿನ್ನಮ್ಮ, ಚಾಮರಾಜನಗರ ಗ್ರಾಮಾಂತರ ಮಹಿಳಾ ವಿಭಾಗದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷೆ ಶಕುಂತಲಾ, ಹನೂರು ವಿಧಾನಸಭಾ ಕ್ಷೇತ್ರದ ಮಹಿಳಾ ಬ್ಲಾಕ್ ಕಾಗ್ರೆಸ್ ಅಧ್ಯಕ್ಷೆ ಎಂ.ಸುವರ್ಣ ಹಾಜರಿದ್ದರು.

**ಗ್ರಾಮಾಂತರ ಮಹಿಳಾ ಕಾಂಗ್ರೆಸ್ ಕಾರ್ಯಕರ್ತರ ಹೋರಟ**

# ಶೀಘ್ರ ಮಹಿಳಾ ಮೀಸಲು ಜಾರಿಗೆ ಆಗ್ರಹಿಸಿ ಪ್ರತಿಭಟನೆ

**ಮೈಸೂರು:** ಮಹಿಳಾ ಮೀಸಲಾತಿ ಕೂಡಲೇ ಜಾರಿಗೊಳಿಸಬೇಕೆಂದು ಆಗ್ರಹಿಸಿ ನಗರದಲ್ಲಿ ಗ್ರಾಮಾಂತರ ಮಹಿಳಾ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ನಗರದ ಇಂದಿರಾಗಾಂಧಿ ಕಾಂಗ್ರೆಸ್ ಭವನದ ಎದುರು ಜಮಾವಣೆಗೊಂಡ ಮಹಿಳಾ ಕಾರ್ಯಕರ್ತೆಯರು ಸುಳ್ಳುಗಾರ ಪ್ರಧಾನಿಗೆ ಧಿಕ್ಕಾರ, ಬಿಜೆಪಿಯ ಕಪಟ ನಾಟಕಕ್ಕೆ ಧಿಕ್ಕಾರ ಎಂಬಿತ್ಯಾದಿ ನಾಮಫಲಕಗಳನ್ನು ಹಿಡಿದು ಆಕ್ರೋಶ ವ್ಯಕ್ತಪಡಿಸಿದರು.




ರಾಜ್ಯ ಮಹಿಳಾ ಪ್ರಧಾನ ಕಾರ್ಯದರ್ಶಿ ತ್ರಿವೇಣಿ ಮಾತನಾಡಿ, ಶೇ.33ರಷ್ಟು ಮೀಸಲಾತಿಯನ್ನು 2010ರಲ್ಲಿ ಯುಪಿಎ ಸರ್ಕಾರ ಅಂದೇ ಬಿಲ್ ಪಾಸ್ ಮಾಡಿ ಅನೇಕ ಅಡೆತಡೆಗಳಿಂದ ಹಾಗೇ ಉಳಿದಿತ್ತು. 2023ರ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಣೆ ಮಾಡಿ ಅಂದೂ ಸಹ ಬಿಜೆಪಿ ಜಾರಿಗೆ ತಂದಿಲ್ಲ. ಈಗ ಚುನಾವಣಾ ಕಾರಣಕ್ಕಾಗಿ ಮಹಿಳಾ ಮೀಸಲಾತಿ ಜಾರಿಗೆ ತಂದಿದ್ದರಿಂದ ಕಾಂಗ್ರೆಸ್ ಮೀಸಲಾತಿ ಜಾರಿಗೆ ವಿರೋಧ ಮಾಡಿದೆ ಎಂದರು.

ಮಾತ್ರವಲ್ಲದೆ, ಕೇವಲ ಮಹಿಳಾ ಮೀಸಲಾತಿ ಜಾರಿಗೆ ತಂದಿದ್ದರೆ ಸ್ವಾಗತಿಸುತ್ತಿದ್ದೇವು. ಆದರೆ, ಬಿಜೆಪಿ ಲೋಕಸಭಾ ಕ್ಷೇತ್ರ ಪುನರ್ ವಿಂಗಡಣೆಗೆ ಮುಂದಾಗಿದೆ. ಇದರಿಂದ ಉತ್ತರ ಭಾರತದಲ್ಲಿ ಎಂದಿನಂತೆ ಹೆಚ್ಚಿನ ಕ್ಷೇತ್ರಗಳು ಮಾರ್ಪಾಡಾಗಿ ದಕ್ಷಿಣ ಭಾರತಕ್ಕೆ ಭಾರೀ ಅನ್ಯಾಯ ಆಗಲಿದೆ. ಈ ಹಿನ್ನೆಲೆಯಲ್ಲಿ ಕ್ಷೇತ್ರ ಮರು ವಿಂಗಡಣೆಗೆ ನಮ್ಮ ವಿರೋಧವಿದೆ ಎಂದು ಹೇಳಿದರು.

ಜತೆಗೆ ಒಬಿಸಿ ಮಹಿಳಾ ಮೀಸಲಾತಿ ಪ್ರತ್ಯೇಕ ಮೀಸಲಾತಿ ಆಗಬೇಕು. ಜನಗಣತಿ ನಂತರ ಲೋಕಸಭಾ ಕ್ಷೇತ್ರ ಪುನರ್ ವಿಂಗಡಣೆ ಆಗಬೇಕಿದೆ. ಇದೆಲ್ಲವನ್ನು ಮರೆಮಾಚಿ ಬಿಜೆಪಿ ಇದರಲ್ಲೂ ರಾಜಕೀಯ ಮಾಡುತ್ತಿರುವುದನ್ನು ಖಂಡಿಸಿ ಪ್ರತಿಭಟಿಸುತ್ತಿರುವುದಾಗಿ ಹೇಳಿದರು.

ಮೈಸೂರು ಜಿಲ್ಲಾ ಗ್ರಾಮಾಂತರ ಮಹಿಳಾ ಕಾಂಗ್ರೆಸ್ ಡಿ.ಪ್ರೇಮಾ ಮಾತನಾಡಿ, ಕೇಂದ್ರ ಸರ್ಕಾರದ ಮಹಿಳಾ ಮೀಸಲಾತಿ ಕಪಟ ನಾಟಕವನ್ನು ಬಯಲು ಮಾಡಲು ಜಿಲ್ಲಾ ಮಹಿಳಾ ಕಾಂಗ್ರೆಸ್ ನಿಂದ ಪ್ರತಿಭಟಿಸಲಾಯಿತು. 2023ರಿಂದಲೂ ಮಹಿಳಾ ಮೀಸಲಾತಿ ಜಾರಿ ಮಾಡದೇ ಬಿಜೆಪಿ ನಾಟಕ ಮಾಡುತ್ತಿದೆ. ಈ ನಡುವೆ ಕ್ಷೇತ್ರ ವಿಂಗಡಣೆಯ ನಾಟಕ ಆಗುತ್ತಿದೆ. ಹೀಗಾಗಿ ಕೇಂದ್ರ ಬಿಜೆಪಿ ಈ ಕೂಡಲೇ ಮಹಿಳಾ ಮೀಸಲು ಜಾರಿಗೊಳಿಸಬೇಕೆಂದು ಆಗ್ರಹಿಸಿದರು.

ಪರ್ವೀನ್ ತಾಜ್ ರಾಜ್ಯ ಕಾರ್ಯದರ್ಶಿ ಮಹಿಳಾ ಕಾಂಗ್ರೆಸ್, ಸಹಕಾರ ಘಟಕದ ಮಹಿಳಾ ಅಧ್ಯಕ್ಷೆ ತಾರಾ, ಮೈಸೂರು ಗ್ರಾಮಾಂತರ ಜಿಲ್ಲಾ ಕಾರ್ಯದರ್ಶಿ ಶ್ರೀಲಕ್ಷ್ಮಿ, ಜಿಲ್ಲೆಯ ಎಲ್ಲಾ ಬ್ಲಾಕ್, ಮಹಿಳಾ ಪದಾಧಿಕಾರಿಗಳು ಇದ್ದರು.

## ಫಾಸ್ಟ್ ಫುಡ್ ವ್ಯಾಪಾರಿ ಪುತ್ರಿ ಎ.ಎಸ್.ಮಾನ್ವಿ ಸಾಧನೆ

**ಮೈಸೂರು:** ಮೇಟಗಳ್ಳಿಯ ಬಿಎಂಸಿ ನಗರದ ನಿವಾಸಿ ಫಾಸ್ಟ್ ಫುಡ್ ವ್ಯಾಪಾರಿ ಎ.ಎಸ್.ಸತೀಶ್ ಹಾಗೂ ಸೌಮ್ಯ ದಂಪತಿಯ ದ್ವಿತೀಯ ಪುತ್ರಿ ನಗರದ ನಿರ್ಮಲಾ ಪಬ್ಲಿಕ್ ಶಾಲೆಯ ಎ.ಎಸ್.ಮಾನ್ವಿ 625ಕ್ಕೆ 617ಅಂಕ ಪಡೆಯುವ ಮೂಲಕ ಶಾಲೆಗೆ ಪ್ರಥಮರಾಗಿ ಹೊರ ಹೊಮ್ಮಿ ಸಾಧನೆ ಮಾಡಿದ್ದಾರೆ.

ಕನ್ನಡ(124), ಇಂಗ್ಲಿಷ್(98), ಹಿಂದಿ(100), ಗಣಿತ (95), ವಿಜ್ಞಾನ(100), ಸಮಾಜ ವಿಜ್ಞಾನ(100) ಅಂಕಗಳನ್ನು ಪಡೆದುಕೊಂಡಿದ್ದಾರೆ. ಈ ಕುರಿತು ಮಾತನಾಡಿದ ಅವರು, ಈ ಫಲಿತಾಂಶ ಖುಷಿ ತರಿಸಿದೆ, ಹೆಚ್ಚು ಅಂಕ ಬರುವ ನಿರೀಕ್ಷೆಯಿತ್ತು. ಶಾಲಾ ಶಿಕ್ಷಕ, ಪೋಷಕರ ಬೆಂಬಲವೇ ನನ್ನ ಸಾಧನೆಗೆ ಕಾರಣವಾಗಿದೆ. ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಿ ಐಎಎಸ್, ಕೆಎಎಸ್ ಆಗಬೇಕೆಂಬ ಹಂಬಲ ಇದೆ ಎಂದು ಸಂತಸ ಹಂಚಿಕೊಂಡರು.

## ಎಂಇಎಸ್ ಶಾಲೆಗೆ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.100 ರಷ್ಟು ಫಲಿತಾಂಶ






**ಮಂಡ್ಯ:** ಕಾವೇರಿ ನಗರದ ಮಂಡ್ಯ ಎಜುಕೇಷನ್ ಸೊಸೈಟಿ(ಎಂಇಎಸ್)ಶಾಲೆಯು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.100 ರಷ್ಟು ಫಲಿತಾಂಶ ಪಡೆದಿದೆ.

ಪರೀಕ್ಷೆಯಲ್ಲಿ ಶಾಲೆಯ ವಿದ್ಯಾರ್ಥಿಗಳಾದ ಎಂ.ವರ್ಷಿಣಿ ಶೇ.97, ಹೆಚ್.ಎಂ.ಮನೋಹರ್ ಶೇ.96, ಎಲ್. ಆರ್.ಸಂಗೀತ ಶೇ.96, ಹರ್ಷಿತ ಶೇ.90 ರಷ್ಟು ಅಂಕ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ.

ಪರೀಕ್ಷೆ ತೆಗೆದುಕೊಂಡಿದ್ದ ಎಲ್ಲಾ ವಿದ್ಯಾರ್ಥಿಗಳು ಉತ್ತಮ ಅಂಕಗಳನ್ನು ಪಡೆದು ಉತ್ತೀರ್ಣರಾಗಿದ್ದಾರೆ ಎಂದು ಶಾಲೆ ಕಾರ್ಯದರ್ಶಿ ಡಾ.ಧರಣೇಂದ್ರಯ್ಯ, ಮುಖ್ಯಶಿಕ್ಷಕಿ ಅನಿತ ತಿಳಿಸಿದ್ದಾರೆ.

## ಇಂದು 'ರಾಜರತ್ನ ಗಾನಯಾನ' ಕಾರ್ಯಕ್ರಮ



**ತುಮಕೂರು:** ಕನ್ನಡ ನಾಡಿನ ವರನಟ, ಪದ್ಮಭೂಷಣ, ನಟ ಸಾರ್ವಭೌಮ ಡಾ: ರಾಜಕುಮಾರ್ ಜಯಂತಿ ಅಂಗವಾಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಮಹಾನಗರಪಾಲಿಕೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕನ್ನಡ ಸಾಹಿತ್ಯ ಪರಿಷತ್ತು, ತುಮಕೂರು ತಾಲ್ಲೂಕು ಹಬ್ಬತ್ತನಹಳ್ಳಿಯ ತೇಜಸ್ವಿನಿ ಸಾಂಸ್ಕೃತಿಕ ಕಲಾವೃಂದದ ಸಹಯೋಗದಲ್ಲಿ ಏಪ್ರಿಲ್ 24ರಂದು ಬೆಳಿಗ್ಗೆ 11 ಗಂಟೆಗೆ ನಗರದ ಕನ್ನಡಭವನದಲ್ಲಿ "ರಾಜರತ್ನ ಗಾನಯಾನ" ಡಾ: ರಾಜಕುಮಾರ್ ಚಿತ್ರಗೀತೆಗಳ ಗಾಯನ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಕಾರ್ಯಕ್ರಮದಲ್ಲಿ ಜಿಲ್ಲೆಯ ಜನಪ್ರತಿನಿಧಿಗಳು, ಗಣ್ಯರು, ಅಧಿಕಾರಿಗಳು, ಕಲಾವಿದರು ಭಾಗವಹಿಸಲಿದ್ದಾರೆ. ಡಾ: ರಾಜ್ ಅಭಿಮಾನಿಗಳು ಸೇರಿದಂತೆ ವಿವಿಧ ಶಾಲಾ ಕಾಲೇಜಿನ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಜಿ. ಹಿಮಂತರಾಜು ಮನವಿ ಮಾಡಿದ್ದಾರೆ.


# ದಾಖಲೆಯ ಎಸ್ ಎಸ್ ಎಲ್ಸಿ ಫಲಿತಾಂಶ

## ಜಿಲ್ಲೆಗೆ ಶೇ.94.05 ಫಲಿತಾಂಶ, ಜಿಲ್ಲೆಗೆ ಇಬ್ಬರೂ ಬಾಲಕಿಯರು ಟಾಪರ್

ಮೈಸೂರು: ಈ ಬಾರಿ ಎಸ್‌ಎಸ್‌ಎಲ್ ಸಿ ಫಲಿತಾಂಶದಲ್ಲಿ ಮೈಸೂರು ಜಿಲ್ಲೆ ಶೇ.94.05 ಫಲಿತಾಂಶಕ್ಕೇರುವ ಮೂಲಕ ಐತಿಹಾಸಿಕ ದಾಖಲೆ ಬರೆದಿದ್ದು, ತಾಲ್ಲೂಕಿನ ಕರ್ನಾಟಕ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿ ಆರ್.ಮಧುರಿ ಮತ್ತು ವಿಜಯ ವಿಠಲ ಶಾಲೆಯ ಮನಸ್ವಿನಿ 624 ಅಂಕಗಳಿಸುವ ಮೂಲಕ ಜಿಲ್ಲೆಗೆ ಟಾಪರ್ ಆಗಿ ಹೊರ ಹೊಮ್ಮಿದ್ದಾರೆ.



ಈ ಕುರಿತು ಮಾತನಾಡಿದ ಡಿಡಿಪಿಐ ಉದಯಕುಮಾರ್ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ಮೈಸೂರು ಜಿಲ್ಲೆ ಶೇ.94.05 ಫಲಿತಾಂಶಕ್ಕೇರಿದೆ. 703 ಶಾಲೆಗಳ ಪೈಕಿ 247 ಶೇ.100ರಷ್ಟು ಫಲಿತಾಂಶಗಳಿಸಿದೆ. 16 ವಿದ್ಯಾರ್ಥಿಗಳು 620ಕ್ಕಿಂತ ಹೆಚ್ಚು ಅಂಕಗಳಿಸಿದ್ದಾರೆ. ಮೈಸೂರು ಜಿಲ್ಲೆ ಕೆ.ಆರ್.ನಗರ ತಾಲ್ಲೂಕಿನ ಬಿ.ಎಸ್.ಮಾದಪ್ಪ ಮೆಮೋರಿಯಲ್ ಶಾಲೆಯ ಡಿ.ಜಿ.ವಿನುತಾ 623, ಮೈಸೂರಿನ ಆದರ್ಶ ವಿದ್ಯಾಲಯದ ಲಕ್ಷನ್ ಎಂ.ಎಸ್



622, ಹುಣಸೂರಿನ ಸೆಂಟ್ ಜೋಸೆಫ್ ಶಾಲೆಯ ಶಮ್ಯಾ ಪಿ 621, ರಾಮಕೃಷ್ಣ ಶಾಲೆಯ ಆತಿಶ್ ಎಂ. ಮತ್ತು ಶ್ರೇಯಮ್ ಆದಿತ್ಯ ಚಂದ್ರ 621, ಮೈಸೂರಿನ ಆದರ್ಶ ವಿದ್ಯಾಲಯದ ಅಪೀಕ್ಷ ಎ.ಪಿ 621, ಟಿ.ನರಸೀಪುರ ತಾಲ್ಲೂಕಿನ ಬನ್ನೂರು ವಿವೇಕಾನಂದ ಶಾಲೆಯ ಸುಶ್ಮಿತ ಎಸ್ 621, ಬಿ.ಕೆ.ಎಸ್.ವಿ.ಬಿ ಶಾಲೆಯ ಗೌರಿಶ್ರೀ ಎಸ್, ತನಿಷ್ಕಾ ಡಿ ಮತ್ತು ತೇಜಸ್ ಜಿ 620, ಆದರ್ಶ ವಿದ್ಯಾಲಯದ ಅನ್ವಿಕ ಡಿ.ಜೆ. 620, ಐಡಿಯಲ್ ಜಾವ ರೋಟರಿ ಶಾಲೆಯ ಪ್ರಣತಿ ಎಂ.ಎನ್, 620, ಸದ್ವಿದ್ಯಾ ಶಾಲೆಯ ವಿಂದ್ಯಾ ವಿ 620, ನಂಜನಗೂಡು ದೇಬೂರಿನ ಆದರ್ಶ ವಿದ್ಯಾಲಯದ ಡಿ.ಎಂ.ಚೈತ್ರಾ 620 ಅಂಕ ಪಡೆದು ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಹೆಗ್ಗಡದೇವನಕೋಟೆ ತಾ. ಶೇ.96.80, ಮೈಸೂರು ಗ್ರಾಮಾಂತರ ಶೇ.96.46, ಮೈಸೂರು ಉತ್ತರ ವಲಯ ಶೇ.96.32, ಮೈಸೂರು ದಕ್ಷಿಣ ಶೇ.94.13, ಟಿ.ನರಸೀಪುರ ಶೇ.94 ಅಂಕಪಡೆದಿದ್ದಾರೆ. ಹುಣಸೂರು, ಕೃಷ್ಣರಾಜನಗರ ಶೇ.91ಕ್ಕಿಂತ ಹೆಚ್ಚು ಫಲಿತಾಂಶ ಪಡೆದುಕೊಂಡಿವೆ. ಜಿಲ್ಲೆಯಲ್ಲಿ ಒಟ್ಟು 33,976 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಅವರಲ್ಲಿ 32,105 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ ಎಂದರು.

### ಸರ್ಕಾರ ಗ್ಯಾರಂಟಿ ಯೋಜನೆ ನೆರವು

ಮಧುರಿಯ ತಂದೆ ರಮೇಶ್ ತೀರಿಹೋಗಿ 10 ವರ್ಷ ಕಳೆದಿದೆ. ಕೆಲವು ದಿನಗಳ ಹಿಂದೆ ಅವರ ತಾತನೂ ತೀರಿ ಹೋದರು. ಖಾಸಗಿ ಕಂಪನಿ ಉದ್ಯೋಗ ಹೋಗುತ್ತಿದ್ದ ನಾನು ಅನಂತರ ಅದನ್ನು ನಿಲ್ಲಿಸಿ ಮನೆಪಾಠಕ್ಕೆ ಸೀಮಿತವಾಗಿದ್ದೇನೆ. ಈ ವೇಳೆ ಜೀವನ ನಡೆಸಲು ಕಷ್ಟವಾಗಿತ್ತು. ಆಗ ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಗೃಹಲಕ್ಷ್ಮಿ ಯೋಜನೆ ನನಗೆ ಹಾಗೂ ನನ್ನ ಮಗನಿಗೆ ಯುವನಿಧಿ ಯೋಜನೆ ಹಣ ಬರುತ್ತಿರುವುದರಿಂದ ಜೀವನ ನಡೆಸಲು ಅನೂಕೂಲ ಆಯಿತು. ಮಗಳ ಜಿಲ್ಲೆಗೆ ಟಾಪರ್ ಆಗಿ ಸಾಧನೆ ಮಾಡಿರುವುದು ಖುಷಿ ತರಿಸಿದೆ.

**–ಕೆ.ಪಿ.ಸರಿತಾ, ಮಾಧರಿ ತಾಯಿ**



**ಸರ್ಕಾರಿ ಶಾಲೆ ವಿದ್ಯಾರ್ಥಿನಿ ಟಾಪರ್ :** ಇಲವಾಲದ ಕರ್ನಾಟಕ ಪಬ್ಲಿಕ್ ಶಾಲೆಯ ವಿದ್ಯಾರ್ಥಿನಿ ಮಾಧುರಿ 624 ಅಂಕ ಪಡೆದು ಜಿಲ್ಲೆಗೆ ಟಾಪರ್ ಆಗಿದ್ದಾರೆ. ವಿದ್ಯಾರ್ಥಿನಿಯ ಸಾಧನೆಗೆ ಶಾಲೆಯ ಶಿಕ್ಷಕರು ಶಿಕ್ಷಣ ಇಲಾಖೆ ಅಭಿನಂದನೆ ಸಲ್ಲಿಸಿದೆ. ಇನ್ನೂ ತಾಯಿ ಕೆ.ಪಿ.ಸರಿತಾ ಎಂಕಾಂ ಪಧವೀಧರೆಯಾಗಿ ಮನೆ ಪಾಠ ಮಾಡುವ ಜತೆಗೆ ಮಗಳಿಗೂ ಪಾಠ ಮಾಡಿದ್ದಾರೆ. ಅಲ್ಲದೆ, ಸಹೋದರ ಆರ್.ಕೀರ್ತನ್ ಬಿಬಿಎ ಚಿನ್ನದ ಪದಕ ವಿಜೇತರಾಗಿ ಉದ್ಯೋಗಕ್ಕಾಗಿ ಎದುರು ನೋಡುತ್ತಿದ್ದಾರೆ. ಇನ್ನೂ ತಮ್ಮ ಸಾಧನೆ ಕುರಿತು ಮಾತನಾಡಿದ ಮಾಧುರಿ, ಅಂದಿನ ಪಾಠ ಅಂದೇ ಓದುತ್ತಿದ್ದೆನು. ಶಿಕ್ಷಕರ ಬೆಂಬಲ ಹೆಚ್ಚಾಗಿತ್ತು. ಪಠ್ಯ ಹೆಚ್ಚಾಗಿ ಓದಿದ್ದು ನೆರವಾಯಿತು. ಸರ್ಕಾರಿ ಶಾಲೆ ಎಂದರೆ ಉದಾಸೀನ ಬೇಡ ಅಲ್ಲಿರುವವರು ಹೆಚ್ಚು ಜ್ಞಾನ ಇರುತ್ತಾರೆ. ಜತೆಗೆ ನಮ್ಮ ಕುಟುಂಬದವರ ಬೆಂಬಲವೂ ನನ್ನ ಈ ಸಾಧನೆಗೆ ಸ್ಫೂರ್ತಿ ಆಯಿತು. ಇನ್ನೂ ವಕೀಲೆ ಆಗಬೇಕೆಂಬ ಆಸೆಯಿದೆ. ಇಲ್ಲದಿದ್ದರೆ ಸಿವಿಲ್ ಪರೀಕ್ಷೆ ಬರೆದು ಏನಾದರೂ ಸಾಧನೆ ಮಾಡಬೇಕೆಂಬ ಆಸೆಯಿದೆ ಎಂದು ಹೇಳಿದರು.



### ಇಂಜಿನಿಯರ್ ಪುತ್ರಿಯ ಸಾಧನೆ

ಮೈಸೂರು: ಎಸ್.ಎಸ್.ಎಲ್.ಸಿ ಯಲ್ಲಿ ವಿಜಯ ವಿಠಲ ಶಾಲೆಯ ಸಾಫ್ಟವೇರ್ ಇಂಜಿನಿಯರ್ ಮನಸ್ವಿನಿ ಪ್ರದೀಪ್ 624 ಅಂಕಗಳಿಸಿ ಜಿಲ್ಲೆಯ ಟಾಪರ್ ಅಲ್ಲಿ ಒಬ್ಬರಾಗಿದ್ದಾರೆ. ಸಾಫ್ಟವೇರ್ ಇಂಜಿನಿಯರ್ ಪ್ರದೀಪ್ ಹಾಗೂ ರಾಧಾ ದಂಪತಿಯ ದ್ವಿತೀಯ ಪುತ್ರಿ ಮನಸ್ವಿನಿ 652 ಅಂಕಕ್ಕೆ 624 ಅಂಕ ಗಳಿಸಿ ರಾಜ್ಯಕ್ಕೆ ದ್ವಿತೀಯ ಸ್ಥಾನ ಪಡೆದಿದ್ದು, ಬೃಂದಾವನ ಬಡಾವಣೆಯ ನಿವಾಸಿಯಾಗಿದ್ದಾರೆ. ತಮ್ಮ ಸಾಧನೆ ಕುರಿತು ಮಾತನಾಡಿದ ಮನಸ್ವಿನಿ ತುಂಬಾ ಖುಷಿ ಆಗುತ್ತಿದೆ. ಶಿಕ್ಷಕರು, ಪೋಷಕರು ಗೆ ಹೇಳುತ್ತಿದ್ದಾರೆ. ಅಪ್ಪ ಸಾಫ್ಟವೇರ್ ಇಂಜಿನಿಯರ್, ಅಜ್ಜ ಅರ್ಥಶಾಸ್ತ್ರ ಪ್ರೊಫೆಸರ್, ಅಜ್ಜಿ ಭೌತಶಾಸ್ತ್ರ ಪ್ರಾಧ್ಯಾಪಕಿಯಾಗಿದ್ದಾರೆ. ಅಕ್ಕ ಎಮ್ಸ್ ನಲ್ಲಿ ಎಂಬಿಬಿಎಸ್ ಮಾಡುತ್ತಿದ್ದು ಎಲ್ಲರೂ ನನ್ನೊಟ್ಟಿಗೆ ನಡೆಸಿದ ಚರ್ಚೆ ನನಗೆ ಹೆಚ್ಚು ಸಹಕಾರಿಯಾಯಿತು. ಮುಂದೆ ನೀಟ್ ಪರೀಕ್ಷೆ ಬರೆದು ವೈದ್ಯೆ ಆಗಬೇಕೆಂಬ ಆಸೆಯಿದೆ.

# ಕಾಂಗ್ರೆಸ್ ಗೆ ಮಹಿಳೆಯರೇ ತಕ್ಕಪಾಠ ಕಲಿಸುತ್ತಾರೆ: ವಿ.ಸೋಮಣ್ಣ

**ಮೈಸೂರು:** ನಾರಿ ಶಕ್ತಿಯನ್ನು ಅವಮಾನಿಸಿದವರ ಪಾಪದ ಕೊಡ ತುಂಬುತ್ತ ಬಂದಿದೆ. ಮಹಿಳೆಯರೇ ಕಾಂಗ್ರೆಸ್ ಅವರಿಗೆ ತಕ್ಕಪಾಠ ಕಲಿಸುತ್ತಾರೆ ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಕಾಂಗ್ರೆಸ್ ವಿರುದ್ಧ ಕಿಡಿಕಾರಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಕಸಿತ ಭಾರತ 2047 ಗುರಿಯೊಂದಿಗೆ ಭಾರತವನ್ನು ವಿಶ್ವದ ಭೂಪಟದಲ್ಲಿ ಪ್ರಥಮ ಸ್ಥಾನಕ್ಕೆ ಕೊಂಡೊಯ್ಯುವ ಸಂಕಲ್ಪದ ಭಾಗವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಜಾರಿಗೆ ತಂದಿರುವ ಮಹಿಳಾ ಮೀಸಲಾತಿ ಕಾಯ್ದೆ ಒಂದು ಐತಿಹಾಸಿಕ ತೀರ್ಮಾನ. ಆದರೆ ಕಾಂಗ್ರೆಸ್, ಡಿಎಂಕೆ ಸೇರಿ ಇತರೆ ಪಕ್ಷಗಳು ನಡೆದುಕೊಂಡ ರೀತಿ ಸರಿಯಲ್ಲ. ಈ ಪವಿತ್ರ ಕಾರ್ಯಕ್ಕೆ ವಿರೋಧ ಪಕ್ಷಗಳು ಅಡ್ಡಿಪಡಿಸುತ್ತಿರುವುದು ಮಹಿಳಾ ಕುಲಕ್ಕೆ ಮಾಡುತ್ತಿರುವ ದ್ರೋಹ, ಪಾಪದ ಕೃತ್ಯ. ಮಹಿಳಾ ಮೀಸಲಾತಿ ಬಿಲ್ ಸೋಲಿಸಲು ವಿರೋಧ ಪಕ್ಷಗಳು ನಡೆಸಿರುವ ಕುತಂತ್ರ ಇದು. ಮಹಿಳೆಯರು ಮುಖ್ಯವಾಹಿನಿಗೆ ಬರಬಾರದು ಎನ್ನುವ ಕೆಟ್ಟ ಚಾಳಿಯನ್ನು ಹೊಂದಿರುವ ಕಾಂಗ್ರೆಸ್, ಸಮಾಜವಾದಿ ಪಕ್ಷ, ಟಿಎಂಸಿ ಹಾಗೂ ಡಿಎಂಕೆ ಪಕ್ಷಗಳು ಒಟ್ಟಾಗಿ ಈ ಐತಿಹಾಸಿಕ ನಡೆಯನ್ನು ವಿರೋಧಿಸಿವೆ. ಇದು ದೇಶದ ಸಾಮಾನ್ಯ ಮಹಿಳೆಯರಿಗೆ ಮಾಡುತ್ತಿರುವ ಅಪಚಾರ ಎಂದರು.

ಧರ್ಮಾಧಾರಿತ ಮೀಸಲಾತಿ ಎಂಬ ಷಡ್ಯಂತ್ರ: ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಧರ್ಮಾಧಾರಿತ ಮೀಸಲಾತಿಯನ್ನು ಸ್ಪಷ್ಟವಾಗಿ ವಿರೋಧಿಸಿದ್ದರು. ಆದರೆ, ಇಂದಿನ ವಿರೋಧ ಪಕ್ಷಗಳು ಧರ್ಮದ ಆಧಾರದಲ್ಲಿ ಮೀಸಲಾತಿ ನೀಡಬೇಕು ಎಂಬ ಹೊಸ ವರಸೆ ತೆಗೆಯುವ ಮೂಲಕ ಸಮಾಜದಲ್ಲಿ ಸಂಘರ್ಷ ಸೃಷ್ಟಿಸಲು ಯತ್ನಿಸುತ್ತಿವೆ. ಎಸ್ಸಿ, ಎಸ್ಟಿ ಮತ್ತು ಒಬಿಸಿ ಮೀಸಲಾತಿಯನ್ನು ಗೌರವಿಸುವ ಎನ್ಡಿಎ ಸರ್ಕಾರ ಅಂಬೇಡ್ಕರ್ ಅವರ ಆಶಯದಂತೆ ನಡೆಯುತ್ತಿದೆ. ಈ ಹೊಸ ಮೀಸಲಾತಿಯಿಂದ ದಕ್ಷಿಣ ಭಾರತಕ್ಕೆ ಅನ್ಯಾಯವಾಗುವುದಿಲ್ಲ. ಕ್ಷೇತ್ರ ಪುನರ್ವಿಂಗಡಣೆಯ ಕುರಿತು ಹಬ್ಬಿಸುತ್ತಿರುವುದು ಸುಳ್ಳು ಸುದ್ದಿ. 1976ರಲ್ಲಿ 54 ಕೋಟಿ ಇದ್ದ ಜನಸಂಖ್ಯೆ ಇಂದು 140 ಕೋಟಿಗೆ ತಲುಪಿದೆ. ಈ ಹಿನ್ನೆಲೆಯಲ್ಲಿ ಕ್ಷೇತ್ರ ಪುನರ್ ವಿಂಗಡಣೆ ಅನಿವಾರ್ಯ ಎಂದರು.




ಮೀಸಲಾತಿ ಜಾರಿಯಾದಲ್ಲಿ ಕರ್ನಾಟಕದ ಲೋಕಸಭಾ ಸ್ಥಾನಗಳ ಸಂಖ್ಯೆ 28 ರಿಂದ 42ಕ್ಕೆ ಏರಿಕೆ ಆಗುವ ನಿರೀಕ್ಷೆ ಇದೆ. ದಕ್ಷಿಣ ರಾಜ್ಯಗಳಲ್ಲಿ ಒಟ್ಟು ಸ್ಥಾನಗಳ ಸಂಖ್ಯೆ 169ಕ್ಕೂ ಹೆಚ್ಚು ಏರಿಕೆಯಾಗಲಿದ್ದು, ಇದು ಮಹಿಳೆಯರ ರಾಜಕೀಯ ಸಬಲೀಕರಣಕ್ಕೆ ಪೂರಕವಾಗಲಿದೆ ಎಂದು ಅವರು ವಿವರಿಸಿದರು.

ಮೋದಿ ಸರ್ಕಾರದ 11 ವರ್ಷಗಳ ಮಹಿಳಾ ಪರ ಸಾಧನೆ ಅನನ್ಯ. ಕಳೆದ 50 ವರ್ಷಗಳಿಂದ ಕಾಂಗ್ರೆಸ್ ಕೇವಲ ಕಾಲಹರಣ ಮಾಡುತ್ತಾ ಬಂದಿದ್ದರೆ, ಮೋದಿ ಸರ್ಕಾರ ಕಳೆದ ಒಂದು ದಶಕದಲ್ಲಿ ಮಹಿಳೆಯರಿಗಾಗಿ ಕ್ರಾಂತಿಕಾರಿ ಯೋಜನೆ ಜಾರಿಗೆ ತಂದಿದೆ. 12 ಕೋಟಿ ಶೌಚಾಲಯಗಳನ್ನು ನಿರ್ಮಿಸಿದೆ. ಉಜ್ವಲ ಯೋಜನೆ ಮತ್ತು ಮಾತೃ ವಂದನಾ ಯೋಜನೆ, ಮುದ್ರಾ ಸಾಲ ಮತ್ತು ಸುಕನ್ಯಾ ಸಮೃದ್ಧಿ ಯೋಜನೆ ಜಾರಿಗೊಳಿಸಿದೆ. 5 ಕೋಟಿ ಮುಸ್ಲಿಂ ಮಹಿಳೆಯರಿಗೆ ಮುಕ್ತಿ ನೀಡಿದ ತ್ರಿವಳಿ ತಲಾಕ್ ನಿಷೇಧ ಮಾಡಿದ್ದು ಬಿಜೆಪಿ ಸರ್ಕಾರ ಎಂದರು.

ನಾರಿ ಶಕ್ತಿಯನ್ನು ಅವಮಾನಿಸಿದವರಿಗೆ ಉಳಿಗಾಲ ಇಲ್ಲ ಎಂಬುದಕ್ಕೆ ಇತಿಹಾಸವೇ ಸಾಕ್ಷಿ. ಕಿತ್ತೂರು ರಾಣಿ ಚೆನ್ನಮ್ಮ, ಒನಕೆ ಓಬವ್ವ ಮತ್ತು ಮೈಸೂರಿನ ಮಹಾರಾಣಿ ವಾಣಿ ವಿಲಾಸ ಕೆಂಪನಂಜಮ್ಮಣ್ಣಿ ಅವರಂತಹ ಮಹಾನ್ ಮಹಿಳೆಯರು ನಮಗೆ ಪ್ರೇರಣೆ. ಅಂತಹ ಪರಂಪರೆಯನ್ನು ಗೌರವಿಸುವುದು ನಮ್ಮ ಆದ್ಯತೆ ಎಂದು ತಿಳಿಸಿದರು.

ಮಹಿಳಾ ಸಬಲೀಕರಣದ ಮೂಲಕ ಸಶಕ್ತ ಭಾರತ ನಿರ್ಮಾಣಕ್ಕೆ ಭಾರತೀಯ ಜನತಾ ಪಕ್ಷ ಮತ್ತು ಎನ್.ಡಿ.ಎ ಮೈತ್ರಿಕೂಟ ಬದ್ಧವಾಗಿದ್ದು, ವಿರೋಧ ಪಕ್ಷಗಳ ನಾಟಕಕ್ಕೆ ಜನರು ಮುಂದಿನ ದಿನಗಳಲ್ಲಿ ತಕ್ಕ ಪಾಠ ಕಲಿಸಲಿದ್ದಾರೆ. ಪಾಪದ ಹೊರೆಯನ್ನು ವಿಪಕ್ಷಗಳು ಹೊರಬೇಕಾಗುತ್ತದೆ ಎಂದು ಅವರು ಎಚ್ಚರಿಸಿದರು.

ನಾರಿ ಶಕ್ತಿಯನ್ನು ಕೆಣಕಿದವರಿಗೆ ಉಳಿಗಾಲವಿಲ್ಲ ಎಂಬುದಕ್ಕೆ ಇತಿಹಾಸದ ಪುಟಗಳು ಸಾಕ್ಷಿಯಾಗಿವೆ. ಮಹಾಭಾರತದಲ್ಲಿ ದ್ರೌಪದಿಯನ್ನು ಕೆಣಕಿದ ಕೌರವರ ಸ್ಥಿತಿ ಏನಾಯಿತು? ಸೀತೆಯನ್ನು ಅಪಹರಿಸಿದ ರಾವಣನ ಸ್ಥಿತಿ ಏನಾಯಿತು? ಪೆಹಲ್ಗಾಮ್ ನಲ್ಲಿ ಪ್ರವಾಸಿಗರನ್ನು ಕೊಲೆಗೈದ ಉಗ್ರರ ಸ್ಥಿತಿ ಏನಾಯಿತು? ಎಂಬುದು ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ಮಹಿಳಾ ಮೀಸಲಾತಿ ಬಿಲ್ ವಿರೋಧಿಸಿದ ಕಾಂಗ್ರೆಸ್ ಪಕ್ಷದ ಪಾಪದ ಕೊಡ ತುಂಬಿದೆ. ಮುಂಬರುವ ದಿನಗಳಲ್ಲಿ ಮಹಿಳಾ ಮೀಸಲಾತಿ ಬಿಲ್ ಪಾಸ್ ಆಗುವ ವಿಶ್ವಾಸವಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್.ಶ್ರೀವತ್ಸ, ರಾಜ್ಯ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಮಂಜುಳಾ, ತಾರಾ ಅನುರಾಧ, ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷೆ ಮಂಗಳಾ ಸೋಮಶೇಖರ್, ನಗರ ಅಧ್ಯಕ್ಷೆ ಮಂಜುಳಾ ರಾಜ್, ವಿದ್ಯಾ ಅರಸ್ ಸೇರಿದಂತೆ ಹಲವರು ಇದ್ದರು.



### 27ಕ್ಕೆ ಜನಕ್ರೋಶ ನಾರಿ ಪಾದಯಾತ್ರೆ

ಕೇಂದ್ರದ ಐತಿಹಾಸಿಕ ನಾರಿಶಕ್ತಿ ಮಸೂದೆ ವಿರೋಧಿಸಿ ಕಾಂಗ್ರೆಸ್ ದೇಶದ ಮಹಿಳೆಯರಿಗೆ ದ್ರೋಹ ಬಗೆದಿದೆ. ಕಾಂಗ್ರೆಸ್ ಸೇರಿದಂತೆ ಮಸೂದೆ ವಿರೋಧಿಸಿದ ವಿಪಕ್ಷಗಳ ವಿರುದ್ಧ ದೇಶಾದ್ಯಂತ ಹೋರಾಟ ನಡೆಸುತ್ತಿದ್ದು, ಏ.27ರಂದು ಜನಾಕ್ರೋಶ ನಾರಿ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. 25ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಮಹಿಳೆಯರ ಶಕ್ತಿ ಪ್ರದರ್ಶನ ಮಾಡಲಾಗುವುದು. 30ರಂದು ಹುಬ್ಬಳ್ಳಿಯಲ್ಲಿ ಬೃಹತ್ ಪಾದಯಾತ್ರೆ ಆಯೋಜಿಸಿದ್ದು, ಮಹಿಳಾ ವಿರೋಧಿ ಕಾಂಗ್ರೆಸ್ನ ನಿಜ ಸ್ವರೂಪವನ್ನು ರಾಜ್ಯದ ಜನರಿಗೆ ತಿಳಿಸಲಾಗುವುದು.

**– ಮಂಜುಳಾ,**
**ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ**

## ಪ್ರಜಾಪ್ರಭುತ್ವ ವ್ಯವಸ್ಥೆಗೆ ಕನ್ನಡಿಗರ ಪಾತ್ರವಿದೆ: ಮಾಜಿ ಸಭಾಪತಿ ರಮೇಶ್ಕುಮಾರ್




**ಮೈಸೂರು:** ಪ್ರಜಾಪ್ರಭುತ್ವ ವ್ಯವಸ್ಥೆಗೂ, ಕನ್ನಡಿಗರಿಗೂ ಸಂಬಧ ಇದೆ. ವಿಶ್ವದ ಇತಿಹಾಸದಲ್ಲಿ ಪ್ರಜಾಪ್ರಭುತ್ವದ ಬೆಳವಣಿಗೆಗೆ ನಮ್ಮದೂ ಎಲ್ಲೋ ಒಂದು ಪಾತ್ರ ಇದೆ ಎಂದು ಮಾಜಿ ಸಭಾಪತಿ ಕೆ.ಆರ್.ರಮೇಶ್ ಕುಮಾರ್ ವಿಷಾದ ವ್ಯಕ್ತಪಡಿಸಿದರು.

ನಗರದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ನಡೆದ ಕರ್ನಾಟಕ ರಾಜ್ಯ ರಾಜ್ಯಶಾಸ್ತ್ರದ ಅಧ್ಯಾಪಕರ ಸಂಘದ 21 ಮಹಾ ಸಮ್ಮೇಳನ ಮತ್ತು ರಜತ ಮಹೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಮೈಸೂರು ರಾಜರು ಪರೋಪಕಾರಿಗಳು. ದೇಶದ ಇತರ ರಾಜರು ಅಥವಾ ಬೇರೆ ದೇಶದ ರಾಜರು ಮೈಸೂರು ರಾಜರ ಹಾಗೆ ಇರಲಿಲ್ಲ. ಇವರನ್ನು ಇಂದಿಗೂ ಕೂಡ ನೆನಪಿಸಿಕೊಳ್ಳಬೇಕು. ಆಂಗ್ಲರು ನಮ್ಮ ದೇಶವನ್ನು ಆಳುತ್ತಿದ್ದ ಸಮಯದಲ್ಲಿಯೇ, ಪ್ರಜಾಪ್ರಭುತ್ವದ ಮಾತು ಮಹತ್ವ ಪಡೆದುಕೊಳ್ಳದೆ ಇದ್ದ ಕಾಲದಲ್ಲಿ ಮೈಸೂರಿನಲ್ಲಿ ಪ್ರಜಾಪ್ರತಿನಿಧಿ ಸಭೆಯನ್ನು ಇಲ್ಲಿ ಮಾಡಲು ಅಂದಿನ ರಾಜರು ಅವಕಾಶ ಕೊಟ್ಟರು. ರಾಜರು ಇಲ್ಲಿನ ಪ್ರಜೆಗಳಿಗೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಲು, ಪ್ರಶ್ನೆ ಮಾಡಲು ಅವಕಾಶ ನೀಡುತ್ತಿದ್ದರು. ಚುನಾವಣಾ ಹಂತಕ್ಕೆ ಬಂದು ಚುನಾವಣೆಗೆ ಯರ್ಯಾರು ಇರಬೇಕು ಎಂದು ಹೇಳುತ್ತಾರೆ.

ರಾಜಕಾರಣಿಗಳಿಗಿಂತ ದೊಡ್ಡ ನಟರಿಲ್ಲ: ರಾಜಕಾರಣಿಗಳನ್ನು ಮೀರಿಸಲು ಡಾ.ರಾಜ್ಕುಮಾರ್ ಅವರ ನಟನೆಯೂ ಸಾಕಾಗುವುದಿಲ್ಲ ರಾಜಕಾರಣಿಗಳ ನಟನೆ ಮುಂದೆ ಅವರ ನಟನೆ ಕೆಲಸ ಮಾಡುವುದಿಲ್ಲ. ಇದನ್ನು ರಾಜ್ಯಶಾಸ್ತ್ರ ಸಿಲಬಸ್ಗಳಲ್ಲಿ ಹೇಳಿರುವುದಿಲ್ಲ. ಕ್ಯಾಲೆಂಡರ್, ಸಮಯದ ಬಗ್ಗೆ ಹೆಚ್ಚು ತಿಳಿದುಕೊಂಡಿರುವುದೇ ರಾಜಕಾರಣಿಗಳು ಮಾತ್ರ. ಕೌಟಿಂಗ್ ಯಾವಾಗ ಆಗುತ್ತದೆ, ಮುಂದಿನ ಚುನಾವಣೆಯ ಯಾವಾಗ ನಡೆಯುತ್ತದೆ. ಈ ಮಧ್ಯಂತರ ಅವಧಿಯಲ್ಲಿ ಜನರ ಮುಂದೆ ಯಾವ ಯಾವ ಅವತಾರದಲ್ಲಿ ಕಾಣಿಸಿಕೊಳ್ಳಬೇಕು ಎಂದು ತಿಳಿದುಕೊಂಡಿರುತ್ತಾರೆ ಎಂದರು.

ಮಾಧ್ಯಮಗಳ ಮುಖಾಂತರ ಅಥವಾ ವಿಧಾನ ಸಭೆಯ ಸದಸ್ಯರಾಗಿದ್ದಾಗ ಕಲಾಪಗಳಲ್ಲಿ ಭಾಗವಹಿಸುವ ಸಂದರ್ಭಗಳಲ್ಲಿ ನಾವು ತೆಗೆದುಕೊಳ್ಳುವಂತಹ ನಿಲುವು, ನಾವು ಆಡುವಂತಹ ಮಾತುಗಳು ಹಾಗೂ ನಾವು ಪ್ರತಿಪಾದಿಸುವ ಕೆಲವು ವಿಚಾರಗಳು ಸಹಜವಾಗಿ ಪ್ರತಿಯೊಬ್ಬರ ರಾಜಕೀಯ ಜೀವನದಲ್ಲಿ ಇರುವಂತಹದ್ದನ್ನು ಸಮಾಜಕ್ಕೆ ಪರಿಚಯ ಮಾಡಿಸುತ್ತದೆ ಎಂದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಕುಲಸಚಿವ ಪ್ರೊ.ಎಸ್.ಕೆ.ನವೀನ್ ಕುಮಾರ್, ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಎಂ.ಕೆ. ಸವಿತಾ, ಜವಾಹರಲಾಲ್ ನೆಹರೂ ವಿಶ್ವವಿದ್ಯಾನಿಲಯದ ವಿಶ್ರಾಂತ ಪ್ರಾಧ್ಯಾಪಕ ಪ್ರೊ.ವೆಲೆರಿಯನ್ ರೋಡ್ರಿಗಸ್, ಸಂಘದ ಸಂಘಟನಾ ಕಾರ್ಯದರ್ಶಿ ಪ್ರೊ.ಜೆ.ಸೋಮಶೇಖರ್ ಗೌರವಾಧ್ಯಕ್ಷ ಪ್ರೊ.ಕೃಷ್ಣ ಆರ್.ಹೊಂಬಳ್ ಇತರರಿದ್ದರು.

ಮುಂದಿನ ಪೀಳಿಗೆಗೆ ರಾಜ್ಯಶಾಸ್ತ್ರ ಬಗ್ಗೆ ತಿಳಿಸುವುದರ ಜತೆಗೆ ಪ್ರಜಾಪ್ರಭುತ್ವವನ್ನು ಹೇಗೆ ನಡೆಸಬೇಕು ಎಂಬುದರ ಬಗ್ಗೆ ಯುವಕರಿಗೆ ಅರಿವು ಮೂಡಿಸಬೇಕು.

**– ಪ್ರಮೋದಾದೇವಿ ಒಡೆಯರ್,**
**ರಾಜವಂಶಸ್ಥೆ**

## ಜೆಇಇ ಎಇಎಸ್ಎಲ್ ವಿದ್ಯಾರ್ಥಿಗಳ ಅತ್ಯುತ್ತಮ ಸಾಧನೆ

**ಮೈಸೂರು:** ಜೆಇಇ ಮುಖ್ಯ ಪರೀಕ್ಷೆ 2026ರ ಫಲಿತಾಂಶದಲ್ಲಿ ಆಕಾಶ್ ಎಜುಕೇಷನಲ್ ಸರ್ವೀಸಸ್ ಲಿಮಿಟೆಡ್ ಸಂಸ್ಥೆಯ ರಾಜ್ಯದ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡುವ ಮೂಲಕ ಗಮನ ಸೆಳೆದಿದ್ದಾರೆ.

ರಾಜ್ಯದ ವಿವಿಧ ಕೇಂದ್ರಗಳಿಂದ ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳು ಅತ್ಯುನ್ನತ ರ್ಯಾಂಕ್ ಗಳಿಸಿದ್ದು, ಆಕಾಶ್ ಸಂಸ್ಥೆಯ ಶೈಕ್ಷಣಿಕ ಗುಣಮಟ್ಟವನ್ನು ಮತ್ತೊಮ್ಮೆ ಸಾಬೀತು ಪಡಿಸಿದ್ದಾರೆ ಎಂದು ಸಂಸ್ಥೆಯ ಶೈಕ್ಷಣಿಕ ಮುಖ್ಯಸ್ಥ ಸಾಮವೇದಂ ಬಾಲಶ್ರೀನಿವಾಸ್ ಬುಧವಾರ ಸುದ್ದಿಗೋಷ್ಠಿ ಯಲ್ಲಿ ತಿಳಿಸಿದರು. ಸಂಸ್ಥೆಯ ಈ ಸಾಧಕರ ಪೈಕಿ ಆದಶ್ ಕುಮಾರ್ ಬೆಹೆರಾ ಪ್ರಥಮ ಸ್ಥಾನದಲ್ಲಿದ್ದು, ಆಲ್ ಇಂಡಿಯಾ ರಾಂಕಿಂಗ್ನಲ್ಲಿ (ಎಆರ್‌ಐ) 43ನೇ ಸ್ಥಾನ ಹಾಗೂ ರಾಜ್ಯ ಮಟ್ಟದಲ್ಲಿ 2ನೇ ಬ್ಯಾಂಕ್ ಪಡೆಯುವ ಮೂಲಕ ಕರ್ನಾಟಕದ ಟಾಪ್ ಸಾಧಕರಲ್ಲಿ ಒಬ್ಬರಾಗಿ ಹೊರಹೊಮ್ಮಿದ್ದಾರೆ ಎಂದು ಹೇಳಿದರು. ಜೆಇಇ ಮೇನ್ 2026ರ ಸೆಷನ್ 2 ಪರೀಕ್ಷೆಯಲ್ಲಿ ನಗರದ ಆಕಾಶ್ ಎಜುಕೇಷನಲ್ ಸರ್ವೀಸಸ್ ಲಿಮಿಟೆಡ್ (ಎಇಎಸ್ಎಲ್)ನಲ್ಲಿ ಬುಧವಾರ ಆಯೋಜಿಸಿದ್ದ



ಕಾರ್ಯಕ್ರಮದಲ್ಲಿ ವಿವಿಧ ಪರೀಕ್ಷೆಯಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಆಕಾಶ್ ಸಂಸ್ಥೆಯ ಶೈಕ್ಷಣಿಕ ಮುಖ್ಯಸ್ಥ ಸಾಮವೇದಂ ಬಾಲಶ್ರೀನಿವಾಸ್, ಅನಿಲ್, ಸಂಜೀವ್, ಸೂರಜ್, ಮುಬಾರಕ್ ಇತರರು ಇದ್ದರು. ಪ್ರಣಿಲ್ ಸಿಂಗ್ಲಾ (ಎಆರ್‌ಐ 211), ಆಯುಷ್ ಎಸ್. ಕೋಲೇಕರ್ (ಎಆರ್‌ಐ 276) ಹಾಗೂ ನಮನ್ ಅಗರ್ವಾಲ್ (ಎಆರ್‌ಐ 785) ಅತ್ಯುನ್ನತ ರ್ಯಾಂಕ್ ಪಡೆಯುವ ಮೂಲಕ ರಾಷ್ಟ್ರ ಮಟ್ಟದ ಟಾಪ್ 1.000 ಸಾಧಕರ ಪಟ್ಟಿಯಲ್ಲಿ ಸ್ಥಾನ ಪಡೆದುಕೊಂಡಿದ್ದಾರೆ ಎಂದರು. ಅಲ್ಲದೆ, ಟಿ.ಆರ್.ಆದಿತ್ಯ, ಎಸ್. ಸಂಜೀತ್, ಜೋಹಾನ್ ಜಾಬ್, ಗುಡಾಲ ಸತ್ಯ ಯಶಸ್ವ್, ಎಂ.ಪ್ರಚೇತ್ ಜಲಶಂಕರ್ ಸೇರಿ ಅನೇಕರು ಶ್ರೇಷ್ಠ ಸಾಧನೆ ಮಾಡಿದ್ದಾರೆ. ಸಂಸ್ಥೆಯ ವಿವಿಧ ವಿಭಾಗದ ಅನಿಲ್, ಸಂಜೀವ್, ಸೂರಜ್, ಮುಬಾರಕ್ ಇತರರು ಇದ್ದರು.

## ಬುದ್ಧಪೂರ್ಣಿಮೆ ಪ್ರಯುಕ್ತ ಕಸಾಯಿಖಾನೆ ಹಾಗೂ ಮಾಂಸ ಮಾರಾಟ ನಿಷೇಧ



**ಮೈಸೂರು:** ನಗರದಲ್ಲಿ ಬುದ್ಧಪೂರ್ಣಿಮೆ ಪ್ರಯುಕ್ತ ಮೇ 01 ರಂದು ಮೈಸೂರು ಮಹಾನಗರ ಪಾಲಿಕೆಗೆ ಸೇರಿದ ಕುರಿ, ಮೇಕೆಗಳ ಕಸಾಯಿಖಾನೆ ಮತ್ತು ಇತರೆ ಎಲ್ಲಾ ಮಾಂಸದ ಅಂಗಡಿಗಳನ್ನು ಮುಚ್ಚಲಾಗುತ್ತದೆ. ಈ ದಿನ (ಕುರಿ/ಮೇಕೆ, ಕೋಳಿ ಮಾಂಸ, ಹಂದಿ ಮಾಂಸ ಮತ್ತು ಮೀನು) ವ್ಯಾಪಾರವನ್ನು ನಗರದಲ್ಲಿ ಕಡ್ಡಾಯವಾಗಿ ನಿಷೇಧಿಸಿರುತ್ತದೆ. ಆದುದರಿಂದ ಮೈಸೂರು ನಗರಪಾಲಿಕೆ ವ್ಯಾಪ್ತಿಯಲ್ಲಿರುವ ವಿವಿಧ ಮಾಂಸದ ಅಂಗಡಿಗಳನ್ನು ಮುಚ್ಚಲು ಆದೇಶ ನೀಡಲಾಗಿರುತ್ತದೆ

# ಭಗೀರಥ ಜಯಂತಿಯಲ್ಲಿ ಡೀಸಿ ಡಾ.ಕುಮಾರ ಸಲಹೆ
## ಭಗೀರಥರ ಸಾಧನೆ ಮಕ್ಕಳಿಗೆ ತಿಳಿಯಲಿ



**ಮಂಡ್ಯ:** ಪೋಷಕರು ತಮ್ಮ ಮಕ್ಕಳಿಗೆ ನಾಡು–ನುಡಿ, ಇತಿಹಾಸದ ಅರಿವು ನೀಡುವ ಜೊತೆಗೆ ಭಗೀರಥ ಅವರ ಚಿಂತನೆ ಹಾಗೂ ಸಾಧನೆಯನ್ನು ತಿಳಿಸುವ ಕೆಲಸ ಮಾಡಬೇಕು ಎಂದು ಜಿಲ್ಲಾಧಿಕಾರಿ ಡಾ. ಕುಮಾರ ಹೇಳಿದರು.

ನಗರದ ಕರ್ನಾಟಕ ಸಂಘದ ಕೆ.ವಿ.ಶಂಕರೇಗೌಡ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಿದ್ದ ಭಗೀರಥ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಗಂಗೆಯನ್ನು ಭೂಮಿಗೆ ತರಲು ಭಗೀರಥರು ಅನೇಕ ಬಾರಿ ವಿಫಲವಾದರೂ ನಿರಂತರ ಪರಿಶ್ರಮದಿಂದ ಯಶಸ್ಸು ಸಾಧಿಸಿದ್ದಾರೆ. ಈ ಮೂಲಕ ಕಠಿಣ ಪರಿಶ್ರಮವೇ ಸಾಧನೆಯ ಮಾರ್ಗ ಎಂಬುದನ್ನು ಅವರು ಸಾಬೀತುಪಡಿಸಿದ್ದಾರೆ ಎಂದರು.

ನೀರಿನ ಮಹತ್ವವನ್ನು ಅರಿತು ಜಲ ಸಂರಕ್ಷಣೆ ಮಾಡುವುದು ಪ್ರತಿಯೊಬ್ಬರ ಕರ್ತವ್ಯವಾಗಿದ್ದು, ನೀರನ್ನು ಮಿತವಾಗಿ ಬಳಸಬೇಕು ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಗ್ರಂಥಪಾಲಕರಾದ ಡಾ. ಪಿ. ಸಿದ್ದರಾಮು ಭಗೀರಥರ ಜೀವನಗಾಥೆ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಜಿಲ್ಲಾ ಸಹಕಾರ ಬ್ಯಾಂಕ್ ಅಧ್ಯಕ್ಷ ಸಚಿನ್ ಚೆಲುವರಾಯಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಬಿ.ವಿ.ನಂದೀಶ್, ಕರ್ನಾಟಕ ಸಂಘದ ಅಧ್ಯಕ್ಷ ಪ್ರೋ. ಜಯಪ್ರಕಾಶ್ ಗೌಡ, ಜೈ ಕರ್ನಾಟಕ ಸಂಘಟನೆಯ ಅಧ್ಯಕ್ಷ ನಾರಾಯಣಗೌಡ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

# ಕೈಗಾರಿಕಾ ಪ್ರದೇಶ ಅಭಿವೃದ್ಧಿಗೆ ರೈತರ ಸಭೆ ಅಹವಾಲು ಸ್ವೀಕಾರ

**ಮಂಡ್ಯ:** ಜಿಲ್ಲೆಯ ಮದ್ದೂರು ತಾಲ್ಲೂಕಿನ ಗೆಜ್ಜಲಗೆರೆ, ಕುದುರೆಗುಂಡಿ ಹಾಗೂ ಮಂಡ್ಯ ತಾಲ್ಲೂಕಿನ ನೋದೆಕೊಪ್ಪಲು ಗ್ರಾಮಗಳಲ್ಲಿ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಸಂಬಂಧ ರೈತರ ಸಭೆ ನಡೆಯಿತು. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಭೂಸ್ವಾಧೀನ ಪ್ರಕ್ರಿಯೆ ಕೈಗೊಂಡಿರುವ ಹಿನ್ನೆಲೆಯಲ್ಲಿ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಡಾ. ಕುಮಾರ ಅವರ ಅಧ್ಯಕ್ಷತೆಯಲ್ಲಿ ರೈತರ ಅಹವಾಲು ಹಾಗೂ ಅಭಿಪ್ರಾಯಗಳನ್ನು ಸ್ವೀಕರಿಸಲಾಯಿತು.



ಸಭೆಯಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಡಾ.ಕುಮಾರ ಅವರು, ಭೂಮಿಗೆ ನೀಡಲಾಗುವ ಪರಿಹಾರದ ಮೊತ್ತದ ಬಗ್ಗೆ ಅಸಮಾಧಾನವಿದ್ದರೆ ರೈತರು ಹೆಚ್ಚಿನ ಪರಿಹಾರಕ್ಕಾಗಿ ಮನವಿ ಸಲ್ಲಿಸಬಹುದು. ಆ ಮನವಿಯನ್ನು ಸರ್ಕಾರಕ್ಕೆ ಕಳುಹಿಸಲಾಗುವುದು ಎಂದು ತಿಳಿಸಿದರು.

ಈ ಯೋಜನೆಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಅನುಷ್ಠಾನಗೊಳಿಸುತ್ತಿದ್ದು, ಸರ್ಕಾರ ಈಗಾಗಲೇ ಪ್ರಾಥಮಿಕ ಅಧಿಸೂಚನೆ ಹೊರಡಿಸಿದೆ. ಭೂಸ್ವಾಧೀನ ಪ್ರಕ್ರಿಯೆ ಕುರಿತಂತೆ ರೈತರಿಗೆ ತಮ್ಮ ಆಕ್ಷೇಪಣೆಗಳನ್ನು ದಾಖಲಿಸಲು ಕಾನೂನಾತ್ಮಕ ಅವಕಾಶವಿದೆ ಎಂದು ಹೇಳಿದರು. ರೈತರ ಅಭಿಪ್ರಾಯಗಳನ್ನು ಸಂಗ್ರಹಿಸಿದ ಬಳಿಕ ಮುಂದಿನ ಕ್ರಮಗಳನ್ನು ಕಾನೂನುಬದ್ಧವಾಗಿ ಕೈಗೊಳ್ಳಲಾಗುತ್ತದೆ ಎಂದರು.

ಸಭೆಯಲ್ಲಿ ವಿಶೇಷ ಭೂಸ್ವಾಧೀನ ಅಧಿಕಾರಿ ಎ.ಎನ್. ರಘುನಂದನ್, ಜಿಲ್ಲಾ ಕೈಗಾರಿಕಾ ಇಲಾಖೆಯ ಉಪ ನಿರ್ದೇಶಕ ದಿನೇಶ್ ಸೇರಿದಂತೆ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

**ರೈತರ ಆಕ್ಷೇಪಣೆಗಳು:** ಸಭೆಯಲ್ಲಿ ರೈತರು ತಮ್ಮ ಅಸಮಾಧಾನ ವ್ಯಕ್ತಪಡಿಸಿ, ಕೃಷಿಯನ್ನೇ ನಂಬಿ ಬದುಕುತ್ತಿರುವ ಕುಟುಂಬಗಳು ಭೂಮಿಯನ್ನು ಕಳೆದುಕೊಂಡರೆ ಜೀವನೋಪಾಯಕ್ಕೆ ತೊಂದರೆಯಾಗುತ್ತದೆ ಎಂದು ಹೇಳಿದರು. ಈ ಭೂಮಿಗಳು ಅತ್ಯಂತ ಫಲವತ್ತಾಗಿದ್ದು, ನೀರಾವರಿ ಸೌಲಭ್ಯ ಹೊಂದಿರುವುದರಿಂದ ಯಾವುದೇ ಕಾರಣಕ್ಕೂ ಭೂಮಿ ನೀಡಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟರು.

ಆದರೆ, ಮಾರುಕಟ್ಟೆ ದರಕ್ಕಿಂತ ಹೆಚ್ಚಿನ ಪರಿಹಾರ ನೀಡಿದರೆ ಭೂಮಿಯನ್ನು ನೀಡಲು ಸಿದ್ಧವಿದ್ದೇವೆ ಎಂದು ಕೆಲ ರೈತರು ತಿಳಿಸಿದರು.

# ಸಾಲಿಗ್ರಾಮ ಡೈರಿ ಅಧ್ಯಕ್ಷರಾಗಿ ಎಸ್. ಆರ್. ಮಹೇಂದ್ರ ಮತ್ತು ಉಪಾಧ್ಯಕ್ಷರಾಗಿ ಮಹೇಶ್ ಅವಿರೋಧವಾಗಿ ಆಯ್ಕೆ

**ಕೆ .ಆರ್. ನಗರ :** ನೂತನ ಸಾಲಿಗ್ರಾಮ ಡೈರಿ ಅಧ್ಯಕ್ಷರಾಗಿ ಎಸ್. ಆರ್. ಮಹೇಂದ್ರ ಮತ್ತು ಉಪಾಧ್ಯಕ್ಷರಾಗಿ ಮಹೇಶ್ ಅವಿರೋಧವಾಗಿ ಆಯ್ಕೆಯಾದರೂ.

ಐದು ವರ್ಷ ಅವಧಿಗೆ ಏಪ್ರಿಲ್ 6 ರಂದು ನಡೆದ ನಿರ್ದೇಶಕರ ಚುನಾವಣೆಯಲ್ಲಿ ಆಯ್ಕೆಯಾದ ಎಸ್. ಆರ್. ಮಹೇಂದ್ರ ,ಎಸ್. ಆರ್. ಲೋಕೇಶ್ , ಎಸ್. ಪಿ ವೆಂಕಟೇಶ್ ,ಎಸ್. ಕೆ .ಸೀತಣ್ಣ, ಎಸ್. ಸಿ .ಶಿವರಾಮ, ಎಸ್ .ಕೆ. ಮಧುಚಂದ್ರ ,ಜಗದೀಶ ಎಸ್ ಎನ್ ಆರ್ ಎನ್ ರಾಜ್ ರಾಣಿ ಮಹೇಶ್ ರಾಮನಾಯಕ 12 ಜನ ನಿರ್ದೇಶಕರು ಆಯ್ಕೆಯಾಗಿದ್ದರು. ಅವರಿಂದ ಅಧ್ಯಕ್ಷ ಉಪಾಧ್ಯಕ್ಷರ ಆಯ್ಕೆಗೆ ಗುರುವಾರ ಡೈರಿ ಆವರಣದಲ್ಲಿ ಚುನಾವಣೆ ನಡೆಯಿತು.

ಅಧ್ಯಕ್ಷ ಸ್ಥಾನಕ್ಕೆ ಪಟ್ಟಣದ ನವಾಜಿ ಬಾರೆ ಎಸ್ ಆರ್ ಮಹೇಂದ್ರ ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದರು. ಅದೇ ರೀತಿ ಪಟ್ಟಣದ ಅಂಬೇಡ್ಕರ್ ನಗರದ ಮಹೇಶ್ ಉಪಾಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದರು. ಇವರ ಪ್ರತಿಸ್ಪರ್ಧಿಯಾಗಿ ಬೇರೆ ಯಾರು ನಾಮಪತ್ರ ಸಲ್ಲಿಸಲು ಕಾರಣ. ಎಸ್ ಆರ್ ಮಹೇಂದ್ರ ಅಧ್ಯಕ್ಷರಾಗಿ ಮಹೇಶ್ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾ ಅಧಿಕಾರಿ ರವಿಕುಮಾರ್ ಘೋಷಿಸಿದರು.

ನೂತನವಾಗಿ ಆಯ್ಕೆಯಾದ ಅಧ್ಯಕ್ಷ ಉಪಾಧ್ಯಕ್ಷರನ್ನು ಮಾಜಿ ಜಿಲ್ಲಾ ಪಂಚಾಯಿತಿ ಅಧ್ಯಕ್ಷ ಸಾ .ರಾ .ನಂದೀಶ್ ಅಭಿನಂದಿಸಿ ಮಾತನಾಡಿದ ಅವರು ಸಾಲಿಗ್ರಾಮದಲ್ಲಿ ಹೈನುಗಾರಿಕೆಗೆ ಹೆಚ್ಚು ಹೊತ್ತು ನೀಡಬೇಕು ಎಂಬ ಕಾರಣದಿಂದ ಮಾಜಿ ಸಾ ರಾ ಮಹೇಶ್ ಅವರು ಉತ್ತಮ ಡೈರಿ ಕಟ್ಟಡ ನಿರ್ಮಾಣವಾಗಲು ಹೆಚ್ಚು ಸಹಕಾರ ನೀಡಿದರು ಸಾಲಿಗ್ರಾಮದಲ್ಲಿ ಇರುವ ಬಿಎಂಸಿ ಕೇಂದ್ರ ಎರಡು ತಾಲೂಕಿನಲ್ಲಿ ದೊಡ್ಡ ಹಾಲು ಶೇಖರಣ ಕೇಂದ್ರವಾಗಿದೆ. ನೂತನವಾಗಿ ಆಯ್ಕೆಯಾದ ಅಧ್ಯಕ್ಷರು. ಉಪಾಧ್ಯಕ್ಷರು ಮತ್ತು ಆಡಳಿತ ಮಂಡಳಿಯವರು ಯಾವುದೇ ಜಾತಿ ಭೇದ ಪಕ್ಷವಿಲ್ಲದೆ ಡೈರಿ ಅಭಿವೃದ್ಧಿಗೆ ಹೆಚ್ಚು ಸಹಕರಿಸಿ ಎಂದು ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ ನಂದಿನಿ ಮಾರಾಟ ಮಳಿಗೆಯ ಮಾಲೀಕ ಸಾ ರಾ ಸತೀಶ್ ನೂತನ ಆಡಳಿತ ಮಂಡಳಿ ಎಲ್ಲ ಸದಸ್ಯರನ್ನು ಶಾಲು ಓದಿಸುವ ಮೂಲಕ ಗೌರವಿಸಿದರು. ಅಧ್ಯಕ್ಷ ಉಪಾಧ್ಯಕ್ಷರ ಬೆಂಬಲಿಗರು ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು.

ಸಂದರ್ಭದಲ್ಲಿ ವಿ ಎಸ್ ಎಸ್ ಮಾಜಿ ಅಧ್ಯಕ್ಷ ಸತೀಶ್, ಪಾಪಣ್ಣ, ನಿರ್ದೇಶಕ ಟ್ರ್ಯಾಕ್ಟರ್ ಅನಂತ್, ಪುರುಷೋತ್ತಮ, ಆನಂದ್, ದಡದಲ್ಲಿ ನಟರಾಜ್. ರೇವಣ್ಣ, ಎಸ್ ಕೆ ಜಯರಾಮ್, ಎಸ್ ಆರ್ ವಸಂತ, ಅಯ್ಯಪ್ಪ. ಗ್ರಾಪಂ ಮಾಜಿ ಸದಸ್ಯ, ಹರೀಶ್, ಗಂಗಾಧರ್, ಎಸ್ ಎಸ್ ಮಂಜೇಗೌಡ, ಸಾ ರಾ ಸತೀಶ್,ರಾಮನಾಯಕ, ಡೈರಿ ಕಾರ್ಯದರ್ಶಿ ಎಸ್ ಡಿ ಚೇತನ್ ಕುಮಾರ್, ಎಸ್ ಆರ್ ಗೋವಿಂದರಾಜು, ಹಾಲು ಪರೀಕ್ಷ ಕ ಅನಂತ,ಕೃಷ್ಣ,,ರಾಮೇಗೌಡ, ಸಂದೀಪ ಇತರರು ಇದ್ದರು.



# ಮಹನೀಯರ ಜಯಂತಿ ಸಮುದಾಯಕ್ಕೆ ಸೀಮಿತವಾಗದಿರಲಿ
## ಶ್ರೀ ಪುರುಷೋತ್ತಮಾನಂದಪುರಿ ಸ್ವಾಮೀಜಿ ಸಲಹೆ



ಮೈಸೂರು: ಮಹನೀಯರ ಜಯಂತಿಗಳು ಒಂದೇ ಸಮುದಾಯಕ್ಕೆ ಸೀಮಿತವಾಗದೆ, ಎಲ್ಲರೂ ಒಗ್ಗೂಡಿ ಆಚರಿಸುವ ಪರಂಪರೆ ಬೆಳೆಸಬೇಕು ಎಂದು ಜಗದ್ಗುರು ಡಾ.ಶ್ರೀಪುರುಷೋತ್ತಮಾನಂದಪುರಿ ಸ್ವಾಮೀಜಿ ಹೇಳಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಮಹಾನಗರ ಪಾಲಿಕೆ ಹಾಗೂ ಭಗೀರಥ ಜಯಂತೋತ್ಸವ ಸಮಿತಿ ವತಿಯಿಂದ ಕರ್ನಾಟಕ ಕಲಾಮಂದಿರದಲ್ಲಿ ನಡೆದ ಭಗೀರಥ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮಹನೀಯರು ಇಡೀ ದೇಶದ ಆಸ್ತಿ ಆಗಿರುವುದರಿಂದ, ಅವರ ಜಯಂತಿಗಳನ್ನು ಎಲ್ಲ ಸಮುದಾಯದವರು ಸೇರಿ ಆಚರಿಸುವ ವಾತಾವರಣ ನಿರ್ಮಾಣವಾಗಬೇಕು ಎಂದರು. ಭಗೀರಥ, ಕನಕದಾಸ, ವಾಲ್ಮೀಕಿ, ಬಸವಣ್ಣ ಹಾಗೂ ಮಾದಾರ ಚೆನ್ನಯ್ಯ ಮುಂತಾದ ಮಹನೀಯರು ನಾಡಿಗೆ ನೀಡಿದ ಕೊಡುಗೆ ಅಪಾರವಾಗಿದ್ದು, ಅವರ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದು ಮುಖ್ಯ ಎಂದರು. ಇಂದಿನ ಸಮಾಜದಲ್ಲಿ ಇತಿಹಾಸ ಮತ್ತು ಜ್ಞಾನದ ಅರಿವು ಕುಂಠಿತವಾಗುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದ ಅವರು, ಮಕ್ಕಳಿಗೆ ಶಿಕ್ಷಣದ ಜೊತೆಗೆ ಧಾರ್ಮಿಕ ಹಾಗೂ ಸಾಂಸ್ಕೃತಿಕ ಮೌಲ್ಯಗಳನ್ನು ನೀಡುವುದು ಅಗತ್ಯ ಎಂದು ಹೇಳಿದರು. ಭಿನ್ನತೆಗಳ ನಡುವೆಯೂ ಏಕತೆಯನ್ನು ಕಾಪಾಡಿಕೊಳ್ಳುವುದು ಭಾರತದ ಶಕ್ತಿಯಾಗಿದ್ದು, ನಾನು ಮೇಲು ನೀನು ಕೀಳು' ಎಂಬ ಮನೋಭಾವವನ್ನು ತೊಡೆದುಹಾಕಿ ಸಹೋದರತ್ವದಿಂದ ಬದುಕಬೇಕೆಂದು ಕರೆ ನೀಡಿದರು.

ಶಾರದ ವಿಲಾಸ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಡಾ. ಎಂ. ಗೋವಿಂದರಾಜು ಅವರು ಮಾತನಾಡಿ, ಭಗೀರಥನ ಕಥೆ ಗುರಿ ಸಾಧನೆಗೆ ಅಗತ್ಯವಾದ ಸಂಕಲ್ಪ, ಶ್ರದ್ಧೆ ಮತ್ತು ಪರಿಶ್ರಮದ ಪ್ರತೀಕವಾಗಿದೆ ಎಂದು ಹೇಳಿದರು. ಗಂಗೆಯನ್ನು ಭೂಮಿಗೆ ತರಲು ಭಗೀರಥನು ಮಾಡಿದ ತಪಸ್ಸು ಮಾನವ ಜೀವನಕ್ಕೆ ಪ್ರೇರಣೆಯಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ವಿವಿಧ ಮಠಾಧೀಶರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳು ಹಾಗೂ ಸಮಾಜದ ಮುಖಂಡರು ಉಪಸ್ಥಿತರಿದ್ದರು.

# ಮೈಸೂರು ಕೆರೆಗಳ ಸರ್ವೆ, ಒತ್ತುವರಿ ತೆರವಿಗೆ ಕಟ್ಟುನಿಟ್ಟಿನ ಸೂಚನೆ

**ಮೈಸೂರು:** ಜಿಲ್ಲೆಯಲ್ಲಿರುವ ಎಲ್ಲಾ ಕೆರೆಗಳ ಸರ್ವೆ ನಡೆಸಿ ಒತ್ತುವರಿ ತೆರವುಗೊಳಿಸುವಂತೆ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಜಿಲ್ಲಾ ಮಟ್ಟದ ಕೆರೆ ಸಂರಕ್ಷಣಾ ಪಡೆಯ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮೈಸೂರು ಜಿಲ್ಲೆಯ ಎಲ್ಲಾ ಕೆರೆಗಳ ಸರ್ವೆ ಮತ್ತು ಅಳತೆ ಕಾರ್ಯವನ್ನು ಒಂದು ವಾರದೊಳಗೆ ಪೂರ್ಣಗೊಳಿಸುವಂತೆ ನಿರ್ದೇಶನ ನೀಡಿದರು. ಜೊತೆಗೆ ಕೆರೆಗಳನ್ನು ಉತ್ತಮ ಸ್ಥಿತಿಯಲ್ಲಿ ಕಾಪಾಡಿಕೊಳ್ಳಲು ಸಂಬಂಧಿಸಿದ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.

ಪರಿಸರ ಸಂರಕ್ಷಣೆ ಇಲಾಖೆಯ ಅಧಿಕಾರಿಗಳಿಗೆ ಕೆರೆಗಳಿಗೆ ಭೇಟಿ ನೀಡಿ ನೀರಿನ ಶುದ್ಧತೆ ಹಾಗೂ ನೈರ್ಮಲ್ಯ ಕಾಪಾಡುವ ಬಗ್ಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಮೈಸೂರು ನಗರದ ಕೆರೆಗಳ ಶುದ್ಧೀಕರಣಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದರು.

ಕಾರ್ಖಾನೆಗಳು ಹಾಗೂ ಇತರ ಮೂಲಗಳಿಂದ ಕೆರೆಗಳಿಗೆ ಸೇರುತ್ತಿರುವ ಅಶುದ್ಧ ನೀರನ್ನು ತಡೆಗಟ್ಟಲು ತಕ್ಷಣ ಕ್ರಮ ವಹಿಸಬೇಕು ಎಂದು ಸೂಚನೆ ನೀಡಿದರು.

ಜಿಲ್ಲೆಯ ಎಲ್ಲಾ ತಹಶೀಲ್ದಾರರಿಗೆ ಒಂದು ವಾರದೊಳಗೆ ಕೆರೆಗಳ ಒತ್ತುವರಿ ತೆರವುಗೊಳಿಸಲು ಸೂಚನೆ ನೀಡಲಾಗಿದ್ದು, ಸರ್ವೆ ಇಲಾಖೆಯ ಅಧಿಕಾರಿಗಳು ಕೆರೆಗಳ ಸಂಪೂರ್ಣ ಸರ್ವೆ ನಡೆಸಿ ದಾಖಲೀಕರಣ ಮಾಡಬೇಕು ಎಂದು ಹೇಳಿದರು.

ಸಭೆಯಲ್ಲಿ ಡಿಡಿಎಲ್‌ಆರ್, ತಹಶೀಲ್ದಾರರು, ಪರಿಸರ ಇಲಾಖೆ ಹಾಗೂ ಜಲಸಂಪನ್ಮೂಲ ಇಲಾಖೆಯ ಅಧಿಕಾರಿಗಳು ಮತ್ತು ಇತರ ಸದಸ್ಯರು ಉಪಸ್ಥಿತರಿದ್ದರು.

# ಜಿಲ್ಲಾ ಕಾಂಗ್ರೆಸ್ ಹಿಂದುಳಿದ ವರ್ಗಗಳ ವಿಭಾಗದ ಕಾರ್ಯದರ್ಶಿಯಾಗಿ ಕೆರೆಹಳ್ಳಿ ರೇವಣ್ಣ ನೇಮಕ

**ಚಾಮರಾಜನಗರ:** ಜಿಲ್ಲಾ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗಗಳ ವಿಭಾಗದ ಕಾರ್ಯದರ್ಶಿಯಾಗಿ ಕೆರೆಹಳ್ಳಿ ರೇವಣ್ಣ ನೇಮಕಗೊಂಡಿದ್ದಾರೆ



ಗುಂಡ್ಲುಪೇಟೆ ವಿಧಾನಸಭಾ ಶಾಸಕ ಹೆಚ್. ಎಂ ಗಣೇಶ್ ಪ್ರಸಾದ್ ಅವರ ಶಿಫಾರಸ್ಸಿನ ಮೇರೆಗೆ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ ಮರಿಸ್ವಾಮಿ ರವರ ಒಪ್ಪಿಗೆ ಮೇರೆಗೆ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ರಾಜ್ಯಾಧ್ಯಕ್ಷ ಮಧು ಬಂಗಾರಪ್ಪ ಅವರ ಅನುಮೋದನೆಯನ್ನು ಪಡೆದು ಚಾಮರಾಜನಗರ ಜಿಲ್ಲಾ ಕಾಂಗ್ರೆಸ್ ಹಿಂದುಳಿದ ವರ್ಗಗಳ ವಿಭಾಗದ ಜಿಲ್ಲಾಧ್ಯಕ್ಷ ಚೇತನ್ ಕುಮಾರ್ ರವರು ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ. ಆದೇಶದಲ್ಲಿ ಪಕ್ಷದ ಸಂಘಟನೆ ಹಾಗೂ ಹಿಂದುಳಿದ ಸಮುದಾಯಗಳ ಸಂಘಟನೆ ವಿಚಾರವಾಗಿ ಕಾರ್ಯೋನ್ಮುಖರಾಗುವಂತೆ ನೇಮಕಾತಿ ಆದೇಶಪತ್ರದಲ್ಲಿ ತಿಳಿಸಿದ್ದಾರೆ.



**ಗುಂಡ್ಲುಪೇಟೆ : ಬಿಜೆಪಿ ಮಂಡಲ ವತಿಯಿಂದ ಪಟ್ಟಣಧ ಬಿಜೆಪಿ ಕಚೇರಿಯಲ್ಲಿ ಶ್ರೀ ಮಹರ್ಷಿ ಭಗೀರಥ ಜಯಂತಿ ಆಚರಣೆ ಮಾಡಲಾಯಿತು,**

# "ಅಂಕಗಳಿಗಿಂತ ಅಚೀವ್ಮೆಂಟ್ ದೊಡ್ಡದು"



ಡಾ.ಸುಧಾಕರ.ಜಿ.ಲಕ್ಕವಳ್ಳಿ

ಸ್ಫೂರ್ತಿ ಸುಧೆ - 04

ಎಸ್‌ಎಸ್‌ಎಲ್‌ಸಿ ಫಲಿತಾಂಶ ಕೇವಲ ಒಂದು ಅಂಕಿ–ಅಂಶವಷ್ಟೇ ಹೊರತು ನಿಮ್ಮ ಭವಿಷ್ಯದ ಅಂತಿಮ ತೀರ್ಪಲ್ಲ. ಹತ್ತನೇ ತರಗತಿಯಲ್ಲಿ ಫೇಲ್ ಆದ ಒಬ್ಬ ಹುಡುಗ ಇಡೀ ಜಗತ್ತೇ ಮೆಚ್ಚುವ ಕ್ರಿಕೆಟ್ ದೇವರು ಆಗಬಲ್ಲ ಎಂದರೆ, ಆ ಸೋಲು ಬದುಕಿನ ಅಂತ್ಯ ಹೇಗಾದೀತು? ಹೌದು,ಸಚಿನ್ ರಮೇಶ್ ತೆಂಡೂಲ್ಕರ್ ಪರೀಕ್ಷೆಯಲ್ಲಿ ಅನುತ್ತೀರ್ಣರಾದಾಗ ಕುಸಿದು ಕೂರಲಿಲ್ಲ. ಅವರು ತಮ್ಮ ಬ್ಯಾಟನ್ನೇ ಲೇಖನಿಯನ್ನಾಗಿ ಮಾಡಿಕೊಂಡು ಕ್ರಿಕೆಟ್ ಮೈದಾನದಲ್ಲಿ ಇತಿಹಾಸ ಬರೆದರು. ಇಂದು ಕಾಲ ಬದಲಾಗಿದೆ. ಕೇವಲ ಪುಸ್ತಕದ ವಿಷಯಗಳಿಗಿಂತ ಪ್ರಾಯೋಗಿಕ ಸಾಧನೆಗೆ ಬೆಲೆಯಿದೆ. ಸಚಿನ್ ಅವರಂತೆ ನಟ ಅಕ್ಷಯ್ ಕುಮಾರ್ ಅಥವಾ ಹಾಲಿವುಡ್‌ನ ದಿಗ್ಗಜರು ಶೈಕ್ಷಣಿಕ ಹಿನ್ನಡೆಯನ್ನೂ ಮೆಟ್ಟಿ ನಿಂತವರು. ಇವರೆಲ್ಲರೂ ನಮಗೆ ಕಲಿಸುವ ಪಾಠವೊಂದೇ: ಒಂದು ಕಾಗದದ ತುಂಡು ನಿಮ್ಮ ವ್ಯಕ್ತಿತ್ವವನ್ನು ಅಳೆಯಲಾರದು.

ವಿದ್ಯಾರ್ಥಿಗಳೇ,ಪ್ರತಿಭೆ ಎಂಬುದು ಕೇವಲ ಅಂಕ ಅಥವಾ ರಾಂಕ್ಗಳಲ್ಲಿ ಅಡಗಿಲ್ಲ. ನಿಮ್ಮಲ್ಲಿ ಅಡಗಿರುವ ವಿಶೇಷ ಕೌಶಲವನ್ನು ಗುರುತಿಸಿ. ಸಚಿನ್ ಮೈದಾನದಲ್ಲಿ ಶೂನ್ಯಕ್ಕೆ ಔಟ್ ಆದಾಗ ಆಟ ಬಿಡಲಿಲ್ಲ, ಬದಲಾಗಿ ಮುಂದಿನ ಪಂದ್ಯದಲ್ಲಿ ಶತಕ ಬಾರಿಸಲು ಸಜ್ಜಾದರು. ಈ ಬಾರಿಯ ಪರೀಕ್ಷೆಯ ಹಿನ್ನಡೆ ನಿಮ್ಮ ಕಲಿಕೆಯ ಮೊದಲ ಹೆಜ್ಜೆ ಎಂದು ಭಾವಿಸಿ.


ಸೋಲನ್ನು ಸೋಲಿಸುವ ಛಲ ನಿಮ್ಮಲ್ಲಿರಲಿ.



ಪರಿಶ್ರಮವಿದ್ದರೆ, ಇಂದು ನಿಮ್ಮ ಅಂಕಪಟ್ಟಿ ನೋಡಿ ಹೀಯಾಳಿಸುವ ಜಗತ್ತೇ ನಾಳೆ ನಿಮ್ಮ ಸಾಧನೆ ನೋಡಿ ಎದ್ದು ನಿಂತು ಚಪ್ಪಾಳೆ ತಟ್ಟುತ್ತದೆ. ಎದ್ದೇಳಿ, ಸಚಿನ್ ತೆಂಡೂಲ್ಕರ್ ಅವರಂತೆ ನಿಮ್ಮ ಬದುಕಿನ ಮೈದಾನದಲ್ಲಿ ನೀವು ಮಾಸ್ಟರ್ ಬ್ಲಾಸ್ಟರ್ ಆಗಿ ಮಿಂಚುವ ಕಾಲ ದೂರವಿಲ್ಲ!

# ಸಡಗರ ಸಂಭ್ರಮದಿಂದ ಜರುಗಿದ ಯೋಗ ನರಸಿಂಹ ಸ್ವಾಮಿ ಬ್ರಹ್ಮರಥೋತ್ಸವ

**ಕೆ .ಆರ್. ನಗರ :** ಸಾಲಿಗ್ರಾಮ ಪಟ್ಟಣದಲ್ಲಿ ಹಲವು ಶತಮಾನಗಳ ಇತಿಹಾಸ ಇರುವ ಪುಣ್ಯ ಪುರಾಣ ಪ್ರಸಿದ್ಧ ಯೋಗ ನರಸಿಂಹ ಸ್ವಾಮಿ ಬ್ರಹ್ಮರಥೋತ್ಸವು ಸಡಗರ ಸಂಭ್ರಮದಿಂದ ಬುಧವಾರ ಜರುಗಿತು.



ಕಳೆದ ಎರಡು ದಿನಗಳಿಂದ ಶ್ರೀ ಯೋಗ ನರಸಿಂಹ ಸ್ವಾಮಿಗೆ ವಿಶೇಷ ಪೂಜೆ ಮತ್ತು ಕೈ ಕಾರ್ಯಗಳನ್ನು ಅರ್ಚಕ ಶ್ರೀನಿವಾಸ ಅಯ್ಯಂಗಾರ್ ಅವರ ನೇತೃತ್ವದಲ್ಲಿ ಅವರು ತಂಡ ನಡೆಸಿತು.

ಪ್ರತಿ ವರ್ಷಕ್ಕಿಂತ ಈ ವರ್ಷ ಭಕ್ತರು ಸಂಖ್ಯೆ ಹೆಚ್ಚಾಗಿತು.ಅರಿಕೆ ಹೊತ್ತ ಭಕ್ತರು ದೇವಸ್ಥಾನದ ಒಳಾಂಗಣದಲ್ಲಿರುವ ಯೋಗ ನರಸಿಂಹ ಸ್ವಾಮಿ ಉತ್ಸವ ಮುರ್ತಿಗೆ ಶ್ರದ್ದೆ ಭಕ್ತಿಯಿಂದ ತಮ್ಮ ಇಷ್ಟಾರ್ಥ ಪೂಜೆ ಸಲ್ಲಿಸಿದರು.

ಸಾವಿರಾರು ಭಕ್ತರು ಶ್ರೀ ಯೋಗಾನರಸಿಂಹ ಸ್ವಾಮಿಗೆ ಜಯಘೋಷಣೆಗಳನ್ನು ಕೂಗುತ್ತಾ ಉತ್ಸವ ಮೂರ್ತಿ ಕೂರಿಸಿದ್ದ ಬ್ರಹ್ಮ ರಥೋತ್ಸವವನ್ನು ದೇವಸ್ಥಾನದ ಮುಂಭಾಗ ಸಿದ್ದಪಡಿಸಿದ್ದ ರಥೋತ್ಸವವನ್ನು ಎಳೆದರು. ರಥೋತ್ಸವವು ಚಿಕ್ಕನಾಯಕನಹಳ್ಳಿ ರಸ್ತೆ ಮಾರ್ಗವಾಗಿ ಹೊಸ ಬೀದಿ.ಕಾಲುವೆ ಬೀದಿ.ಪೇಟೆ ಬಾಗಿಲಿಗೆ ಬಂದು ನಿಂತಿತ್ತು.ಪ್ರತಿ ವರ್ಷದ ವಾಡಿಕೆಯಂತೆ ಒಂದು ಗಂಟೆಗಳ ಕಾಲ ಭಾಗದ ಭಕ್ತರಿಗೆ ವಿಷೇಶ ಪೂಜೆ ಸಲ್ಲಿಸಲಾಯಿತು.

ಯೋಗ ನರಸಿಂಹಸ್ವಾಮಿ ಬ್ರಹ್ಮ ರಥೋತ್ಸವಕ್ಕೆ ಅದೇ ಮೊದಲ ಬಾರಿಗೆ ಕೇರಳ ಮೂಲದ ಶೈಲಿಯಲ್ಲಿ ಅಲಂಕರಿಸಲಾಗಿತ್ತು.ಸಾಗಿದ ಮೆರವಣಿಗೆಯಲ್ಲಿ ಪಟ್ಟಣ ಮತ್ತು ಸುತ್ತ ಮುತ್ತ ಗ್ರಾಮಗಳಿಂದ ಆಗಮಿಸಿದ ಭಕ್ತರು ರಸ್ತೆ ಉದ್ದಕ್ಕೂ ವಿಶೇಷ ಪೂಜೆಗಳನ್ನು ಸಲ್ಲಿಸಿದರು. ಅನೇಕ ದಾನಿಗಳು ನೇರದಿದ್ದ ಭಕ್ತರಿಗೆ ಪ್ರಸಾದ ಮತ್ತು ತಂಪು ಪಾನೀಯಗಳನ್ನು ಹೆಚ್ಚೆ ಹೆಚ್ಚಿಗೂ ವಿತರಿಸುವ ಮೂಲಕ ಬಿಸಿಲಿನ ಕಾವು ಇಳಿಸಿ ದೇವರ ಸೇವೆಗೆ ಸಹಕರಿಸಿದರು.

ಯೋಗ ನರಸಿಂಹ ಸ್ವಾಮಿ ದೇವಸ್ಥಾನದಿಂದ ಗಾಂಧಿ ವೃತ್ತದ ವರೆಗೆ ವಿವಿಧ ಸಿಹಿ ತಿಂಡಿ. ಮಕ್ಕಳ ಆಟೋಟ ವಸ್ತು ಗಳು ಅಂಗಡಿ.ಕಬ್ಬಿನ ಹಾಲು.ಮಿಠಾಯಿ ಅಂಗಡಿ. ಪುರಿಕಾರ ಮತ್ತು ಹೆಣ್ಣು ಮಕ್ಕಳ ಸೌಂದರ್ಯ ಸೇಳೆಯುವ ಡಿಜೈನ್ ಕಲ್ಲರ್ ಕಲ್ಲರ್ ವಸ್ತುಗಳ ಮಾರಾಟ ಅಂಗಡಿಗಳು ತಲೆ ಎತ್ತಿದವು.ಜಾತ್ರೆಯಲ್ಲಿ ಜೋರಾದ ಪಿಪಿ ಶಬ್ದಗಳಿಗೆ ನಿಷೇಧ ಏರಿಸಲಾಯಿತು. ಜಾತ್ರೆಗೆ ಆಗಮಿಸಿದ ಜನರು ದೇವರಿಗೆ ವಿಶೇಷ ಪೂಜೆ ಸಲ್ಲಿಸಿ ಜಾತ್ರೆ ನೋಡಲು ಯಾವುದೇ ಅಡಚಣೆ ಆಗದಂತೆ ಸಾಲಿಗ್ರಾಮ ಪೊಲೀಸರು ಬೀಗಿ ಬಂದ್ ಬಸ್ತ್ ಮಾಡಿದರು.ಈ ವರ್ಷ ಮಾಜಿ ಸಚಿವ ಸಾ. ರಾ. ಮಹೇಶ್ ಅವರ ಫ್ಲೆಕ್ಸ್ ಒಂದಷ್ಟು ಬಿಟ್ಟರೇ ಹಾಲಿ ಶಾಸಕರು ಇನ್ನಿತರ ರಾಜಕೀಯ ಮುಖಂಡರ ಫ್ಲೆಕ್ಸ್ ಇರಲಿಲ್ಲ. ಮಾಜಿ ಸಚಿವ ಸಾ. ರಾ. ಮಹೇಶ್. ಮೈಮುಲ್ ನಿರ್ದೇಶಕ ಎ .ಟಿ. ಸೋಮಶೇಖರ್. ಲೋಕೋಪಯೋಗಿ ಇಲಾಖೆ ಇಂಜಿನಿಯರ್ ಪ್ರಸಾದ್. ತಹಸಿಲ್ದಾರ್ ರುಕೀಯಾ ಬೆಗಂ.. ಎಪಿಎಂಸಿ ಮಾಜಿ ಅಧ್ಯಕ್ಷ ಕೊಪ್ಪಳ್ಳಿ ಸೋಮು. ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷ ವೈನ್ಸ್ ನಟರಾಜ್. ಎಸ್ .ಆರ್. ಪ್ರಕಾಶ್. ಟ್ರ್ಯಾಕ್ಟರ್ ಅನಂತ್. ನಾಗರಾಜೇಗೌಡ .ಗೋವಿಂದ. ಮಹಾದೇವ. ಕೃಷ್ಣನಾಯಕ.ಕುಮಾರ್. ಜ್ಯೋತಿ . ವೆಂಕಟೇಶ್. ಸಾ .ರಾ. ಗುರುಪ್ರಸಾದ್. ಬಸವರಾಜ್ ನಾಗೇಶ್. ಲೋಕೇಶ್ ಗೋಬಿ,. ವೆಂಕಟೇಶ್ ಸೇರಿದಂತೆ ಅನೇಕ ರಾಜಕೀಯ ಮುಖಂಡರು ಮತ್ತು ಭಕ್ತಾದಿಗಳು ಇದ್ದರು.





ಸಿನಿಮಾ ವರದಿ: ಬಿ.ಜಿ.ರವಿಕುಮಾರ್



## ವಿವಾದಕ್ಕೆ ಸಿಲುಕಿದ ತಿಕ್ಲುರಾಮ ಶೀರ್ಷಿಕೆ

ಸಾಹಿತಿ, ಗಾಯಕ, ಸಂಗೀತ ಸಂಯೋಜಕ ಮಂಜುಕವಿ ನಿರ್ದೇಶನ ಮಾಡುತ್ತಿರುವ ?ತಿಕ್ಲು ರಾಮ? ಸಿನಿಮಾದ ಚಿತ್ರೀಕರಣವು ಈಗಾಗಲೇ ಶೇಕಡ 40ರಷ್ಟು ಮುಗಿದಿದೆ. ಕಥೆ ಬರೆದಿರುವ ಡಾ.ರಾಜ್‌ವೀರ್ ಶೀರ್ಷಿಕೆ ಹೆಸರಿನ ಪಾತ್ರದಲ್ಲಿ ನಟಿಸುತ್ತಿದ್ದಾರೆ. ರಾಮನವಮಿ ಪುಣ್ಯದಿನದಂದು ಹೊಸ ಪೋಸ್ಟರ್‌ನ್ನು ಹೊರಬಿಡಲಾಗಿತ್ತು. ಆದರೆ ಸಿನಿಮಾದ ಶೀರ್ಷಿಕೆ ಸರಿಯಿಲ್ಲವೆಂದು ಹಿಂದೂಪರ ಸಂಘಟನೆಯ ಕಾರ್ಯಕರ್ತ ಗಿರೀಶ್ ಕಾಮಾಕ್ಷಿಪಾಳ್ಯ ಪೋಲೀಸ್ ಠಾಣೆಗೆ ದೂರು ನೀಡಿ, ಸಿನಿಮಾದ ಹೆಸರನ್ನು ಬದಲಾವಣೆ ಮಾಡಬೇಕೆಂದು ಆಗ್ರಹ ಪಡಿಸಿರುತ್ತಾರೆ.

ಇದೇ ವಿಷಯಕ್ಕೆ ಮಾತನಾಡಿರುವ ಡಾ.ರಾಜ್‌ವೀರ್, ರಾಮ ಮತ್ತು ಹನುಮನ ಹೆಸರಿಗೆ ಧಕ್ಕೆ ಬಾರದಂತೆ, ಅವಹೇಳನ ಮಾಡದಂತೆ ಇಲ್ಲಿಯವರೆಗೂ ಯಾವುದೇ ಕೆಲಸವನ್ನು ಮಾಡಿಲ್ಲ, ಮಾಡುವುದು ಇಲ್ಲ. ಟೈಟಲ್ ಬಗ್ಗೆ ಲೋಪದೋಷಗಳು ಕಂಡುಬಂದಲ್ಲಿ, ಅದನ್ನು ಸರಿಪಡಿಸಿಕೊಳ್ಳುವುದಾಗಿ ನಿರ್ಮಾಪಕಿ ಶೃತಿ.ಜಿ.ಬಿ ಮತ್ತು ನಿರ್ದೇಶಕ ಮಂಜುಕವಿ ಸ್ಪಷ್ಟನೆ ನೀಡಿರುತ್ತಾರೆ. ಒಂದು ವೇಳೆ ರಾಮ, ಹನುಮನ ಅವಹೇಳನ ದೃಶ್ಯಗಳು ಇದ್ದಲ್ಲಿ ಅದನ್ನು ತೆಗೆದು ಹಾಕಲಾಗುವುದು.

ಇದೊಂದು ಪರಿಸರ ಪ್ರೇಮಿ, ಹೃದಯ ಸ್ಪರ್ಶಿ ಕಾದಂಬರಿ ಆಗಿದೆ. ಇದನ್ನು ಓದಿದ ಹಿರಿಯ ಸಾಹಿತಿ ಡಾ.ದೊಡ್ಡರಂಗೇಗೌಡರು ಮೆಚ್ಚುಗೆ ವ್ಯಕ್ತಪಡಿಸಿ ಶುಭ ಹಾರೈಸಿರುತ್ತಾರೆ. ಸಿನಿಮಾದಲ್ಲಿ ಉತ್ತಮವಾದ ಸಂದೇಶಗಳು ಇರಲಿದೆ. ತಿಕ್ಲುರಾಮ ಸಾಮಾಜಿಕ ಕಳಕಳಿಯ ಕೆಲಸದಲ್ಲಿ ತೊಡಗಿಕೊಂಡು, ಪರಿಸರ ಕಾಪಾಡುತ್ತಾ, ಜೀವನ ನಡೆಸುತ್ತಿರುವಾಗ ಆತನ ಬದುಕಲ್ಲಿ ಏನೆಲ್ಲಾ ಆಗುಹೋಗುಗಳು ಆಗುತ್ತದೆ ಎಂಬುದನ್ನು ಸ್ಪಷ್ಟವಾಗಿ ತೋರಿಸುವ ಪ್ರಯತ್ನ ಮಾಡಲಾಗುತ್ತಿದೆ. ರಾಮನನ್ನು ಬಿಂಬಿಸುವ ನಿಟ್ಟಿನಲ್ಲಿ ಸಿನಿಮಾ ಸಿದ್ದಪಡಿಸಲಾಗುತ್ತಿದೆ. ಶ್ರೀರಾಮನಿಗೆ ಅವಮಾನವಾಗುವ ಹಾಗೂ, ಹಿಂದೂಗಳ ಭಾವನೆಗೆ ಧಕ್ಕೆ ತರಬಾರದೆಂಬ ಉದ್ದೇಶದಿಂದ ?ತಿಕ್ಲುರಾಮ? ಎನ್ನುವ ಚಿತ್ರದ ಶೀರ್ಷಿಕೆಯನ್ನು ಬದಲಾಯಿಸಲು ಸೂಚಿಸಲಾಗಿದ್ದು, ಯಾವ ಹೆಸರು ಇಡಲಾಗುವುದು ಎಂಬ ವಿಷಯವನ್ನು ಸುದ್ದಿಗೋಷ್ಟಿ ನಡೆಸಿ ಅಲ್ಲಿ ತಿಳಿಸಲಾಗುವುದೆಂದು ಡಾ.ರಾಜ್‌ವೀರ್ ಮಾಹಿತಿ ಹಂಚಿಕೊಂಡಿದ್ದಾರೆ.

ತಾರಾಗಣದಲ್ಲಿ ಸುಚೇಂದ್ರ ಪಸ್ರಾದ್, ಜಹಾಂಗೀರ್, ಚೈತ್ರರಾಮ್, ಹಾಸ್ಯ ನಟ ಗಿರೀಶ್. ಇವರೊಂದಿಗೆ ವಿನೋದ್ ಪವಿತ್ರ, ಮಧು ಭೈರಪ್ಪ, ಶ್ರಾವ್ಯ ಸೇರಿದಂತೆ ಅನೇಕ ಹೆಸರಾಂತ ಕಲಾವಿದರು ಅಭಿನಯಿಸುತ್ತಿದ್ದಾರೆ. ಹಿನ್ನಲೆ ಸಂಗೀತ ವಿನು ಮನಸು, ಛಾಯಾಗ್ರಹಣ ರಾಜ್ ಕಡೂರು-ಭರತ್, ಸಾಹಸ ಅಲ್ಟಿಮೇಟ್ ಶಿವು-ಮಾಸ್ ಮಾದು, ನೃತ್ಯ ಜಗ್ಗು ಅವರದಾಗಿದೆ.

## 'ದೊಡ್ಮನ್ಸ' ಟೀಸರ್ ಬಂತು... ತೆರೆಗೂ ಸಿದ್ಧ

ಯುವ ಪ್ರತಿಭೆ ಶರತ್ ಕೃಷ್ಣ ನಟನೆ ಮತ್ತು ನಿರ್ದೇಶನ ಹೊಸಚಿತ್ರ ದೊಡ್ಮನ್ಸ ತೆರೆಗೆ ಬರಲು ಸಿದ್ದವಾಗಿದೆ. ಈಗಾಗಲೇ ಬಹುತೇಕ ಕೆಲಸಗಳನ್ನು ಪೂರ್ಣಗೊಳಿಸಿರುವ ಚಿತ್ರತಂಡ, ಇದೀಗ ದೊಡ್ಮನ್ಸ ಚಿತ್ರದ ಮೊದಲ ಟೀಸರ್ ಅನ್ನು ಬಿಡುಗೊಳಿಸಿದೆ.

ಬೆಂಗಳೂರಿನಲ್ಲಿರುವ ಆಟೋ ಡ್ರೈವರ್ ಒಬ್ಬನ ಜೀವನದಲ್ಲಿ ನಡೆಯುವ ಘಟನೆಗಳ ಸುತ್ತ ನಡೆಯುವ ಕಾಲ್ಪನಿಕ ಕಥಾಹಂದರವನ್ನು ಹೊಂದಿರುವ ದೊಡ್ಮನ್ಸ ಚಿತ್ರದಲ್ಲಿ ನಾಯಕ ನಟ ಕಂ ನಿರ್ದೇಶಕ ಶರತ್ ಕೃಷ್ಣ ಆಟೋ ಡ್ರೈವರ್ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಚಿತ್ರದಲ್ಲಿ ರೇಷ್ಮಾ ಲಿಂಗರಾಜಪ್ಪ ನಾಯಕಿಯಾಗಿ ಕಾಣಿಸಿಕೊಂಡಿದ್ದು, ಉಳಿದಂತೆ ಹುಲಿ ಕಾರ್ತಿಕ್, ಬಲರಾಜವಾಡಿ, ಶಿಲ್ಪಾ ಮೊದಲಾದ ಕಲಾವಿದರು ಚಿತ್ರದ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ.

ದೊಡ್ಮನ್ಸ ಚಿತ್ರದ ಟೀಸರ್ ಬಿಡುಗಡೆ ವೇಳೆ ಮಾತನಾಡಿದ ಚಿತ್ರದ ನಾಯಕ ನಟ ಕಂ ನಿರ್ದೇಶಕ ಶರತ್ ಕೃಷ್ಣ, ಸಾಮಾನ್ಯ ಆಟೋ ಡ್ರೈವರ್ ಒಬ್ಬನ ಜೀವನದಲ್ಲಿ ಹೇಗೆ ದೊಡ್ಡ ಮನುಷ್ಯನಾಗುತ್ತಾನೆ. ಸಾಮಾನ್ಯ ಮನುಷ್ಯನೊಬ್ಬ ಜೀವನದಲ್ಲಿ ಯಾವುದರಿಂದ ದೊಡ್ಮನ್ಸ ಆಗುತ್ತಾನೆ ಅನ್ನೋದೆ ಈ ಚಿತ್ರ. ಪಕ್ಕಾ ಮಾಸ್ ಎಂಟರ್ಟೈನ್ಮೆಂಟ್ ಇಟ್ಟುಕೊಂಡು ಈ ಸಿನಿಮಾ ಮಾಡಿದ್ದೇವೆ. ಎಂಬುದು ದೊಡ್ಮನ್ಸ ಚಿತ್ರದ ನಾಯಕ ನಟ ಕಂ ನಿರ್ದೇಶಕ ಶರತ್ ಕೃಷ್ಣ ಮಾತು.



ದೊಡ್ಮನ್ಸ ನ ಬಗ್ಗೆ ಮಾತನಾಡಿದ ನಾಯಕ ನಟಿ ರೇಷ್ಮಾ ಲಿಂಗರಾಜಪ್ಪ, ಸಾಮಾನ್ಯವಾಗಿ ಬಹುತೇಕ ಸಿನಿಮಾಗಳಲ್ಲಿ ನಾಯಕ ನಟಿಯರಿಗೆ ಪಾತ್ರದ ಪ್ರಾಮುಖ್ಯತೆ ಕಡಿಮೆಯಿರುತ್ತದೆ. ಆದರೆ ಈ ಸಿನಿಮಾದಲ್ಲಿ ನನ್ನ ಪಾತ್ರಕ್ಕೆ ಅದರದ್ದೇ ಆದ ಪ್ರಾಮುಖ್ಯತೆಯಿದೆ. ಸಿನಿಮಾ ತುಂಬ ಚೆನ್ನಾಗಿ ಬಂದಿದ್ದು, ಆದಷ್ಟು ಬೇಗ ಪ್ರೇಕ್ಷಕರ ಮುಂದೆ ಬರಲಿದ್ದೇವೆ ಎಂದರು.

ದೊಡ್ಮನ್ಸ ಚಿತ್ರದ ಚಿತ್ರೀಕರಣ ಅನುಭವಗಳ ಬಗ್ಗೆ ಮಾತನಾಡಿದ ನಟ ಹುಲಿ ಕಾರ್ತಿಕ್, ಈ ಚಿತ್ರದ ನಾಯಕ ನಟ ಮತ್ತು ನಿರ್ದೇಶಕ ಶರತ್ ಕೃಷ್ಣ, ಇಡೀ ಸಿನಿಮಾವನ್ನು ತಮ್ಮ ಹೆಗಲ ಮೇಲೆ ಹೊತ್ತುಕೊಂಡು ಈ ಸಿನಿಮಾ ಮಾಡಿದ್ದಾರೆ. ಸಿನಿಮಾದ ಆರಂಭದಿಂದ ಅಂತ್ಯದವರೆಗೂ ಈ ಚಿತ್ರತಂಡದ ಪ್ರಯಾಣದಲ್ಲಿ ಜೊತೆಯಾಗಿದ್ದು, ಅದರ ಕಷ್ಟಗಳು, ಏಳು-ಬೀಳುಗಳನ್ನು ಹತ್ತಿರದಿಂದ ಕಂಡಿದ್ದೇನೆ. ಈ ಸಿನಿಮಾ ಖಂಡಿತವಾಗಿಯೂ ಪ್ರೇಕ್ಷಕರಿಗೆ ಇಷ್ಟವಾಗಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ದೊಡ್ಮನ್ಸ ಚಿತ್ರದಲ್ಲಿ ಒಟ್ಟು ಐದು ಹಾಡುಗಳಿದ್ದು, ಶ್ರೀಧರ ಕಶ್ಯಪ್ ಮತ್ತು ಅಲೆಕ್ಸ್ ಸಂಗೀತ ಸಂಯೋಜಿಸಿದ್ದಾರೆ. ಅಲ್ಟಿಮೇಟ್ ಶಿವು, ಜಾಗ್ವಾರ್ ಸಣ್ಣಪ್ಪ ಚಿತ್ರಕ್ಕೆ ಸಾಹಸ ಸಂಯೋಜಿಸಿದ್ದಾರೆ.

ಆನಂದ ಇಳಯರಾಜ ಛಾಯಾಗ್ರಹಣ, ವೇದಿಕ್ ಸಂಕಲನ ದೊಡ್ಮನ್ಸ ಚಿತ್ರಕ್ಕಿದೆ.

## ಕಿರುತೆರೆ ಪ್ರಯೋಗ 'ತ್ರಿವೇಣಿ ಸಂಗಮ'

ಎರಡು ಧಾರಾವಾಹಿಗಳು ಒಂದಾಗುವುದನ್ನು 'ಮಹಾಸಂಗಮ' ಎಂದು ಹೇಳಲಾಗುತ್ತದೆ. ಆದರೆ ಕಿರುತೆರೆಯಲ್ಲಿ ಮೂರೂ ಧಾರಾವಾಹಿಗಳನ್ನು ಸೇರಿಸಿ "ತ್ರಿವೇಣಿ ಸಂಗಮ" ಮಾಡುತ್ತಿರುವುದು ಇದೇ ಮೊದಲು. ಈ ಹೆಗ್ಗಳಿಕೆ ಸ್ಟಾರ್ ಸುವರ್ಣ ವಾಹಿನಿಗೆ ಸಲ್ಲುತ್ತದೆ.

'ನೀ ಇರಲು ಜೊತೆಯಲ್ಲಿ' ಧಾರಾವಾಹಿಯ ಕಥೆಯಲ್ಲಿ ಇದೀಗ 5 ವರ್ಷಗಳೇ ಕಳೆದಿದೆ, ಕಾಲಚಕ್ರ ಬದಲಾಗಿದೆ. ನಾಯಕ ಕೃಷ್ಣ ತನ್ನ ದುಡಿಮೆಯಿಂದ ಶ್ರೀಮಂತನಾಗಿದ್ದು, ರಚನಾಳ ನೆನಪಿನಲ್ಲಿ ಬದುಕುತ್ತಿದ್ದಾನೆ. ಕೃಷ್ಣನ ಈ ಪರಿಸ್ಥಿತಿ ನೋಡಿ ಮಗನಿಗೆ ಇನ್ನೊಂದು ಮದುವೆ ಮಾಡಬೇಕೆಂಬ ಹಂಬಲ ಹೆತ್ತವರದ್ದು.

ಮತ್ತೊಂದೆಡೆ ಕಥೆಗೆ ಹೊಸ ನಾಯಕಿಯಾಗಿ ಎಂಟ್ರಿ ಕೊಟ್ಟಿರೋ ರಾಧಾ, ಮಧ್ಯಮ ಕುಟುಂಬದಲ್ಲಿ ಬೆಳೆದಿರೊಳು, ತನ್ನ ಜೀವನದಲ್ಲಿ ನಡೆದಿರುವ ಒಂದು ಘಟನೆಯಿಂದಾಗಿ ನೋಡಲು ಬರುವ ಹುಡುಗರು ಈಕೆಯನ್ನು ಮದುವೆಯಾಗಲು ನಿರಾಕರಿಸುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಊರ್ಮಿಳಾ ರಚಿಸುವ ತಂತ್ರಗಾರಿಕೆಯಿಂದಾಗಿ ಕೃಷ್ಣ-ರಾಧಾರ ಮದುವೆ ನಿಶ್ಚಯವಾಗುತ್ತದೆ. ಇಷ್ಟವಿಲ್ಲದಿದ್ದರು ಹೆತ್ತವರಿಗಾಗಿ ಮದುವೆಯಾಗಲು ಸಿದ್ಧನಾಗುತ್ತಾನೆ ಕೃಷ್ಣ.

ಈ ಮದುವೆಗೆ ಸಾಕ್ಷಿಯಾಗಲಿದ್ದಾರೆ 'ಗೌರಿಶಂಕರ' ಹಾಗು 'ಶಾರದೆ' ಧಾರಾವಾಹಿ ಕುಟುಂಬ. ಕಥೆಯಲ್ಲಿ ರೋಚಕ ತಿರುವುಗಳಿದ್ದು ಇವರ ಆಗಮನ ಹೇಗೆ ಆಗಲಿದೆ ಎಂಬುದನ್ನು ನೀವು ಕಾದು ನೋಡಬೇಕಿದೆ. ಒಟ್ಟಿನಲ್ಲಿ ಗೌರಿ-ಶಂಕರರ ಸಾರಥ್ಯದಲ್ಲಿ, ಸಿದ್ದು- ಶಾರದಾ ಆತಿಥ್ಯದಲ್ಲಿ ಅದ್ದೂರಿಯಾಗಿ ನಡೀತಿದೆ ರಾಧಾ -ಕೃಷ್ಣ ಕಲ್ಯಾಣ.

ಗೌರಿಶಂಕರ, ನೀ ಇರಲು ಜೊತೆಯಲ್ಲಿ ಹಾಗು ಶಾರದೆ "ತ್ರಿವೇಣಿ ಸಂಗಮ".. ಸೋಮವಾರದಿಂದ ಆರಂಭಗೊಂಡಿದೆ




## ಟೀಸರ್ ಬಿಡುಗಡೆ ಮಾಡಿದ ಮುಖ್ಯಮಂತ್ರಿ

ಸಾಮಾಜಿಕ ಕಥಾಹಂದರವನ್ನು ಇಟ್ಟುಕೊಂಡು ತಯಾರಾಗಿರುವ 'ಸರ್ಕಾರಿ ನ್ಯಾಯಬೆಲೆ ಅಂಗಡಿ' ಚಿತ್ರ ಇದೀಗ ತೆರೆಗೆ ಬರಲು ಸಿದ್ಧವಾಗಿದೆ. ಈಗಾಗಲೇ ತನ್ನ ಬಹುತೇಕ ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನು ಮುಗಿಸಿರುವ 'ಸರ್ಕಾರಿ ನ್ಯಾಯಬೆಲೆ ಅಂಗಡಿ' ಚಿತ್ರದ ಶೀರ್ಷಿಕೆ ಗೀತೆ ಇತ್ತೀಚೆಗೆ ಬಿಡುಗಡೆಯಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, 'ಸರ್ಕಾರಿ ನ್ಯಾಯಬೆಲೆ ಅಂಗಡಿ' ಚಿತ್ರದ ಶೀರ್ಷಿಕೆ ಗೀತೆಯನ್ನು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಹಾರೈಸಿದರು.

ಸಿನಿಮಾದ ಹೆಸರೇ ಹೇಳುವಂತೆ, ಇದು 'ಸರ್ಕಾರಿ ನ್ಯಾಯಬೆಲೆ ಅಂಗಡಿ' ಮತ್ತು ಪಡಿತರ ವ್ಯವಸ್ಥೆಯ ಸುತ್ತ ನಡೆಯುವಂಥ ಕಥಾಹಂದರದ ಚಿತ್ರ. ಪಕ್ಕಾ ಗ್ರಾಮೀಣ ಸೊಗಡಿನ ಕಥೆಯನ್ನು ಹೊಂದಿರುವ ಈ ಚಿತ್ರದ ಸಂಪೂರ್ಣ ಚಿತ್ರೀಕರಣವನ್ನು ಮಂಡ್ಯ ಜಿಲ್ಲೆಯಲ್ಲೇ ನಡೆಸಿರುವುದು ವಿಶೇಷ.

'ಸರ್ಕಾರಿ ನ್ಯಾಯಬೆಲೆ ಅಂಗಡಿ' ಚಿತ್ರದ ಶೀರ್ಷಿಕೆ ಗೀತೆಯನ್ನು ಬಿಡುಗಡೆ ಮಾಡಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, 'ಸಿನಿಮಾ ಎಂಬುದು ಬಹಳ ಪ್ರಭಾವಶಾಲಿ ಮಾಧ್ಯಮ. ಸಿನಿಮಾಗಳ ಮೂಲಕ ವಾಸ್ತವ ವಿಷಯಗಳನ್ನು ಬಹಳ ಬೇಗ ಜನರಿಗೆ ತಲುಪಿಸಬಹುದು. 'ಸರ್ಕಾರಿ ನ್ಯಾಯಬೆಲೆ ಅಂಗಡಿ' ಸಿನಿಮಾ ವಾಸ್ತವ ಸ್ಥಿತಿಯನ್ನು ಕಥಾಹಂದರವಾಗಿ ಇಟ್ಟುಕೊಂಡು ತಯಾರಾಗಿರುವುದು ಶ್ಲಾಘನೀಯ. ಜನ ಸಾಮಾನ್ಯರು, ಬಡವರು ಹಸಿವಿನಿಂದ ಬಳಲಬಾರದು ಎಂಬ ಉದ್ದೇಶದಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 'ಸರ್ಕಾರಿ ನ್ಯಾಯಬೆಲೆ ಅಂಗಡಿ'ಗಳ ಮೂಲಕ ದಿನಸಿ ಮತ್ತು ಆಹಾರವನ್ನು ಜನರಿಗೆ ತಲುಪಿಸುವ ಕೆಲಸ ಮಾಡುತ್ತಿದೆ. ಆದರೆ, ಈ ವ್ಯವಸ್ಥೆಯಲ್ಲಿರುವ ಕೆಲವು ಲೋಪಗಳಿಂದ ಇದರ ಉದ್ದೇಶ ಪರಿಣಾಮಕಾರಿಯಾಗಿ ಈಡೇರುತ್ತಿಲ್ಲ. ಈಗ ಇದೇ ವಿಷಯವನ್ನು ಸಿನಿಮಾವಾಗಿಸಿ 'ಸರ್ಕಾರಿ ನ್ಯಾಯಬೆಲೆ ಅಂಗಡಿ' ಚಿತ್ರತಂಡ ಪ್ರೇಕ್ಷಕರ ಮುಂದೆ ಹೇಳಲು ಹೊರಟಿದೆ. ಈ ಚಿತ್ರ ಜನ ಜಾಗೃತಿ ಮೂಡಿಸಿ, ಯಶಸ್ವಿಯಾಗಲಿ' ಎಂದು ಶುಭ ಹಾರೈಸಿದರು.




'ಸರ್ಕಾರಿ ನ್ಯಾಯಬೆಲೆ ಅಂಗಡಿ? ಚಿತ್ರದಲ್ಲಿ ನಟ ಕುಮಾರ್ ಬಂಗಾರಪ್ಪ, ನಟಿ ರಾಗಿಣಿ ದ್ವಿವೇದಿ, ಹಿರಿಯ ನಟ ದೊಡ್ಡಣ್ಣ ಮುಂತಾದ ಅನೇಕ ಕಲಾವಿದರು ಇತರ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

'ಜಯಶಂಕರ ಟಾಕೀಸ್? ಬ್ಯಾನರಿನಲ್ಲಿ ನಿರ್ಮಾಣವಾಗುತ್ತಿರುವ 'ಸರ್ಕಾರಿ ನ್ಯಾಯಬೆಲೆ ಅಂಗಡಿ? ಚಿತ್ರವನ್ನು ತೇಜು ಮೂರ್ತಿ ಮತ್ತು ಪದ್ಮಾವತಿ ಚಂದ್ರಶೇಖರ್ ಜಂಟಿಯಾಗಿ ನಿರ್ಮಾಣ ಮಾಡುತ್ತಿದ್ದಾರೆ. ಚಿತ್ರದ ಹಾಡುಗಳಿಗೆ ಅನಂತ್ ಆರ್ಯನ್ ಸಂಗೀತ ಸಂಯೋಜಿಸುತ್ತಿದ್ದಾರೆ. ಬಿ. ರಾಮಮೂರ್ತಿ ಕಥೆ, ಚಿತ್ರಕಥೆ ಮತ್ತು ಸಂಭಾಷಣೆಯಿರುವ 'ಸರ್ಕಾರಿ ನ್ಯಾಯಬೆಲೆ ಅಂಗಡಿ? ಚಿತ್ರಕ್ಕೆ ಸಾತ್ವಿಕ್ ಪವನ್ ಕುಮಾರ್ ಛಾಯಾಗ್ರಹಣ ಮತ್ತು ನಿರ್ದೇಶನ ಮಾಡುತ್ತಿದ್ದಾರೆ.

'ಸರ್ಕಾರಿ ನ್ಯಾಯಬೆಲೆ ಅಂಗಡಿ' ಚಿತ್ರದ ಶೀರ್ಷಿಕೆ ಗೀತೆ ಬಿಡುಗಡೆ ಸಂದರ್ಭದಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಖಾತೆ ಸಚಿವ ಕೆ. ಹೆಚ್. ಮುನಿಯಪ್ಪ, ನಿರ್ಮಾಪಕರಾದ ಭಾ. ಮ. ಹರೀಶ್, ಭಾ. ಮ. ಗಿರೀಶ್, ಚೆಲುವ ಮೂರ್ತಿ, 'ಕರ್ನಾಟಕ ರಾಜ್ಯ ಪಡಿತರ ಸಂಘ'ದ ಅಧ್ಯಕ್ಷ ಕೃಷ್ಣಪ್ಪ ಸೇರಿದಂತೆ ಚಿತ್ರರಂಗ ಮತ್ತು ರಾಜಕೀಯರಂಗದ ಅನೇಕ ಗಣ್ಯರು ಹಾಜರಿದ್ದರು.

ಅಂದಹಾಗೆ, ಸುಮಾರು 52 ದಿನಗಳ ಕಾಲ ಮಂಡ್ಯ ಸುತ್ತಮುತ್ತಲಿನ ಸ್ಥಳಗಳಲ್ಲಿ 'ಸರ್ಕಾರಿ ನ್ಯಾಯಬೆಲೆ ಅಂಗಡಿ' ಚಿತ್ರದ ಚಿತ್ರೀಕರಣ ಮಾಡಲಾಗಿದೆ. ಸದ್ಯ ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನು ಮುಗಿಸಿರುವ ಚಿತ್ರ ತಂಡ, ಶ್ರೀಘ್ರದಲ್ಲೇ 'ಸರ್ಕಾರಿ ನ್ಯಾಯಬೆಲೆ ಅಂಗಡಿ' ಸಿನಿಮಾವನ್ನು ಪ್ರೇಕ್ಷಕರ ಮುಂದೆ ಬರುವ ತಯಾರಿಯಲ್ಲಿದೆ. ಕನ್ನಡದ ಜೊತೆಗೆ ದೇಶದ ಇತರ ಭಾಷೆಗಳಲ್ಲೂ ಈ ಸಿನಿಮಾವನ್ನು ತೆರೆಗೆ ತರುವ ಯೋಚನೆಯಲ್ಲಿದೆ ಚಿತ್ರತಂಡ.

## ಬೆಂಗಳೂರಿನಲ್ಲಿ 'ಡಕಾಯತ್' ಸಿನಿಮಾತಂಡ

ತೆಲುಗು ಸ್ಟಾರ್ ಅಡವಿ ಶೇಷ್ ಮತ್ತು ಮೃಣಾಲ್ ಠಾಕೂರ್ ಅಭಿನಯದ ತೆಲುಗು ಚಿತ್ರ ?ಡಕಾಯತ್?, ಏಪ್ರಿಲ್ 10ರಂದು ಜಗತ್ತಿನಾದ್ಯಂತ ಬಿಡುಗಡೆಯಾಗಿದೆ. ಹಿಂದಿ ಹಾಗೂ ತೆಲುಗು ಭಾಷೆಯಲ್ಲಿ ಬಿಡುಗಡೆ ಆಗಿರೋ ಡಕಾಯತ್ ಸಿನಿಮಾ ಎಲ್ಲೆಡೆ ಉತ್ತಮ ಪ್ರತಿಕ್ರಿಯೆ ಪಡೆದುಕೊಂಡಿದೆ.. ಚಿತ್ರದ ಪ್ರಚಾರಕ್ಕಾಗಿ ಅಡವಿ ಶೇಷ್ ಮತ್ತು ಅನುರಾಗ್ ಕಶ್ಯಪ್, ಶನಿವಾರ ಬೆಂಗಳೂರಿಗೆ ಬಂದಿದ್ದರು.

ನಟ, ನಿರ್ದೇಶಕ, ನಿರ್ಮಾಪಕ ಅನುರಾಗ್ ಕಶ್ಯಪ್ ಮಾತನಾಡಿ ?ಈಗ ನಾನು ಬೆಂಗಳೂರಿನವನೇ..ನನ್ನನ್ನು ಸ್ವಾಗತ ಮಾಡುವ ಅವಶ್ಯಕತೆ ಇಲ್ಲ? ಎಂದರು.. ಡಕಾಯತ್ ಸಿನಿಮಾ 50 ಕೋಟಿ ಕಲೆಕ್ಷನ್ ಮಾಡಿದೆ ಟ್ರೇಲರ್ ನೋಡಿದ್ರೆ ಮಾಸ್ ಸಿನಿಮಾ ಅನ್ಸುತ್ತೆ ಆದ್ರೆ ಇದೊಂದು ಒಳ್ಳೆ ಲವ್ ಸ್ಟೋರಿ ಸಿನಿಮಾ , ಬೆಂಗಳೂರಿನ ಜನತೆ ಸಿನಿಮಾ ನೋಡಿ ಮೆಚ್ಚಿಕೊಂಡಿದ್ದೀರ ನಮಗೆ ಖುಷಿ ಇದೆ ಎಂದರು. ನಂತರ ಜಿಟಿ ಮಾಲ್ ನಲ್ಲಿ ಸಿನಿಮಾ ನೋಡಲು ಬಂದ ಜನರನ್ನ ಅಡವಿ ಶೇಷ್ ಹಾಗೂ ಅನುರಾಗ್ ಕಶ್ಯಪ್ ಬೇಟಿ ಮಾಡಿ ಖುಷಿ ಪಟ್ಟರು...ಡಕಾಯತ್ ಚಿತ್ರದಲ್ಲಿ ಅಡವಿ ಶೇಷ್, ಮೃಣಾಲ್ ಠಾಕೂರ್, ಅನುರಾಗ್ ಕಶ್ಯಪ್, ಪ್ರಕಾಶ್ ರಾಜ್, ಸುನೀಲ್, ಅತುಲ್ ಕುಲಕರ್ಣಿ ಮುಂತಾದವರು ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದು, ಶನೀಲ್ ಡಿಯೋ ನಿರ್ದೇಶನ ಮಾಡಿದ್ದಾರೆ




ಚಿತ್ರ ಯಶಸ್ವಿಯಾಗಿ ಪ್ರದರ್ಶನ ಕಾಣುತ್ತಿರುವುದಕ್ಕೆ ಪ್ರೇಕ್ಷಕರಿಗೆ ಧನ್ಯವಾದಗಳನ್ನು ತಿಳಿಸುತ್ತಲೇ, ಚಿತ್ರವನ್ನು ಪ್ರಚಾರ ಮಾಡಿದರು.

ತಮ್ಮ ಪ್ರತಿ ಸಿನಿಮಾಗೂ ಕನ್ನಡಿಗರು ಸಪೋರ್ಟ್ ಮಾಡಿದ್ದು ತಾವು ಅಭಿನಯದ ಬಹುತೇಕ ಸಿನಿಮಾದ ಪ್ರಚಾರವನ್ನ ಬೆಂಗಳೂರಿನಲ್ಲಿ ಮಾಡಿರುವುದಾಗಿ ಅಡವಿ ಶೇಷ್ ಖುಷಿಯಿಂದ ಹೇಳಿಕೊಂಡರು , ಇನ್ನು ಬೆಂಗಳೂರಿನ ರಾಮೇಶ್ವರಂ ಕೆಫೆಯಲ್ಲಿ ತಿಂಡಿ ಸವಿದು ಅಭಿಮಾನಿಗಳ ಜೊತೆ ಒಂದಿಷ್ಟು ಸಮಯ ಕಾಲ ಕಳೆದರು..ಅದಾದ ನಂತರ ಸುದ್ದಿಗೋಷ್ಟಿ ಮಾಡಿ ಮಾಧ್ಯಮದ ಮೂಲಕ ಸಿನಿಮಾ ನೋಡಿ ಸಪೋರ್ಟ್ ಮಾಡಿದ ಪೇಕ್ಷಕರಿಗೆ ಧನ್ಯವಾದ

## AI ತಂತ್ರಜ್ಞಾನದಲ್ಲಿ ಮೂಡಿಬಂದಿರುವ ರಾಣಿ ಚೆನ್ನಮ್ಮ ಚಿತ್ರದ ಟೀಸರ್ ಬಿಡುಗಡೆ

ಕೃತಕ ಬುದ್ಧಿಮತ್ತೆ (AI) ತಂತ್ರಜ್ಞಾನವನ್ನು ಸೃಜನಾತ್ಮಕವಾಗಿ ಬಳಸಿಕೊಂಡು ನಿರ್ಮಿಸಲಾಗಿರುವ ಐತಿಹಾಸಿಕ ಚಿತ್ರ ರಾಣಿ ಚೆನ್ನಮ್ಮ?. ಈ ಚಿತ್ರದ ಟೀಸರ್ ಇತ್ತೀಚೆಗೆ ಬಿಡುಗಡೆಯಾಗಿದೆ. ಕಿತ್ತೂರಿನ ಗರ್ವ, ಧೈರ್ಯ, ಹೆಮ್ಮೆ ಮತ್ತು ಸ್ವಾಭಿಮಾನದ ಪ್ರತೀಕವಾದ ರಾಣಿ ಚೆನ್ನಮ್ಮ ಅವರ ಜೀವನಗಾಥೆಯನ್ನು ಆಧರಿಸಿದ ಈ ಚಿತ್ರವು, ಇತಿಹಾಸ ವನ್ನು ಆಧುನಿಕ ತಂತ್ರಜ್ಞಾನದ ಮೂಲಕ ಪುನರ್ಜೀವಗೊಳಿಸುವ ಮಹತ್ವಾಕಾಂಕ್ಷೆಯ ಪ್ರಯತ್ನವಾಗಿದೆ. "ಕಿತ್ತೂರಿನ ಗತ್ತು ? ದೇಶಕ್ಕೆ ಗೊತ್ತು? ಎಂಬ ಅಡಿಬರಹ ಈ ಚಿತ್ರಕ್ಕಿದೆ. ಕೇವಲ ಕಥೆಯನ್ನು ಹೇಳುವುದಲ್ಲ. ಇದು ಇತಿಹಾಸದ ಘರ್ಜನೆ, ಒಂದು ಪೀಳಿಗೆಯನ್ನು ಎಚ್ಚರಿಸುವ ಕೂಗು ಎಂದರೆ ತಪ್ಪಾಗಲಾರದು

ಈ ಚಿತ್ರದ ಪ್ರಮುಖ ವೈಶಿಷ್ಟ್ಯವೆಂದರೆ, ಚಿತ್ರದಲ್ಲಿನ ದೃಶ್ಯ ವಿನ್ಯಾಸ, ಪಾತ್ರ ರೂಪಕ, ಯುದ್ಧದ ಸನ್ನಿವೇಶಗಳು ಸೇರಿದಂತೆ ಬಹುಪಾಲು ವಿಷುಯಲ್ ಅಂಶಗಳನ್ನು ಎಐ ತಂತ್ರಜ್ಞಾನದಿಂದ ರೂಪಿಸಲಾಗಿದೆ. ಕನ್ನಡ ಸಿನೆಮಾದಲ್ಲಿ ಇದು ಹೊಸ ಪ್ರಯೋಗವಾಗಿದ್ದು, ಭವಿಷ್ಯದ ಚಿತ್ರ ನಿರ್ಮಾಣಕ್ಕೆ ಹೊಸ ದಾರಿಯನ್ನು ತೆರೆದಿಡುವ ಉದ್ದೇಶ ಹೊಂದಿದೆ.

ವಿಶೇಷವಾಗಿ, ಈ ಚಿತ್ರದ ವೀಡಿಯೋ ನಿರ್ಮಾಣದಲ್ಲಿ ಎಐ ತಂತ್ರಜ್ಞಾನವನ್ನು ಬಳಸಲಾಗಿದ್ದು, ಆಡಿಯೋ ಪ್ರೊಡಕ್ಷನ್ ಸಂಪೂರ್ಣವಾಗಿ ಮ್ಯಾನುಯಲ್ ರೀತಿಯಲ್ಲಿರುತ್ತದೆ. ಇದರಿಂದ ತಂತ್ರಜ್ಞಾನ ಮತ್ತು ಮಾನವ ಸೃಜನಶೀಲತೆಯ ಸಮತೋಲನವನ್ನು ಸಾಧಿಸಲಾಗಿದೆ. ಈ ಚಿತ್ರದಲ್ಲಿ ಎಐ ಕ್ರಿಯೇಟಿವ್ ತಂಡಗಳು ಸಹ ಸಕ್ರಿಯವಾಗಿ ಕೆಲಸ ಮಾಡುತ್ತಿದ್ದು, ದೃಶ್ಯ ವೈಭವಕ್ಕೆ ಹೊಸ ಮಟ್ಟವನ್ನು ತಂದಿವೆ. ಚಿತ್ರದ ನಿರ್ದೇಶನವನ್ನು ಶ್ವೇತಾ ಶೆಟ್ಟಿ ವಹಿಸಿಕೊಂಡಿದ್ದಾರೆ. ಲತಾ ಜೈಪ್ರಕಾಶ್ ಬಿಎಂಕೆ ಪ್ರೊಡಕ್ಷನ್ ಅಡಿಯಲ್ಲಿ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ . ಸಂಕಲನವನ್ನು ಸಂಜೀವ್ ರೆಡ್ಡಿ ನಿರ್ವಹಿಸಿದ್ದು, ಸಂಗೀತವನ್ನು ಶ್ರೀಹರಿ ನೀಡಿದ್ದಾರೆ. ಹಾಡುಗಳನ್ನು ಶಿವನಂಜೆಗೌಡ ಮತ್ತು ಡಾ॥ ವಿ.ನಾಗೇಂದ್ರ ಪ್ರಸಾದ್ ರಚಿಸಿದ್ದಾರೆ.

ಈ ಚಿತ್ರವು ಕೇವಲ ಐತಿಹಾಸಿಕ ಘಟನೆಗಳ ಪುನರ್‌ಸೃಷ್ಟಿ ಮಾತ್ರವಲ್ಲ .ಇದು ಬ್ರಿಟಿಷರ ವಿರುದ್ಧ ಧ್ವನಿ ಎತ್ತಿದ ಭಾರತದ ಮೊದಲನೇ ಮಹಿಳೆಯ ಮನೋಬಲ, ನಾಯಕತ್ವ ಮತ್ತು ಸ್ವಾತಂತ್ರ್ಯದ ಆಕಾಂಕ್ಷೆಯ ಚಿತ್ರಣವನ್ನು ಕಟ್ಟಿಕೊಡುತ್ತದೆ. ಬ್ರಿಟಿಷ್ ಆಳ್ವಿಕೆಯ ವಿರುದ್ಧ ಧೈರ್ಯವಾಗಿ ನಿಂತ ರಾಣಿ ಚೆನ್ನಮ್ಮ ಅವರ ಹೋರಾಟವು ಇಂದಿಗೂ ಪ್ರೇರಣೆಯಾಗಿದ್ದು, ಈ ಚಿತ್ರವು ಹೊಸ ತಂತ್ರಜ್ಞಾನದ ಮೂಲಕ ಜೀವಂತಗೊಳಿಸುತ್ತದೆ.





## ಗಣೇಶ ಸಿನಿ ಜರ್ನಿಗೆ 20




ಗಣೇಶ ನಟಿಸಿದ್ದ ಮೊದಲ ಚಿತ್ರ "ಚೆಲ್ಲಾಟ" ಬಿಡುಗಡೆಯಾಗಿ ಏಪ್ರಿಲ್ 21ಕ್ಕೆ ಇಪ್ಪತ್ತು ವರ್ಷಗಳಾಗಿದೆ. ಎಂ.ಡಿ.ಶ್ರೀಧರ್ ಈ ಚಿತ್ರವನ್ನು ನಿರ್ದೇಶಿಸಿದ್ದರು. . ಅದೇ ವರ್ಷ ಗಣೇಶ್ ಅಭಿನಯದ ಕನ್ನಡದ ಸರ್ವಕಾಲಿಕ ಸೂಪರ್ ಹಿಟ್ ಚಿತ್ರ "ಮುಂಗಾರು ಮಳೆ" ಸಹ ಬಿಡುಗಡೆಯಾಗಿ, ಭರ್ಜರಿ ಯಶಸ್ಸು ಕಂಡಿತ್ತು. ಆನಂತರ "ಗಾಳಿಪಟ", " ಚೆಲುವಿನ ಚಿತ್ತಾರ", "ಕೃಷ್ಣ" ದಿಂದ ಹಿಡಿದು ಇತ್ತೀಚೆಗೆ ತೆರೆಕಂಡ "ಕೃಷ್ಣಂ ಪ್ರಣಯ ಸಖಿ"ವರೆಗೂ ಸಾಕಷ್ಟು ಹಿಟ್ ಚಿತ್ರಗಳ ಮೂಲಕ ಅಭಿಮಾನಿಗಳನ್ನು ಗಣೇಶ್ ತಮ್ಮ ಅಮೋಘ ಅಭಿನಯದಿಂದ ರಂಜಿಸಿದ್ದಾರೆ. ಗಣೇಶ್ ನಾಯಕರಾಗಿ ಇಪ್ಪತ್ತು ವರ್ಷಗಳು ಪೂರೈಸಿರುವ ಈ ಸಂದರ್ಭದಲ್ಲಿ ಅವರ ಅಭಿಮಾನಿಗಳು ಮೆಚ್ಚಿನ ನಾಯಕನಿಗೆ ವಿಶೇಷ ಅಭಿನಂದನೆಗಳನ್ನು ತಿಳಿಸಿದ್ದಾರೆ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,